# ಅಪರಂಜಿ

ತಿಳಿನಗೆಯ ಕಾರಂಜಿ

ಅಕ್ಟೋಬರ್ 2016

## ಅಲ್ಲಿ ಪನ್ನೀರು ಇಲ್ಲಿ ಕಣ್ಣೀರು





# ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ 34
ಸಂಚಿಕೆ - 1
ಅಕ್ಟೋಬರ್ - 2016

**ಸಂಪಾದಕ ಮಂಡಳಿ**

**ಸಂಪಾದಕರು**
ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**
ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**
ಶ್ರೀ ಎಂ. ಶಿವಕುಮಾರ್

**ಟ್ರಸ್ಟಿಗಳು**
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ವಿ.ಆರ್. ನಾಥ್
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ:ರೂ. 750/-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳಿಸಿ.
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.

## *ಈ ಸಂಚಿಕೆಯಲ್ಲಿ .....*

| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ನಮ್ಮ ನಿಮ್ಮಲ್ಲಿ | **ಶಿವಕುಮಾರ್** | 3 |
| ಹೇಳಿದ್ದು ಸುಳ್ಳಾಗಲಿಲ್ಲ! | **ರುಕ್ಮಿಣಿಮಾಲಾ** | 8 |
| ಖಡ್ಡೋಗಿ ಗುಡ್ಡಾಡ್ತು | **ರಾಧಾ ಶಾಮರಾವ** | 9 |
| ನಗಬೇಡಿ | **ಹರಿಪ್ರಸಾದ್ ಎ.ಆರ್.** | 11 |
| ಗಂಡ ಹೆಂಡತಿ ಜಗಳ | **ಗಾಯತ್ರಿ ಮೂರ್ತಿ** | 14 |
| ಸೊಳ್ಳೆ ಸ್ವಗತ | **ನಂನಾಗ್ರಾಜ್** | 19 |
| ಸಾತ್ವಿಕ ಮತ್ತು ಸೇಡು | **ಎಚ್. ಗೋಪಾಲಕೃಷ್ಣ** | 22 |
| ಆಸ್ತಿಯ ಲೆಕ್ಕ | **ಬೇಲೂರು ರಾಮಮೂರ್ತಿ** | 27 |
| ತುಂತುರು | **ದಂನಾಳ** | 30 |
| ಒಂದು ನೀತಿ ಕಥೆ | **ಸಿ.ಆರ್. ಸತ್ಯ** | 31 |
| ನೇಮ್‌ಮಾಯಣ | **ಡಾ. ವಿಜಯ್ ಕುಮಾರ್** | 33 |
| ಕಟೌಟ್‌ಗೆ ಕಂಬಳಿ | **ಎಂ.ಕೆ. ಭಾಸ್ಕರ ರಾವ್** | 39 |

**ಮುಖಪುಟ ವ್ಯಂಗ್ಯಚಿತ್ರ - ಗುಜ್ಜಾರ್**

ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanji42@hotmail.com

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: beluruRamamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



ಜೆ.ಡಿ.ಎಸ್.ಗೆ ಮೇಯರ್ ಸ್ಥಾನ ಬಿಟ್ಟುಕೊಡುವವರೊಂದಿಗೆ ಮೈತ್ರಿ – ಹೇಳಿಕೆ

***● (ಅ)ಪವಿತ್ರ ಮೈತ್ರಿ !!***

★★★

ಆರ್.ಬಿ.ಐ.ಗೆ ಸ್ವಾತಂತ್ರ ಅಗತ್ಯ – ಶ್ರೀ ರಾಜನ್

***● ಅರಣ್ಯ ರೋದನ ಅಂದರೆ ಇದೇ !!***

★★★

ಗಣೇಶೋತ್ಸವ; 12 ಮಂದಿ ಗಡೀಪಾರು – ಬಾಗಲಕೋಟೆ ಸುದ್ದಿ

***● ಅವರಿಗೆ ಗಣಪನ ಕೃಪೆ ದಕ್ಕಲಿಲ್ಲ !!***

★★★

ಸೇನಾ ನೆಲೆ ಬಳಕೆಗೆ ಭಾರತ – ಅಮೆರಿಕ ಒಪ್ಪಂದ – ಸುದ್ದಿ

***● ಜವಹರಲಾಲ್ ಕುಪಿತರಾದರಂತೆ !!***

★★★

ಈರುಳ್ಳಿಗೆ ಉತ್ತೇಜನ ಮಾರ್ಗಕ್ಕೆ ಸಲಹೆ – ಸುದ್ದಿ

***● ಅಲ್ಲಿಯವರೆಗೆ ರೈತರು ಕಣ್ಣೀರು ಸುರಿಸುವರೆ ?!***

★★★

ರಾಜಾ ಕಾಲುವೆ ಒತ್ತುವರಿ; ಬಡವರಿಗೂ ಶ್ರೀಮಂತರಿಗೂ ತಾರತಮ್ಯವಿಲ್ಲ – ಹೇಳಿಕೆ

***● ಬಡವರಿಗೆ ತಾರಮ್ಮಯ್ಯ ಆಗದಿದ್ದರೆ ಸಾಕು !!***

★★★

ಪುದುಚೇರಿಯಿಂದಲೂ ಕಾವೇರಿ ನೀರಿಗೆ ಬೇಡಿಕೆ – ಸುದ್ದಿ

***● ದುರ್ಭಿಕ್ಷದಲ್ಲಿ ಅಧಿಕಮಾಸ !?***

★★★

'ಸರಿಯಾಗಿ ಆಡಳಿತ ನಡೆಸುವುದನ್ನು ಕಲಿಯಿರಿ' – ಜಯಲಲಿತಾಗೆ ಸುಪ್ರೀಂ ಕೋರ್ಟ್ ಸಲಹೆ

***● ಗೋರ್ಕಲ್ಲ ಮೇಲೆ (ಕಾವೇರಿ) ನೀರು ಸುರಿದಂತೆ !!***

★★★

# ನಂಜುಂಡುಲಿಂಗು ಮತ್ತು ಬೆಟ್ಟದಚೆಲುವೆ

ಇದೊಂದು ಅಪೂರ್ವವಾದ ಮಂಟೇಸ್ವಾಮಿ ಜಾನಪದ ಕಾವ್ಯ. ಇದರಲ್ಲಿನ ದೇವ, ದೇವತೆಗಳ ಪಾತ್ರಗಳೆಲ್ಲಾ ಹುಲುಮಾನವರಂತೆ ನಡೆದುಕೊಳ್ಳುವುದನ್ನು ನೋಡುವುದೇ ಒಂದು ಮೋಜಿನ ವಿಷಯ. ಇಲ್ಲಿ, ದೇವರುಗಳು ತಮ್ಮ ಸಹಜಗಾಂಭೀರ್ಯವನ್ನು ಬಿಟ್ಟು, ಸಮಾಜದ ಕಟ್ಟಳೆಗಳಿಗೆ ಕವಡೆ ಕಾಸಿನ ಬೆಲೆಕೊಡದೆ, ಸ್ವಚ್ಛಂದವಾಗಿ ಪ್ರೇಮಿಸಿ ಜಗಳವಾಡಿ, ಬಾಯಿತುಂಬಾ ಶಪಿಸಿಬಿಡುತ್ತಾರೆ. ಇಲ್ಲಿನ ಭಾಷೆ ಚಾಮರಾಜನಗರದ ಕಡೆಯ ಸೊಗಡಿನ ಗ್ರಾಮ್ಯ ಕನ್ನಡ. ಹೇಳುವ ಶೈಲಿಯಲ್ಲಿ, ಸುಶ್ರಾವ್ಯ ಕಾವ್ಯ, ನಾಟಕೀಯ ಸಂಭಾಷಣೆ ಮತ್ತು ಸೂತ್ರಧಾರನ ಕಥಾ ನಿರೂಪಣೆ ಇವೆಲ್ಲಾ ಸರಿಯಾದ ಹದದಲ್ಲಿ ಮೇಳೈಸಿದ್ದು ಕೇಳುಗರಿಗೆ ಒಂದು ಕಿನ್ನರ ಲೋಕವನ್ನೇ ಸೃಷ್ಟಿಸಿಬಿಡುತ್ತದೆ. ಈ ಜಾನಪದ ಕಲೆಯನ್ನು ಇಲ್ಲಿನ ತನಕ ಉಳಿಸಿಕೊಂಡು ಬಂದಿರುವವರು ಚಾಮರಾಜನಗರದ ನೀಲಗಾರರು. ಮೂರು ಘಂಟೆಗಳ ಕಾಲ ನಡೆಯುವ ಈ ಕಥಾಪ್ರಸಂಗವನ್ನು ನನಗೆ ಪರಿಚಯಿಸಿದ್ದು, ವಾಣಿ ಮತ್ತು ಸುರೇಶ್ ದಂಪತಿಗಳು. ವಾಣಿಯ ಆಪ್ತ ಗೆಳೆಯರೊಬ್ಬರು, ಬಹು ಶ್ರಮಪಟ್ಟು ಚಾಮರಾಜನಗರಕ್ಕೆ ಹೋಗಿ, ಅಲ್ಲಿ ರೆಕಾರ್ಡ್ ಮಾಡಿಕೊಂಡು ಬಂದಿರುವ ಈ ಕಥೆಯನ್ನು ಮೊನ್ನೆ ಸಂಜೆ ಕೇಳಿದ ಮೇಲೆ ಈ ಅಪರೂಪವಾದ ಅನುಭವದ ಹಲವು ತುಣುಕುಗಳನ್ನು ನಿಮಗೆ ಪರಿಚಯಿಸಲು ನಿರ್ಧರಿಸಿದೆ. ಒಪ್ಪಿಸಿಕೊಳ್ಳಿ.

ಎಲ್ಲ ಜಾನಪದ ಕಾವ್ಯಗಳಂತೆ ಇದೂ ಸಹಾ ವಿಘ್ನೇಶ್ವರನ ಪ್ರಾರ್ಥನೆಯೊಂದಿಗೆ ಶುರುವಾಗುತ್ತದೆ.

ಗಜಮುಕನೆ ಗರ್ವ ಸ್ರೀಗಣನಾಥ ಽಽ
{ಪಕ್ಕದವನ ಸಾಥ್... ಅವದೂ (ಹೌದೂ)}
ಇಲಿಯ ವಾನವನೇರಿ ತ್ರಿಲೋಕ ಸಂಚರಿಪ ಸ್ರೀಗೌರಿ ಪುತ್ರ
ಸಿವನಕುಮಾರ ವಿಜದಾಯಕ ಕೊಡು ಎನಗೆ ಮತಿಯ
ನಿನ ಪಾದಚರಣಗಳಿಗೆ ಮೊದಲು ಸರಣು ಸರಣಯ್ಯ ಽಽಽ
ಸರಣು ಸರಣಯ್ಯ ಸರಣು ಸರಣಯ್ಯ ಶಂಕರಾ....
ತಂದನ್ನ ತಾನನಾ ತಂದನ್ನ ತಂದೇನಾನಾ ಽಽಽ
ತಂದನ್ನ ತಾನನ್ನೋ ಸ್ವಾಮೀ ನಂಜುಂಡುಲಿಂಗುಽಽಽ

ಇನ್ನು ಕತೆಯ ಪ್ರಾರಂಭ. ಕತೆಯ ಹಂದರ ಬಹು ಸರಳ. ಮೈಸೂರಿನಲ್ಲಿ ಮಹಿಷಾಸುರನ ಹಾವಳಿ ಮಿತಿ ಮೀರಿರುತ್ತದೆ. ಇದನ್ನು ಪರಿಹರಿಸಲು ಬ್ರಹ್ಮ ವಿಷ್ಣು ಮಹೇಶ್ವರರು ಸುಣ್ಣಕಲ್ಲಿನ ತೋಪಿನಲ್ಲಿ ಸಭೆ ಸೇರುತ್ತಾರೆ. ಹೆಣ್ಣಿನಿಂದಲೇ ಅವನ ವಧೆ ಸಾಧ್ಯ ಎಂಬ ನಿರ್ಧಾರಕ್ಕೆ ಬಂದು ಮೊದಲು ಮಹಾಲಕ್ಷ್ಮಿಯನ್ನು ಕೇಳುತ್ತಾರೆ. ಆಕೆ ನಯವಾಗಿ ನಿರಾಕರಿಸಿದ ನಂತರ ಶಾರದಾಂಬೆಯ ಸರದಿ. ಆಕೆ ಕೂಡ ಒಪ್ಪದಿದ್ದಾಗ ಕೊನೆಗೆ ಪಾರ್ವತಿಯೇ ಗತಿ ಅಂತ ಅವಳ ಬಳಿ ಸಾಗುತ್ತಾರೆ. ಅವಳು ಮಹಿಷಾಸುರನೊಂದಿಗೆ ಕಾದಾಡಲು ಒಪ್ಪಿ ''ನಿಮ್ಮ ಆಯುದ

ಎಲ್ಲಾವ ನನ್ಗೇ ಕೊಟ್ಬುಡಿ'' ಅಂತ ಹೇಳಿ ಶಿವನ ತ್ರಿಶೂಲ ಇತ್ಯಾದಿಗಳನ್ನು ಪಡೆದು ಚಾಮುಂಡಿ ಮಹಿಶಾಸುರನೊಡನೆ ಕಾದಾಡಲು ತೆರಳುತ್ತಾಳೆ.

ಕ್ಷೀರಸಾಗರ ಮಥನದಲ್ಲಿ ಮೊದಲು ಉಕ್ಕಿಬಂದ ಹಾಲಾಹಲವನ್ನು ಶಿವ ಕುಡಿದು ವಿಷಕಂಠನಾಗಿ ನಂಜನಗೂಡಿಗೆ ಬಂದು ನೆಲಸುತ್ತಾನೆ. ವಿಷಕಂಠ ಒಬ್ಬನೇ ಇರುವುದನ್ನು ಕಂಡ ದೇವೇಂದ್ರ ತನ್ನ ಇಬ್ಬರು ಮಕ್ಕಳಾದ ದೇವೀರಮ್ಮ ಮತ್ತು ಸೋಮಾಜಮ್ಮ ಇವರುಗಳನ್ನು ಅವನಿಗೆ ಮದುವೆ ಮಾಡಿಸಿಬಿಡುತ್ತಾನೆ.

ಪಾರ್ವತಿಯು ಬೆಟ್ಟದ ಮೇಲೆ ನಿಂತು ಚಾಮುಂಡೇಶ್ವರಿಯ ರೂಪವನ್ನು ತಳೆದು ರಾಕ್ಷಸನ ಸಂಹಾರಕ್ಕೆ ಹೊರಡುತ್ತಾಳೆ. ಚಾಮುಂಡಿ ಮುಗಿಲಿನ ಮೇಲೆ ನಿಂತು ಮಹಿಷಾಸುರನೊಂದಿಗೆ ಶೌರ್ಯದಿಂದ ಯುದ್ಧ ಮಾಡಿದಾಗ, ಆ ರಾಕ್ಷಸನ ಪ್ರತಿಯೊಂದು ರಕ್ತದ ಹನಿ ನೆಲಕ್ಕೆ ಬಿದ್ದ ತಕ್ಷಣ ಅದರಿಂದ ಸಾವಿರ ರಾಕ್ಷಸರು ಹುಟ್ಟುತ್ತಿರುತ್ತಾರೆ. ಚಾಮುಂಡಿಗೆ ಆಯಾಸದಿಂದ ಬೆವರು ಧಾರಾಕಾರವಾಗಿ ಸುರಿಯುತ್ತದೆ. ಆ ಬೆವರಿನಿಂದ ಉತ್ನಳ್ಳಿ ಮಾರಮ್ಮ (ಉರಿಕಾತಿ) ಎಂಬ ದೇವತೆ ಹುಟ್ಟುತ್ತಾಳೆ. ಈ ಉರಿಕಾತಿಗೆ ತನ್ನ ಅಕ್ಕನ ಬವಣೆ ಕಂಡು ಮರುಕವಾಗಿ ಮಾಯಾ ಶಕ್ತಿಯಿಂದ ತನ್ನ ನಾಲಿಗೆಯನ್ನು ಬೆಟ್ಟದ ಸುತ್ತ ಹರಡಿಬಿಡುತ್ತಾಳೆ. ಮಹಿಷಾಸುರನ ರಕ್ತವೆಲ್ಲಾ ಆಕೆಯ ನಾಲಿಗೆಯ ಮೇಲೆ ಬಿದ್ದು ಹೊಸ ರಾಕ್ಷಸರು ಹುಟ್ಟುವುದು ನಿಲ್ಲುತ್ತದೆ. ಚಾಮುಂಡಿ ಮಹಿಷಾಸುರನ ಸಂಹಾರವನ್ನು ಮಾಡಿ ಮಹಾರಾಜರಿಂದ ಬೆಟ್ಟದ ಮೇಲೆ ಗುಡಿಗೋಪುರ ಕಟ್ಟಿಸಿಕೊಂಡು ಅಲ್ಲಿ ನೆಲಸಿಬಿಡುತ್ತಾಳೆ. ರಾಕ್ಷಸ ಸಂಹಾರದಿಂದ ಚಾಮುಂಡಿಯ ಮೈ, ಕೈ ಮತ್ತು ಆಯುಧಗಳು ರಕ್ತದಿಂದ ತೊಯ್ದುಹೋಗಿರುತ್ತವೆ. ಆಯುಧಗಳನ್ನು ತೊಳೆದು ಸ್ನಾನ ಮಾಡುವ ಸಲುವಾಗಿ ಚಾಮುಂಡಿ ನಿಶಿರಾತ್ರಿಯಲ್ಲಿ ಕಬಿನಿ ನದಿಗೆ ಬಂದು ಸ್ನಾನಕ್ಕೆ ಇಳಿಯುತ್ತಾಳೆ.

ಅದೇ ಸಮಯದಲ್ಲಿ ನಂಜುಂಡನಿಗೆ ತನ್ನ ಪೂರ್ವಜನ್ಮದ ನೆನಪಾಗಿ ಮಹಿಷಾಸುರನೊಂದಿಗೆ ಕಾದಾಡಲು ಹೋದ ಪಾರ್ವತಿ ಹೇಗಿರುವಳೋ ಎಂಬ ಚಿಂತೆಯಿಂದ ನಿಶಿರಾತ್ರೆಯಲ್ಲಿ ಎಚ್ಚರವಾಗಿ ಕಬಿನಿಯತ್ತ ಬರುತ್ತಾನೆ. ನದಿಯ ನೀರೆಲ್ಲಾ ಕೆಂಪಾಗಿ ಹರಿಯುತ್ತಿರುವುದನ್ನು ಕಂಡು ನದಿಯ ಮೇಲು ದಂಡೆಯಲ್ಲಿರುವ ತನ್ನ ಬಸವಣ್ಣನಿಗೆ ಅಪಾಯವಾಗಿದೆಯೇನೋ ಎಂದು ಚಿಂತಿಸುತ್ತಾ ನದಿಯ ಪಕ್ಕದಲ್ಲೇ ನಡೆದು ಬಂದಾಗ ಜಳಕ ಮಾಡುತ್ತಿರುವ ಚಾಮುಂಡಿ ಕಾಣಿಸುತ್ತಾಳೆ. ಹದಿನಾರರ ಯೌವ್ವನದ ಆ ಚೆಲುವೆಯನ್ನು ನೋಡಿ ನಂಜುಂಡ ಅವಳನ್ನು ಮೋಹಿಸುತ್ತಾನೆ.

ಚಾಮುಂಡಿಯೂ ಅವನಿಗೆ ಮನಸೋತು ಇಬ್ಬರೂ ಒಂದುಗೂಡುತ್ತಾರೆ. ಅನಂತರ ಇನ್ನು ಒಂದು ತಿಂಗಳಲ್ಲಿ ಅವಳನ್ನು ಬಂದು ಕಾಣುವೆನೆಂದು ಹೇಳಿ ಅವಳನ್ನು ಬೀಳ್ಕೊಟ್ಟು ನಂಜುಂಡ ಗುಡಿಗೆ ಬಂದುಬಿಡುತ್ತಾನೆ. ಇವನ ಈ ಕಳ್ಳ ವ್ಯವಹಾರದ ಸುಳಿವು ದೇವೀರಮ್ಮ ಮತ್ತು ಸೋಮಾಜಮ್ಮರಿಗೆ ತಿಳಿದುಬಿಡುತ್ತದೆ. ದೇವೀರಮ್ಮ ತನ್ನ ತಮ್ಮ ಶೇಷನಾಗನಿಗೆ ಹೇಳಿ ಗಂಡನಮೇಲೆ ಸರ್ಪಕಾವಲು ಇರಿಸುತ್ತಾಳೆ.

ಒಂದು ತಿಂಗಳ ನಂತರ ತನ್ನ ನಂಜುಂಡ ಬರದಿದ್ದುದನ್ನು ಕಂಡು ಚಾಮುಂಡಿ ವಿಹ್ವಲೆಯಾಗಿ ತನ್ನ ತಂಗಿ ಉರಿಕಾತಿಯನ್ನು ಕರೆದು ''ನಂಜನಗೂಡಿಗೆ ಹೋಗಿ ನಿನ್ನ ಭಾವನನ್ನು ಕರೆದುಕೊಂಡು ಬಾ'' ಎಂದು ಬೇಡುತ್ತಾಳೆ. ಉರಿಕಾತಿಗೆ ಆಶ್ಚರ್ಯ! ಅಕ್ಕನಿಗೆ ಮದುವೆಯಾದದ್ದೇ ಅವಳಿಗೆ ತಿಳೀದು.

ಅವಳು ಅಕ್ಕನನ್ನು ಪ್ರಶ್ನಿಸುವ ರೀತಿ ನೋಡಿ. ಅಂದಿನ ಸಮಾಜದಲ್ಲಿ, ಮದುವೆಗಳು ನಡೆಯಬೇಕಾದಾಗ, ಆಗುತ್ತಿದ್ದ ತಯಾರಿಯ ಚಿತ್ರಣ ಕಣ್ಣಿಗೆ ಕಟ್ಟುವಂತೆ ಮೂಡಿಬಂದಿದೆ.

''ಅಕ್ಕಕ್ಕಾ ಚಾಮುಂಡಕ್ಕಾ ಇದೇನಕ್ಕಾ ಚಾಮುಂಡಕ್ಕಾ ಒಸಾ ಮಾತಾ ಆಡ್ತೀಯೇ
ಕೇಳಕ್ಕಾ ಚಾಮುಂಡಕ್ಕಾ ಕ್ಯೋಳ್ ಕೇಳು ಚಾಮುಂಡಕ್ಕಾ
ಮದುವ್ಯಾತಕ್ ಕಾಣಲಿಲ್ಲ? ಸೋಬನ್ಯಾತಕ್ ಕಾಣಲಿಲ್ಲ?
ಈಸ್ವರ ಬ್ರಹ್ಮಾ ಬಂದು ವಿಷ್ಣು ಮಾವಿಷ್ಣು ಬಂದು ಪಂಚಂಗ ಹೋದನಿಲ್ಲ
ವೀಳ್ಯಗಳ ತೀಡಾಲಿಲ್ಲ ಗಂಗಪ್ನೂರ್ಗಂಗಮ್ಮ ಬಂದು ಕಳಸಕ್ ರೆಡಿ ಮಡಗಾಲಿಲ್ಲ
ಸಾಸ್ತ್ರವ ಮಾಡಾಲಿಲ್ಲ ಒಕ್ಕಲಿಗುರ್ಮುದ್ದಯ್ಯ ಬಂದು ಸೀತಾಳ್‌ಚಪ್ಪರ ಹಾಕಾಲಿಲ್ಲ
ಒಲಾರು ಹಣ್ಣಯ್ಯ ಬಂದು ವಾದ್ಯಾವಾ ಮಾಡಲಿಲ್ಲ ಮಡಿವಾಳರ ಮಾಚಯ್ಯ
ಬಂದು ಮೇಲುಗಚ್ಚೆ ಕಟ್ಟಾಲಿಲ್ಲ
ಉಲಗೂರು ವೀರಯ್ಯ ಬಂದು ಹುಡುದಾರ ಕೊಡಾಲಿಲ್ಲ ಕುಂಬಾರ ಗುಂಡಯ್ಯ
ಬಂದು ಒಸಗಡಗ ಕೊಡಾಲಿಲ್ಲ
ನಡೆಮುಡಿ ಮೇಲ್ ನಡೆಯಾಲಿಲ್ಲ ಒಳಚರಿಗೆ ಓಗಲಿಲ್ಲ ಒಸ್ ಸೀರೆ ತರಾಲಿಲ್ಲ
ಮದುವ್ಯಾತಕ್ ಆಗಲಿಲ್ಲ
ಅಡಪದ ಹಪ್ಪಣ್ಣ ಬಂದು ಬಾಚಿಂಗ ಕೊಡಾಲಿಲ್ಲ ಲಕ್ಷ್ಮೀ ಸರಸೋತೀರು ಸಾಸ್ತ್ರವ
ಮಾಡಾಲಿಲ್ಲ
ಗಂಗಪ್ನೂರ್ಗಂಗಮ್ಮ ಬಂದು ಸೋಬಾನ ಏಳಲಿಲ್ಲ. ನಿನ ಸೀರೆ ಸೆರಗ ತೆಗೆದು ಅವುನ್
ಸೆರಗ್ಗೆ ಕಟ್ಟಾಲಿಲ್ಲ
ಅವನೊಲ್ಲಿ ಸೆರಗ ತೆಗೆದು ನಿನ ಸೆರಗ್ಗೆ ಕಟ್ಟಾಲಿಲ್ಲ ಅಸಮಣ ಪೂಜೆ ಮಾಡಲಿಲ್ಲ ಬಲ
ಬಳಸು ಎಳೆಯಾಲಿಲ್ಲ.
ಬೀದಿ ಬಿರುಡಗ ಮಾಡಲಿಲ್ಲ ಸಬದೋಸ್ತ ಮಾಡಾಲಿಲ್ಲ
ಇಲ್ಲಿಯವರಲ್ಗೋಗಾಲಿಲ್ಲ ಅಲ್ಲಿಯವರಿಲ್ಲೀಗ್ ಬರಾಲಿಲ್ಲ ಬೀಗರೂಟ ಹುಣ್ಣಾಲಿಲ್ಲ
ಬರಿ ಬರಿ ಬಾವಾನ್ನಕೆ ನನಗೆ ಬಾಳ ನಾಚಿಕೆಯವ್ವಾ
ಅಕ್ಕಾ, ನಡುಗಾಡು ನಂಜುಂಡೇಸ್ವರ ನಂಗೆ ಗಂಡ ನಿಂಗೆ ಬಾವ ಅಂತಿದ್ಯಲ್ಲಾ ಅಕ್ಕ
ಚಾಮುಂಡಕ್ಕ
ಅವ್ವಾ ನಿಂಗ್ಯಾಕೆ ಗಂಡನವ್ವಾ? ನಂಗ್ಯಾಕ್ ಬಾವನವ್ವಾ? ಅದು ಮಾರು ಮಾತ ಒಡೆದ್
ಏಳವ್ವಾ

ಎಂದು ತನ್ನ ಅಕ್ಕ ಚಾಮುಂಡಿಯನ್ನು ಕೇಳುತ್ತಾಳೆ ಉರಿಕಾತಿ. ಚಾಮುಂಡಿ ಅವಳನ್ನು ಕುರಿತು,

ಕಬಿನಿ ಕಾವೇರಿ ಒಳಗೆ
ನದೀ ಒಳಗೆ ಬಂದು ಬಿಟ್ಟು
ಕಲ್ಲನೇ ಹೊತ್ತೀಕೊಂಡು ಉಲ್ಲನೇ ಕಚ್ಚಿಕೊಂಡು
ಗಂಗಾ ಮುಟ್ ಸತ್ಯ ಮಾಡಿ ಲಿಂಗ ಮುಟ್ ಸತ್ಯಮಾಡಿ
ಕೇಳೆನ್ನ ಬೆಟ್ಟದವಳೇ, ಬೆಟ್ಟದ ಚಾಮುಂಡಿ

ಯಾರನ್ನೇ ಬಿಟ್ಟರೂ, ನಿನ್ನ ಚೆಂದುಳ್ಳಿ ಚೆಲುವಿSಯನ್ನ
ಬಿಡಲಾರೇಂತೇಳಿ ಅವನು ಅಗ್ರಾರ್ದಾ ಬೀದೀ ವಳಗೆ ಇಬ್ಬರೂವೇ ಜೋಡಿಯಾದ್ವು

ಎಂದು ಅವಳಿಗೆ ನಿಜಸಂಗತಿಯನ್ನು ತಿಳಿಸಿ ಅವಳನ್ನು ನಂಜನಗೂಡಿಗೆ ಕಳಿಸುತ್ತಾಳೆ. ಉರಿಕಾತಿ ಎಷ್ಟು ಕೂಗಿದರೂ ನಂಜುಂಡನಿಗೆ ಅದು ಮೊದಲು ಕೇಳಿಸುವುದಿಲ್ಲ. ಅವನು ದೇವೀರಮ್ಮ ಮತ್ತು ಸೋಮಾಜಮ್ಮ ಇವರ ತೋಳತೆಕ್ಕೆಯಲ್ಲಿ ಮಲಗಿರುತ್ತಾನೆ. ಕೊನೆಗೆ ಅವನಿಗೆ ಉರಿಕಾತಿಯ ಕೂಗು ಕೇಳುತ್ತದೆ. ಚಾಮುಂಡಿಯ ಕರೆಗೆ ಓಗೊಡಲಾಗದ ತನ್ನ ಪರಿಸ್ಥಿತಿಯನ್ನು ಕಂಡು ಅವನಿಗೇ ರೋಸಿಹೋಗುತ್ತದೆ. ಚಾಮುಂಡಿಯ ಬಳಿ ಹೋಗಲು ಏನೇನೋ ಪ್ರಯತ್ನ ಮಾಡಿದರೂ ದೇವೀರಮ್ಮನ ಹುಷಾರಿನಿಂದ ಎಲ್ಲಾ ವಿಫಲವಾಗುತ್ತದೆ. ಕೊನೆಗೆ ತಾನು ಸತ್ತಂತೆ ನಟಿಸಿ ತನ್ನ ಮಾಯಾಶಕ್ತಿಯಿಂದ ಚಾಮುಂಡಿ ಕೊರವಂಜಿಯ ವೇಷದಲ್ಲಿ ಅಲ್ಲಿಗೆ ಬಂದು ಕಣಿ ಹೇಳುವಂತೆ ವ್ಯವಸ್ಥೆ ಮಾಡುತ್ತಾನೆ. ಕೊರವಂಜಿ ವೇಷದ ಚಾಮುಂಡಿ ಬಂದು, ವರ್ಷದಲ್ಲಿ ಆರು ತಿಂಗಳು ನಂಜುಂಡನನ್ನು ಚಾಮುಂಡಿ ಬೆಟ್ಟಕ್ಕೆ ಬಂದು ವ್ರತಮಾಡುತ್ತಾನೆ ಎಂದು ಇಬ್ಬರು ಹೆಂಡತಿಯರೂ ಹರಕೆ ಹೊತ್ತರೆ ಮಾತ್ರ ಅವರ ಗಂಡ ಬದುಕುವನೆಂದು ಹೇಳುತ್ತಾಳೆ. ಅವರು ಒಪ್ಪಿ ಹರಕೆ ಹೊತ್ತು, ಮಂತ್ರದ ನೀರನ್ನು ಅವನ ಮೇಲೆ ಪ್ರೋಕ್ಷಣೆ ಮಾಡಿದ ತಕ್ಷಣ ಅವನು ''ಬುಸು ಬುಸು'' ಉಸಿರಾಡುತ್ತಾ ಮೇಲಕ್ಕೇಳುತ್ತಾನೆ. ಅನಂತರ ವರ್ಷಕ್ಕೆ ಆರು ತಿಂಗಳು ತನ್ನ ಇಬ್ಬರು ಹೆಂಡತಿಯರ ಹತ್ತಿರ, ಮಿಕ್ಕ ಆರು ತಿಂಗಳು ಬೆಟ್ಟದ ಚೆಲುವೆಯ ಸಾನಿಧ್ಯದಲ್ಲಿದ್ದು ನಂಜುಂಡ ಸುಖವಾಗಿರುತ್ತಾನೆ.

ಎಲ್ಲಾ ರೋಗರುಜಿನರಿಗೆಲ್ಲಾ ಒಳರೋಗಕ್ಕೆ ಗಂಡನಾದ ತಾಂಡಮೂರ್ತಿ
ಬೋಗನಂಜುಂಡೇಸ್ವರುನ ಹನುಗ್ರಆ ಈ ಕೇಳಿದ ಭಕ್ತರಿಗೆಲ್ಲಾ
ಉಂಟಾಗಲಿ ಎಂತ ಈ ಕತೆಯನು ಕೇಳಿದವರಿಗೆಲ್ಲಾ ಏಳಿ,
ಸ್ವಾಮಿಯ ಪಾದಕ್ಕೆ ವಂದಿಸುತ್ತಾ ಮಂಗಳ ಆರುತಿಯನ್ನು
ಬೆಳಗುತ್ತಾ ಇಲ್ಲೀಗೆ ಸ್ವಾಮಿ ಕತೇನ ಸಮಾಪ್ತ ಮಾಡೋಣ
ಎತ್ತುವೆನಾರುತಿಯಾ ಸ್ವಾಮಿ ನಂಜುಂಡು ಲಿಂಗು ಬೆಳಗುವೆನಾರುತಿಯಾ SSS
ಸರ್ಪುದ್ ಮೇಲೆ ಸೈನು ಮಾಡಿ ನಂದಿ ಮೇಲೆ ಮೂರ್ತು ಮಾಡಿ
ಗುಡ್ಡೆ ಕುಸುಮದ ಮೇಲೆ ತುಂಬಿ ತುಳುಕಾಡುವ ಬೋಗನಂಜುಂಡೇಸ್ವರುನ
ಪಾದಚರಣಗಳಿಗೆ ಎತ್ತುವೆನು ಮಂಗಳಾರುತಿಯಾ ನಂಜುಂಡು ನಿಮಗೆ
ಬೆಳಗುವೆನಾರುತಿಯಾ SSSS

ಪರಸ್ರಾಮರ ಪಾದುಕ್ಕೆ ಆದಿಸೇಸುರ ಪಾದುಕ್ಕೆ
ಬೆಟ್ಟದವಳು ಚಾಮುಂಡೇಸ್ವರಿಯ ಪಾದಚರಣಗಳಿಗಿಂದು ನಾ
ಎತ್ತುವೆನು ಮಂಗಳಾರುತಿಯಾ ನಂಜುಂಡು ನಿಮಗೆ ಬೆಳಗುವೆನಾರುತಿಯಾ SSS

ಮೂರು ಘಂಟೆಗಳ ಕಾಲ ನಡೆದ ಈ ಮಂಟೇಸ್ವಾಮಿ ಕಥಾಕಥನ ಮೂರುನಿಮಿಷಗಳಂತೆ ಕಳೆದುಹೋದವು. ನಶಿಸಿಹೋಗುತ್ತಿರುವ ನಮ್ಮ ಜಾನಪದ ಪರಂಪರೆಯ ಸಿರಿಯನ್ನು ಜೋಪಾನಮಾಡಲು ಶ್ರಮಿಸುತ್ತಿರುವ ಎಲ್ಲ ಸಜ್ಜನರಿಗೂ ನಮ್ಮೆಲ್ಲರ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುವ ಯತ್ನ ಈ ಕಿರು ಪರಿಚಯ.

**ಶಿವಕುಮಾರ್**




# ಐಜಿಪಿ ಸಾಹೇಬರ ಸೀನಿಯರ್ ಪಿಎ ಹಾಗೂ ಇತರ ಮೋಜಿನ ಪ್ರಸಂಗಗಳು

ಡಾ. ಡಿ.ವಿ. ಗುರುಪ್ರಸಾದ್ (9448090440)

ಪ್ರತಿಗಳಿಗೆ : ಸುಂದರ ಪ್ರಕಾಶನ

ನಂ. 43, ಕಲಾ ಮಂದಿರ, 5ನೇ ತಿರುವು, ಅ.ನ.ಸು. ರಸ್ತೆ

ಹನುಮಂತನಗರ, ಬೆಂಗಳೂರು.

ದೂ. 080-26672141 / 9243125699

ಐ.ಪಿ.ಎಸ್. ಅಧಿಕಾರಿಯಾಗಿದ್ದ ಮತ್ತು ಅಪರಂಜಿಯ ಹಿರಿಯ ಬರಹಗಾರರರದಾದ ಡಾ. ಡಿ.ವಿ. ಗುರುಪ್ರಸಾದ್ ಅವರ 47ನೇ ಕೃತಿ ಇದು. ತಮ್ಮ ಸುದೀರ್ಘ ಅವಧಿಯ ಪೋಲೀಸ್ ಸೇವೆಯಲ್ಲಿ ತಾವು ಕಂಡು, ಅನುಭವಿಸಿದ ಅತ್ಯಂತ ರೋಚಕ ಸನ್ನಿವೇಶಗಳನ್ನು ತಮ್ಮ ಲೇಖನಿಯ ಮುಖಾಂತರ ಬರವಣಿಗೆಗೆ ಇಳಿಸಿದ್ದಾರೆ. ಇದು ಕೇವಲ ಅವರ ಅನುಭವ ಕಥನವಾಗದೇ ಅನೇಕ ರಸ ಸಂಗತಿಗಳಿಗೆ ತಮ್ಮದೇ ಆದ ರೀತಿಯಲ್ಲಿ ಹಾಸ್ಯ ಲೇಪನ ಮಾಡಿ ಓದುಗರಿಗೆ ನೀಡಿದ್ದಾರೆ. ಗುಣಮಟ್ಟದಲ್ಲಿ ಒಂದಕ್ಕಿಂತ ಒಂದು ಪೈಪೋಟಿ ಎನ್ನುವಂತಿರುವ ಈ ಲೇಖನಗಳಲ್ಲಿ ನನ್ನನ್ನು ಮೊದಲು ಸೆಳೆದದ್ದು ಮೇಯರ್‌ರ ಭೋಜನ ಕೂಟ, ನಮ್ಮ ಮನೆಯ ಅಡಿಗೆಯವನು, ನೀವು ಬದುಕಿದ್ದೀರಾ ಸಾರ್, ಕೋಡುಬಳೆ ಕಸ್ಟಂ ಕ್ಲಿಯರೆನ್ಸ್, ಪೋಲೀಸರು ಹಾಗೂ ಹಾಸ್ಯ ಪ್ರವೃತ್ತಿ. ಎಲ್ಲಾ ಲೇಖನಗಳಲ್ಲೂ ಹಾಸ್ಯ ಪ್ರೌಢಿಮೆಯನ್ನು ಕಾಣಬಹುದು. ಓದಿದ ನಂತರ ಒಂದು ಸಂತಸದ ಭಾವವನ್ನು ನಮ್ಮ ಮನದಲ್ಲಿ ಅಚ್ಚೊತ್ತುತ್ತದೆ. ಎಲ್ಲರ ಮನೆಯ ಗ್ರಂಥಾಲಯದಲ್ಲೂ ಇರಬೇಕಾದ ಅನನ್ಯ ಕೃತಿ ಇದು.

*– ಸುಕೇಶವ*

# ಹೇಳಿದ್ದು ಸುಳ್ಳಾಗಲಿಲ್ಲ!

**- ರುಕ್ಮಿಣಿಮಾಲಾ**

**ಮೈ**ಸೂರಿನ ಕುವೆಂಪುನಗರದಲ್ಲಿರುವ ಒಂದು ಖಾನಾವಳಿಗೆ ಪಾನೀಪೂರಿ, ದೋಸೆ ತಿನ್ನುವ ಸಲುವಾಗಿ ಒಂದು ಸಂಜೆ ಮಗಳು ಅಳಿಯ ಒಂದು ಸ್ಕೂಟರಿನಲ್ಲಿ ನಾನೊಂದು ಸ್ಕೂಟರಿನಲ್ಲಿ ಹೋದೆವು. ನಾನು ಖಾನಾವಳಿಯ ಪಕ್ಕದಲ್ಲಿ ಕಾಲುದಾರಿಯಲ್ಲಿ ಸ್ಕೂಟರ್ ನಿಲ್ಲಿಸಿದೆ. ಸಾಲಾಗಿ ಆರೇಳು ಬೈಕುಗಳು ಅಲ್ಲಿ ಅದಾಗಲೆ ನಿಂತಿದ್ದುವು. ಮಗಳು ಸ್ಕೂಟರನ್ನು ಸುರಕ್ಷಿತ ಸ್ಥಳದಲ್ಲಿ ನಿಲ್ಲಿಸಿ ಬಂದು, ನೀನೆಲ್ಲಿ ನಿಲ್ಲಿಸಿದೆ ಎಂದು ನನ್ನನ್ನು ಕೇಳಿದಳು. ಸ್ಕೂಟರ್ ನಿಲ್ಲಿಸಿದ ಸ್ಥಳ ತೋರಿಸಿದೆ. ಏ, ಬೇಡ ಅಲ್ಲಿ ನಿಲ್ಲಿಸಬೇಡಾ. ಅಲ್ಲಿ ನಿಲ್ಲಿಸಬಾರದೋ ಏನೋ. ತೆಗೆದು ಬೇರೆಡೆ ನಿಲ್ಲಿಸಿ ಬಾ ಎಂದಳು. ಏನಾಗಲ್ಲ ಅಲ್ಲಿ ಸುಮಾರು ಗಾಡಿಗಳನ್ನು ನಿಲ್ಲಿಸಿದ್ದಾರೆ. ಅವರೆಲ್ಲ ಮೂರ್ಖರಾ ಎಂದು ವಾದ ಮಾಡಿದೆ. ಅಳಿಯನೂ ಅದಕ್ಕೆ ಅನುಮೋದನೆ ಕೊಟ್ಟ. ನನ್ನ ವಾದಸರಣಿಗೆ ಮಗಳು ಸೋತು ಸುಮ್ಮನಾದಳು.

ಪಾನಿಪೂರಿ, ದೋಸೆ ತಿಂದು ಹೊರಗೆ ಬಂದೆವು. ನೋಡಿದಾಗ ಅಲ್ಲಿ ನನ್ನ ಸ್ಕೂಟರ್ ನಾಪತ್ತೆ. ಒಂದು ವಾಹನವೂ ಇಲ್ಲ ಅಲ್ಲಿ! ಮಗಳು ಸ್ಕೂಟರ್ ತಂದು ನಮ್ಮ ಪಕ್ಕ ನಿಲ್ಲಿಸಿದವಳೇ ನಮ್ಮ ಪೆಚ್ಚುಮೋರೆ ನೋಡಿ ಏನಾಯಿತು ಎಂದು ಕೇಳಿದಳು. ಸ್ಕೂಟರ್ ಎತ್ತಾಕಿಕೊಂಡು ಹೋಗಿದ್ದಾರೆ ಎಂದೆ ಸಣ್ಣ ಸ್ವರದಲ್ಲಿ. ನಾನು ಹೇಳಿದ್ದೆ ಅಲ್ಲಿ ನಿಲ್ಲಿಸುವುದು ಬೇಡ ಎಂದು. ಇಬ್ಬರೂ ಸೇರಿ ಇವಳೊಬ್ಬಳು ಎಲ್ಲದಕ್ಕೂ ಹೆದರುತ್ತಾಳೆಂದು ನನ್ನನ್ನೇ ತಮಾಷೆ ಮಾಡಿದಿರಿ. ಹೀಗಾಗುವ ಬದಲು ಮುಂಜಾಗ್ರತೆ ಮಾಡುವುದು ಎಷ್ಟೋ ಒಳ್ಳೆಯದು. ಯಾವುದಕ್ಕೂ ಮುಂಜಾಗ್ರತೆ ಬೇಕು ಎಂದು ಅಜ್ಜಿ ಹೇಳಿದ್ದಾರೆ. ಅಜ್ಜಿ ಹೇಳಿದ್ದು ಸರಿ. ಎಂದು ಸರೀ ಬೈದಳು. ಬೈದದ್ದನ್ನೆಲ್ಲ ತುಟಿಪಿಟಿಕ್ಕೆನ್ನದೆ ಕೇಳಿದೆ. ಅಳಿಯನೂ ಬಾಯಿಬಿಡಲಿಲ್ಲ. ಆಗ ಪ್ರತಿಯಾಗಿ ಮಾತಾಡುವ ಸ್ಥಿತಿಯಲ್ಲಿರಲಿಲ್ಲ ನಾವು!

ಸ್ಕೂಟರ್ ಅನಂತನ ಹೆಸರಿನಲ್ಲಿತ್ತು. ಹಾಗಾಗಿ ಅನಂತನಿಗೆ ಫೋನಾಯಿಸಿದೆ. ನೀನು ಕೀಲಿ ತಕ್ಕೊಂಡು ಆರಕ್ಷಕ ಠಾಣೆಗೆ ಬಾ. ಅದೇನು ಮೂರು ನಿಮಿಷದ ಕೆಲಸ. ದುಡ್ಡುಕಟ್ಟಿ ತೆಕ್ಕೊಂಡು ಬರುವುದೇ. ಹಿಂದೆ ಎರಡು ಸಲ ನನಗೂ ಈ ಅನುಭವ ಆಗಿತ್ತು ಎಂದಾಗ ನನ್ನ ಪುಕು ಪುಕು ತಹಬಂದಿಗೆ ಬಂತು!

ಮಗಳು ನನ್ನನ್ನು ಪೋಲೀಸ್ ಠಾಣೆಗೆ ಬಿಟ್ಟಳು. ಅದಾಗಲೇ ಅನಂತ ಕಚೇರಿಯಿಂದ ಅಲ್ಲಿಗೆ ಬಂದಿದ್ದ. ಗಾಡಿ ಸಂಖ್ಯೆ ಹೇಳಿದಾಗ ರೂ. 300 ಕಟ್ಟಿದ ಬಳಿಕ ಗಾಡಿ ತಗೊಂಡೋಗಿ ಎಂದರು. ನಾನು ಏನೇನೋ ಕಲ್ಪನೆ ಮಾಡಿದ್ದೆ. ಗಾಡಿ ಯಾರ ಹೆಸರಲ್ಲಿದೆಯೋ ಅವರು ಗುರುತು ಚೀಟಿ ಕೊಂಡೋಗಿ ಪೋಲೀಸರ ಎದುರು ತೋರಿಸಬೇಕು. ಆಗ ಮಾತ್ರ ಗಾಡಿ ಕೊಡುತ್ತಾರೆ ಎಂದೆಲ್ಲ ಕಲ್ಪಿಸಿಕೊಂಡೇ ಅನಂತನಿಗೆ ಹೇಳಿದ್ದು. ಇಲ್ಲಿ ನೋಡಿದಾಗ ಅನಂತ ಬರಬೇಕೆಂದೇ ಇರಲಿಲ್ಲ. ಆದರೆ ಠಾಣೆಯಲ್ಲಿ ಅವರು ಯಾವ ದಾಖಲೆಯನ್ನೂ ಕೇಳಲಿಲ್ಲ. ಗಾಡಿ ಯಾರ ಹೆಸರಲ್ಲಿದೆ ಎಂದೂ ಕೇಳಲಿಲ್ಲ. ಅವರಿಗೆ ರೂ. 300 ಮುಖ್ಯವೇ ಹೊರತು ಗಾಡಿಯ ಗೊಡವೆ ಅವರಿಗೆ ಬೇಡ. ಎಂಬುದು ನನಗೆ ವೇದ್ಯವಾಯಿತು.

ಪಾನಿಪೂರಿ, ದೋಸೆಯ ಬೆಲೆ ಬಲು ದುಬಾರಿಯೆನಿಸಿ ಹೊಟ್ಟೆಯಲ್ಲಿ ಅವು ಭಗಭಗ ಉರಿಯಲು ತೊಡಗಿತು! ಇದರಿಂದ ತಿಳಿದುಕೊಳ್ಳುವ ನೀತಿಪಾಠವೇನು? ಮಕ್ಕಳು ಹೇಳಿದ್ದು ಕೆಲವೊಮ್ಮೆ ಸುಳ್ಳಾಗುವುದಿಲ್ಲ. ಮಕ್ಕಳ ಮಾತನ್ನು ಒಮ್ಮೊಮ್ಮೆಯಾದರೂ ತಾಳ್ಮೆಯಿಂದ ಕೇಳಬೇಕು. ಅವರು ಹೇಳಿದಂತೆ ನಡೆದುಕೊಳ್ಳಬೇಕು. ಮಕ್ಕಳು ಜಾಣರಿರುತ್ತಾರೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಅಮ್ಮಂದಿರು ಕೆಲವೊಮ್ಮೆ ತಾವು ಅತೀಬುದ್ಧಿವಂತರೆಂದು ತಿಳಿದುಕೊಳ್ಳುವುದನ್ನು ಬಿಡಬೇಕು!

●

# ಖಡ್ಡೋಗಿ ಗುಡ್ಡಾತು

**- ರಾಧಾ ಶಾಮರಾವ**

**ಬಿಂ**ದುರಾಯರು ಊಟಾ ಮಾಡಿ ತಾಂಬೂಲ ಚರ್ವಿತರಾಗಿ ತೂಗು ಮಂಚದಾಗ ತೂಗ್ಯಾಡುವಾಗ ಅಡಕಿ ಕುಳಿ ಬಿದ್ದ ಹಲ್ಲಿಗೆ ಸಿಕ್ಕಿ ತೆಗೆಯಲು ಹತ್ತಿರದಾಗ ಏನೂ ಸಿಗದ ಹೆಂಡತಿ ಹೇಳಿದ್ದಕ್ಕ ಅಂಗಡಿಯಿಂದ ತಂದ ಕಡ್ಡಿ ಪೊಟ್ಟಣ ಕಣ್ಣಿಗೆ ಬಿತ್ತು.

ಅದರೊಳಗಿನ ಒಂದು ಖಡ್ಡಿ ತೆಗೆದು ಕುಳಿಯಲ್ಲಿದ್ದ ಅಡಿಕೆ ಚೂರನ್ನು ತೆಗೆದ ರಾಯರು ಖಡ್ಡಿನ್ನ ನೋಡುತ್ತಾ ಎಲಾ ಇವನ ಚೋಟುದ್ದ ಖಡ್ಡಿ ಡಾಕ್ಟರ ಚೂರಿಕ್ಕಿಂತನೂ ಮ್ಯಾಲ ಅತಲಾ ಎನ್ನುವುದರೊಳಗಽಽ

''ಏನ್ರಿ ಎಲ್ಲಿದ್ದಿರಿ? ಎಂದು ಸೆರಗಿನ ಕೈ ಒರಸಿಕೊಳ್ಳುತ್ತಾ'' ಸಂಜೆಮುಂದ ಚಹಾ ಮಾಡ್ಲಿಕ್ಕೆ ಲಾಯಟರ್ ಕೆಟ್ಟದ ಒಂದ ಖಡ್ಡಿನೂ ಇಲ್ಲಾ ತಂದ್ರೇನೂ? ಎಂದು ಕೇಳುತ್ತಲೇ ಎದುರಿಗಿದ್ದ ಖಡ್ಡಿ ಪೊಟ್ಟಣ ನೋಡಿ ''ಇದಾದರ ಛಲೋ ನೆನಪಿರತದ ಇಲ್ಲಾಂದ್ರ ಸಂಜೀ ಚಹಾ ಖೋತಾ ಆಗ್ತದ ನೋಡ್ರಿ'' ಅದಽ ನನಗೇನಾದರೂ ಬೇಕಾಗಿದ್ದ ಹೇಳಿದ್ರ ನಾಕ ದಿನಾ ಬೇಕು ತರ್ಲಿಕ್ಕೆ ಎಂದಾಗ ರಾಯರು ಅಲ್ಲಽ ''ತಂದ ಕೊಟ್ಟೀನಿಲ್ಲೋ ಅದ ಹೇಳ ಅಲ್ಲಾ'' ಮುಂಜಾನೆ ನಿಂದು ಮತ್ತು ಆ ಬಾಜು ಮನಿ ವಿಮಲಕ್ಕಂದು ಜೋರು ಬಾಯಿ ಕೇಳಿಸಲಿಕ್ಕತ್ತಿತ್ತು ನನ್ನ ಮ್ಯಾಲ ಅಷ್ಟಽಽಽ ರೋಪ ಹಾಕತಿ ಅಂತ ತಿಳಿದಿದ್ದೆ ಹೊರಗೂ ಭಾರಿ ಜೋರು ಇದ್ದಿ ಬಿಡ ನೀ.

ಏನ್ರಿ ನನ್ನೇನ ಜಗಳಗಂಟಿ ಅಂತ ತಿಳಿದಿರೇನು? ನಾ ಏನ ಜಗಳಗಂಟಿ ಅಲ್ಲಾ ನೀವಽ ಆಗಲಿ ಬ್ಯಾರೆ ಯಾರೇ ಆಗಲಿ ಸುಮ್ಮ ಸುಮ್ಮನ ನಂ ತಂಟೆಕ್ಕ ಬಂದರ ನಾ ಸುಮ್ಮನಽ ಬಿಡಾಕಿ ಅಲ್ಲ.

''ಅಲ್ಲಾ ಅಂಥಾದ್ದು ಏನಾತು? ಅಂದದ್ದಕ್ಕ - ಅಲ್ರಿ ಸುಮ್ಮನ ಖಡ್ಡೋಗಿ ಗುಡ್ಡಾತ ನೋಡ್ರಿ'' ಎಲ್ಲಾ ಆ ಪಾರಿ ಕೆಲಸದಾಕಿ ಮಾಡಿದ ಕೆಲಸಾ ಕೈ ತುಂಬಿ ಪಗಾರ ತೊಗೊತಾಳ ಅಂತ ನಾ ಆಕಿಗೆ ಚಾ ತಿಂಡಿ ಅಂತೇನೂ ಕೊಡಾಂಗಿಲ್ಲಾ ಗೊತ್ತದಲಾ ನಿಮಗ (ಸಣ್ಣ ದನಿಯೊಳಗ) ನಂಗಽ ಒಂದ ಕಪ್ ಚಾ ಸಿಗೋದಕ್ಕ ಬಾಯ್ ಬಾಯ್ ಬಿಡತೇನಿ ಇನ್ನ ಆ ಪ್ರಾಣಿಗಂತೂ ಮುಗದಽ ಹೋತು'' -

ಏನ್ರಿ ವಟಾ ವಟಾ ಅದು? ನಾ ಹೇಳಿದ್ದ ಕೇಳ್ಲಿಕತ್ತಿರೇನು? ಹಂ ಹುಂ ಹುಂ ಆಕಿಗೆ ಮನ್ನೆ ''ನಾಳೆ ಲಗೂನ ಬಾ ನಂ ಮಂಡಳದ ವಾರ್ಷಿಕೋತ್ಸವ ಅದ ಅದಕ ಲಗೂ ಹೋಗಬೇಕಾಗೇದ'' ಆ ವಿಮಲಕ್ಕ ಮನ್ಯಾಗಽ ಇರತಾಳ ಆಕಿ ಮನಿ ಆ ಮ್ಯಾಲ ಮಾಡಿ ಅಂತ ಅಂದೆ ನೋಡ್ರಿ ಆ ಪಾರಿಗೆ ಬಿನ್ನಾಣಗಿತ್ತಿ ವಿಮಲಾಬಾಯಿ ಒಂದ ಚಮಚಾ ಚಾ ಕೊಟ್ಟಾಳ ಕಾಣಿಸ್ತದ ಈ ಪಾರಿ ಸಣ್ಣ ಖಡ್ಡಿನ ಗುಡ್ಡಾ ಮಾಡಿ ಏನೇನರ ಹೇಳಿ ಬಿಟ್ಟಾಳ.

ಬೆಳಗೆದ್ದ ಯಾರ ಮುಖಾ ನೋಡಿದ್ನೋ ಆ ವಿಮಲಾಬಾಯಿ ''ಯಾಕ್ರಿ ಪ್ರಮಿಲಾಬಾಯಿ ನೀವು ಮಂಡಳಕ್ಕರೇ ಹೋಗ್ರಿ, ಇಲ್ಲಾ ಯಾ ಸುಡಗಾಡಕ್ಕರೇ ಹೋಗ್ರಿ ನನಗೇನು? ಆದರ ''ನಾ ಮನ್ಯಾಗಽ ಇರ್ತೇನಿ'' ನಾ ಹಿಂಗಽ ಇರ್ತೇನಿ ನಾ ಹಿಂಗಽ ಇರ್ತೇನಿ,

ಕಟ್ಟಿ ಮ್ಯಾಲ ಕೂತ ಹರಟೀ ಹೊಡದು ಊರ ಉಸಾಬರಿ ಮಾಡ್ತೇನಿ ಅಂತ ಅನ್ನಾವ್ರು ನಿವ್ಯಾರ್ರಿ? ಅಂತ ಜಗಳಕ್ಕS ಬಂದ್ರು!! ಇಲ್ರಿ ನಾ ಹಂಗೇನೂ ಅಂದಿಲ್ಲರಿ ಅಂದರ ಕೇಳವಳ್ಳೂ ತಂದS ಹಚ್ಚ್ಯಾಳ! ಆ ಮ್ಯಾಲ ತೊಗೊಂಡೆ ನೋಡ್ರಿ ಒಂದ ಕೈ - ಛೆ ಎಲ್ಲಾ ಹಗರಣ ಈ ಪಾರಿ ಇಂದ ಆತು ಬರ್ರಿ ಈವತ್ತ.

ನೋಡಿದ್ಯಾ ಏ ಬಿಂದುರಾಯಾ ಈ ಖಡ್ಡಿ ಗುಡ್ಡಾ ಮಾಡೋ ನನ್ನಿಂದನS ಗುಡಿಸಲು ಅರಮನಿ ಎಲ್ಲ ಬೆಳಕಾಗೋದು ಗಣಪನ ಹಬ್ಬ ದೀಪಾವಳಿಯೊಳಗೆ ಢಾಂ ಢಾಂ ಅಂತ ಸಪ್ಪಳಾ ಮಾಡದ ಸಣ್ಣ ಮಕ್ಕಳ ಕೈಯಾಗ ಖಡ್ಡಿ ಮಾಡಿ ಬಣ್ಣ ಬಣ್ಣವಾಗಿ ಬೆಳಕು ಕೊಟ್ಟು ಸಂತೋಷ ಪಡೆಸ್ತೇನಿ. ನಾನು ಮತ್ತ ಎಲ್ಲಾರ ಕಿವಿ ಮೂಗು ಹಲ್ಲಾಗಿನ ಹೊಲಸ ತಗದು, ಡಾಕ್ಟರ ಕೆಲಸನೂ ಮಾಡ್ತೇನಿ ಸಮಾನದೊಳಗ ಅಡ್ಡಡ್ಡ ಏನಾದರೂ ಸಿಕ್ಕಿ ಬಿದ್ದರ ಅದನ್ನ ತೆಗೆಯೋ ಕ್ಲೀನರನೂ ಆಗತೇನಿ। ಗೊತ್ತದ ಏನ? ಆ ಗೋವು ಹೇಳ್ತದಲಾ ಹಂಗ ಗೀರಿದರೆ ಬೆಳಕಾದೆ ಹಲ್ಲು, ಕಿವಿಯಲ್ಲಿಟ್ಟರೆ ಆಯುಧವಾದೆ ಹಿತವಚನ ನೀಡುವಲ್ಲಿ ಆಣೆ ಅದೆ. (''ಕೈಯಾಗ ಖಡ್ಡಿ ಕೊಟ್ಟ ಹೇಳ್ತೀನಿ, ಕೇಳ ನನ್ನ ಮಾತು'' ಅಂತಾರಲ್ಲ ಹಂಗ) ಆದರೆ ನೀನ್ಯಾರಿಗಾದ್ರೋ ಎಲೋ ಬಿಂದುರಾಯಾ ಅನ್ನೋದೆ?

●

---


ಸಿದ್ಧವನಹಳ್ಳಿ ಕೃಷ್ಣಶರ್ಮ ಸ್ಮಾರಕ ಸಂಸ್ಥೆ, ಬೆಂಗಳೂರು

**ಸಿದ್ಧವನಹಳ್ಳಿ ಕೃಷ್ಣಶರ್ಮರ ಪುಣ್ಯತಿಥಿ ಸಮಾರಂಭ**

ಮುಖ್ಯ ಅತಿಥಿ : **ಶ್ರೀ ಎಚ್.ಆರ್. ಶ್ರೀಷ** (ಹಿರಿಯ ಪತ್ರಕರ್ತರು)

ಉಪನ್ಯಾಸ : **ಶರ್ಮಾಜಿ ಮತ್ತು ಪರ್ಣಕುಟಿ**

ಸಿದ್ಧವನಹಳ್ಳಿ ಕೃಷ್ಣಶರ್ಮ ಸ್ಮಾರಕ ಸಂಸ್ಥೆ ಮತ್ತು

ಕೊರವಂಜಿ ಅಪರಂಜಿ ಟ್ರಸ್ಟ್ ಅರ್ಪಿಸುವ

**ಕೈಲಾಸಂ ನೆನಪುಗಳು**

ರಾ.ಶಿ. ಕಂಡ ಕೈಲಾಸಂ – ಎಂ. ಶಿವಕುಮಾರ್

ಕೈಲಾಸಂ ನೆನಪಿನ ಗಾಡಿ ಎಳೆಯುವವರು – ಶ್ರೀ ವೈ.ವಿ. ಗುಂಡೂರಾವ್

ಕೈಲಾಸಂ ಗೀತೆಗಳ ಗಾಯನ – ಶ್ರೀ ಆರ್. ಶ್ರೀನಾಥ್

ದಿನಾಂಕ: 16-10-2016 ಭಾನುವಾರ ಬೆಳಗ್ಗೆ 11.00 ಘಂಟೆಗೆ

ಸ್ಥಳ: ಗಾಂಧೀ ಸಾಹಿತ್ಯ ಸಂಘ, 8ನೇ ಅಡ್ಡ ರಸ್ತೆ

ಮಲ್ಲೇಶ್ವರಂ, ಬೆಂಗಳೂರು – 560003

**ಎಲ್ಲರಿಗೂ ಸ್ವಾಗತ**

# ನಗಬೇಡಿ

**- ಹರಿಪ್ರಸಾದ್ ಎ.ಆರ್.**

**ನ**ಮ್ಮ ಶಾರಿ ನಿಮಗೆ ಗೊತ್ತಿರಬೇಕಲ್ಲಾ, ಯಾಕೇಂದ್ರೆ ನೀವು ಭಾಗವಹಿಸಿರುವ ಯಾವುದೇ ಸಮಾರಂಭದಲ್ಲಿ ಅವಳು ತನ್ನ ಐವತ್ತೈದನೆಯ ವಯಸ್ಸಿನಲ್ಲೂ ಚಿಗುರೆಯಂತೆ ಓಡಾಡಿ ಎಲ್ಲರ ಗಮನವನ್ನು ಸೆಳೆಯುತ್ತಿರುತ್ತಾಳೆ. ನಿಜಕ್ಕೂ ಅವಳದು ಅಂತಹ ವ್ಯಕ್ತಿತ್ವ. ನೋಡಲು ಈ ವಯಸ್ಸಿನಲ್ಲಿಯೂ ಕುಂದದ ಸೌಂದರ್ಯ, ಬೆಳ್ಳಗೆ ಹೊಳೆಯುವ ದಂತಪಂಕ್ತಿ, ನೋಡಿದರೆ ಗೌರವ ಬರುವಂತಹ ಆಕರ್ಷಣೀಯವಾದ ಶರೀರ. ಅವಳು ತನ್ನ ಗಂಡ ರಾಮರಾವ್ ಮತ್ತು ಇಬ್ಬರು ಮಕ್ಕಳೊಡನೆಯ ಸುಖ ಸಂಸಾರ. ಮಗ ತನ್ನ ಕಾಲ ಮೇಲೆ ತಾನು ನಿಂತುಕೊಂಡು ವ್ಯವಹಾರ ಮಾಡುತ್ತಾನೆ. ಮಗಳು ಒಬ್ಬ ಇಂಜಿನಿಯರೊಡನೆ ವಿವಾಹವಾಗಿ ಒಂದು ಮುದ್ದಾದ ಹೆಣ್ಣುಮಗುವಿನೊಡನೆ ಸುಖವಾಗಿದ್ದಾಳೆ. ಸಂಸಾರದಲ್ಲಿ ಯಾವುದೇ ಹೆಚ್ಚಿನ ಜವಾಬ್ದಾರಿ ಇಲ್ಲದುದರಿಂದ ಯಾರೇ ಸಮಾರಂಭಕ್ಕೆ ಕರೆದರೂ ಸಂತೋಷದಿಂದ ಹೋಗಿ ಸಮಾರಂಭ ತಮ್ಮ ಮನೆಯದೇ ಎಂಬಂತೆ ಓಡಾಡಿ ಎಲ್ಲ ಕೆಲಸವನ್ನು ಮಾಡಿಕೊಡುತ್ತಿದ್ದಳು.

ಒಮ್ಮೆ ಲೀಲಕ್ಕಳ ಮನೆಯ ಶುಭ ಸಮಾರಂಭವೊಂದಕ್ಕೆ ಹೋಗಿದ್ದ ಶಾರಿಗೆ ತಲೆನೋವು ಕಾಣಿಸಿ ಕೊಂಡಿತು. ಆಗ ಅವಳು ಲೀಲಕ್ಕಳೊಡನೆ ಅದನ್ನು ಹೇಳಿದಾಗ ಅಯ್ಯೋ, ಇದಕ್ಕೆ ಯಾಕೆ ಚಿಂತೆ ಮಾಡ್ತೀಯಾ, ಒಂದು ಮಾತ್ರೆ ತಿಂದು ಬಿಸಿ ಕಾಫಿ ಕುಡಿದರೆ ಎಲ್ಲ ಸರಿಹೋಗುತ್ತೆ ಎಂಬ ಸಲಹೆಯನ್ನು ಒಪ್ಪಿ ಹಾಗೇ ಮಾಡಿದಳು. ಅದು ಸ್ವಲ್ಪ ಕಡಿಮೆಯಾಗಿ ಸಮಾರಂಭ ಮುಗಿದು ತಮ್ಮ ಮನೆಗೆ ಹೊಗಿ ವಿಶ್ರಾಂತಿ ತೆಗೆದುಕೊಂಡಳು. ಆದರೆ ಆ ರಾತ್ರಿ ಅದು ಮತ್ತೆ ತೀವ್ರವಾಗಿ ಕಾಡಿತು. ತನ್ನ ಪತಿ ರಾಮರಾಯರೊಡನೆ ಅದನ್ನು ಹೇಳಿಕೊಂಡಳು. ಅದಕ್ಕೆ ಅವರು ಆಗಲಿ, ನಾಳೆ ಬೆಳಿಗ್ಗೆ ಆಸ್ಪತ್ರೆಗೆ ಹೋಗೋಣ ಎಂದು ಸಮಾಧಾನ ಮಾಡಿದರು.

ಸರಿ ಮಾರನೆಯ ದಿನ ಅಲ್ಲಿನ ಸುಪ್ರಸಿದ್ಧ ವೈದ್ಯರಾದ ಪ್ರಹ್ಲಾದ ಶೆಟ್ಟಿ ಇವರೊಡನೆ ಭೇಟಿ ನಿಗದಿ ಮಾಡಿಕೊಂಡು ಹೋದರು. ಅವರು ವಿವರವಾಗಿ ಪರೀಕ್ಷಿಸಿ, ಇದು ಬಹುಶಃ ಸೈನಸೈಟಿಸ್ ಇರಬೇಕು, ಇದಕ್ಕೆ ಹೆದರಬೇಕಿಲ್ಲ ಎಂದು ಒಂದು ಮಾತ್ರೆಗಳ ಅಂಗಡಿ ಇಡುವಷ್ಟು ಔಷಧಿ ಪಟ್ಟಿ ಕೈಗಿತ್ತು ಕೇವಲ ಐದುನೂರು ರೂ ಫೀ ತೆಗೆದುಕೊಂಡು ಹದಿನೈದು ದಿನಗಳ ನಂತರ ಮತ್ತೆ ಬರಹೇಳಿದರು. ಊಟದ ಬದಲಿಗೆ ಮಾತ್ರೆಗಳನ್ನೇ ನುಂಗಿ ಶಾರಿ ಸುಸ್ತಾದಳು. ಕೊನೆಗೆ ಇದಾಗಿದ್ದಲ್ಲ ಎಂದು ತಮ್ಮ ಸಮೀಪದ ಬಂಧುವಾದ ಡಾ|| ರಮೇಶ್ ಇವನನ್ನು ಸಂಪರ್ಕಿಸಿ ಈ ಊರಿನ ಸುಪ್ರಸಿದ್ಧ ನರರೋಗ ತಜ್ಞ ಡಾ|| ವಿಲ್ಲಿಯಮ್ ಇವರ ಬಳಿ ಹೋಗಬೇಕೆಂಬ ಸಲಹೆಯೊಂದಿಗೆ ಅಲ್ಲಿಗೆ ಪ್ರಯಾಣ ಬೆಳೆಸಿದರು. ಅಲ್ಲಿ ರೋಗಿಗಳ ಸಂಖ್ಯೆ ಬಹಳವಾದ್ದರಿಂದ ಒಂದು ವಾರದ ಬಳಿಕ ಅವರಿಗೆ ಸಂದರ್ಶನಕ್ಕೆ ನಿಗದಿಯಾಯಿತು.

ನಿಗದಿತ ದಿನದಂದು ಆ ವೇಳೆಯಲ್ಲಿ ಡಾ|| ವಿಲ್ಲಿಯಂ ಇವರ ಭೇಟಿ ಆಯಿತು. ''ಏನಮ್ಮಾ ನಿಮ್ಮ ತೊಂದರೆ?''

ಶಾ: ತಲೆನೋವು ಡಾಕ್ಟ್ರೇ.

ಡಾ: ಯಾಕಮ್ಮಾ?

ಶಾ: ನೀವೇ ಹೇಳಬೇಕು ಡಾಕ್ಟ್ರೇ.

ಡಾ: ಆಯಿತು, ಈಗ ನಿಮಗೆ ಹೇಗೆ ಈ ತಲೆನೋವು ಬಂತು, ಏನಾಗುತ್ತೆ ಎಲ್ಲ ವಿವರ ತಿಳಿಸಿ ಎಂದಾಗ ಶಾರಿ ತನ್ನ ಸಮಸ್ಯೆಯನ್ನು ವಿವರಿಸಿದಳು. ಆಗ ಅವರು ಸ್ಕ್ಯಾನ್ ಮತ್ತು ಬ್ರೈನ್ ಮ್ಯಾಪಿಂಗ್ ಆಗಬೇಕು., ಇದಕ್ಕೆ ನೀವು ರೂ ಐದು ಸಾವಿರ ಕಟ್ಟಬೇಕು ಎಂದರು ಶಾರಿಯ ಜೊತೆಗೆ ಬಂದಿದ್ದ ರಾಮರಾಯರು ಹಣ ಕಟ್ಟಿ ಬಿಲ್ಲನ್ನು ತಂದು ಡಾಕ್ಟರ ಕೈಲಿತ್ತರು. ಆಗ ಆಗಬೇಕಾದ ಪರೀಕ್ಷೆ ಎಲ್ಲಾ ಮಾಡಿಸಿ ನಾಳೆ ಬನ್ನಿ ಎಂದರು. ಆಗ ವೈದ್ಯರು ರಾಮರಾಯರನ್ನು ಪ್ರತ್ಯೇಕವಾಗಿ ಕರೆದು ನಿಮ್ಮಾಕೆಗೆ ತಲೆಯಲ್ಲಿ ಟ್ಯೂಮರ್ ಅಥವ ಕ್ಯಾನ್ಸರ್ ಆಗಿರುವ ಸಾಧ್ಯತೆಯೂ ಇಲ್ಲದಿಲ್ಲ, ಯಾವುದಕ್ಕೂ ಧೈರ್ಯ ಕೆಡಬೇಡಿ, ನಾಳೆ ಬನ್ನಿ, ಮತ್ತೆ ಯಾವ ಸಂದರ್ಭದಲ್ಲೂ ಈ ವಿಷಯವನ್ನು ನಿಮ್ಮ ಪತ್ನಿಗೆ ತಿಳಿಸಬೇಡಿ ಎಂದು ಎಚ್ಚರಿಕೆ ಕೊಟ್ಟರು. ಹೌಹಾರಿದರು ರಾಯರು. ಏನು ಡಾಕ್ಟ್ರೇ ಹೀಗೆ ಹೇಳುತ್ತೀರಿ, ನಾಳೆ ಏನಾದರೂ ಹೆಚ್ಚುಕಡಿಮೆ ಆದರೆ ನನ್ನ ಗತಿ ಏನು ಎಂದು ಕೇಳಿದರು. ಇದಕ್ಕೆ ಅವರು ರಾಯರನ್ನು ಸಮಾಧಾನ ಮಾಡಿ ದೇವರು ಇದ್ದಾನೆ, ಯಾವುದಕ್ಕೂ ನಾಳೆ ಬನ್ನಿ ನೋಡೋಣ, ಒಳ್ಳೆಯದನ್ನೇ ನಿರೀಕ್ಷಿಸೋಣ ಎಂದರು. ಮಾರನೆಯ ದಿನ ಹೋದಾಗ ನಿಮಗೆ ಯಾವ ತೊಂದರೆಯೂ ಇಲ್ಲ, ಬಹುಶಃ ಕಿವಿ ಮೂಗು ಗಂಟಲಿನ ತಜ್ಞರ ಬಳಿಗೆ ಹೋಗಬೇಕಾಗುತ್ತದೆ ಎಂದು ತಮಗೆ ಗೊತ್ತಿದ್ದ ವೈದ್ಯರ ಹೆಸರು ಹೇಳಿದರು. ಸರಿ, ಮಾರನೆಯ ದಿನ ಅಲ್ಲಿಗೆ ದಂಪತಿಗಳ ಸವಾರಿ ಹೋಯಿತು. ಪಾಪ, ರಾಯುರಿಗೆ ಆ ರಾತ್ರಿ ಪೂರ್ತಿ ನಿದ್ದೆಯೇ ಇಲ್ಲ. ಅಲ್ಲಿನ ವೈದ್ಯರು ನಾಲ್ಕು ಸಾವಿರ ಹಣ ಕಿತ್ತು ಹಲವು ಪರೀಕ್ಷೆ ಮಾಡಿ ಮರುದಿನ ಬರಲು ಹೇಳಿದರು. ಮರುದಿನ ಪರೀಕ್ಷೆಯ ವಿವರ ತಿಳಿಯಲು ಬಂದಾಗ ಅವರು ನಿಮಗೆ ಈ ಸಮಸ್ಯೆ ಏನೂ ಕಾಣುತ್ತಿಲ್ಲ, ಬಹುಶಃ ಹಲ್ಲಿನ ಸಮಸ್ಯೆ ಇರುವುದರಿಂದ ಹೀಗಾಗಿರಬೇಕು ಎಂದರು. ಆಗ ರಾಮರಾಯರು ಇದಕ್ಕೂ ತಲೆನೋವಿಗೂ ಏನು ಸಂಬಂಧ ಎಂದು ಕೇಳಿದಾಗ ಎರಡಕ್ಕೂ ನರಗಳ ಸಂಪರ್ಕ ಇರುತ್ತದೆ, ಹಾಗಾಗಿ ಅದನ್ನೂ ಪರೀಕ್ಷೆ ಮಾಡಿಸಬೇಕು ಎಂದರು.

ಈ ಊರಿನಲ್ಲಿ ಮಂಜುನಾಥ ಡೆಂಟಲ್ ಆಸ್ಪತ್ರೆ ಎಂಬ ಹೈಟೆಕ್ ಆಸ್ಪತ್ರೆ ಇದೆ. ಅಲ್ಲಿ ಇಬ್ಬರು ಮಂಜುನಾಥರು ತಜ್ಞ ವೈದ್ಯರಾಗಿದ್ದಾರೆ. ಅಲ್ಲಿಗೆ ಮಾರನೆಯ ದಿನ ಇಬ್ಬರೂ ಆಟೋ ಹತ್ತಿ ಹೋದರು. ಆಗ ಅಲ್ಲಿದ್ದ ಕಿರಿಯ ಮಂಜುನಾಥರ ಭೇಟಿ ಸುಲಭವಾಗಿ ದೊರೆಯಿತು. ಹಲ್ಲಿನ ಎಕ್ಸ್‌ರೇ ತೆಗೆಸಿ ಅವರು ಶಾರಿಗೆ ನಿಮ್ಮ ಮೇಲಿನ ಸಾಲಿನ ಮೂರು ಹಲ್ಲುಗಳನ್ನು ತೆಗೀಬೇಕು, ಆಗ ನಿಮ್ಮ ತಲೆನೋವು ವಾಸಿ ಆಗುತ್ತೆ ಎನ್ನುತ್ತಿರುವಾಗಲೇ ಹಿರಿಯ ಮಂಜುನಾಥರ ಸವಾರಿ ಅಲ್ಲಿಗೆ ಆಗಮಿಸಿತು. ಅವರೂ ಸಹ ಶಾರಿಯ ವೈದ್ಯಕೀಯ ಪರೀಕ್ಷೆಯ ವರದಿಯನ್ನು ನೋಡಿ ರೀ ಮಂಜು, ಇವರಿಗೆ ಕೆಳಗಿನ ಸಾಲಿನ

ಎರಡು ಹಲ್ಲುಗಳನ್ನು ತೆಗೆದರೆ ಇವರ ಸಮಸ್ಯೆ ಪರಿಹಾರವಾಗುತ್ತೆ ಎಂದರು. ಸರಿ ಇವರಿಬ್ಬರಲ್ಲಿ ತೀವ್ರವಾದ ವಾಗ್ವಾದ ಪ್ರಾರಂಭವಾಯಿತು. ಇದರ ಮಜವನ್ನು ಶಾರಿ ದಂಪತಿಗಳು ತೆಗೆದುಕೊಳ್ಳುತ್ತಿದ್ದರು. ಸುಮಾರು ಹತ್ತು ನಿಮಿಷವಾದರೂ ಈ ವಾಗ್ವಾದ ಮುಗಿಯದಿದ್ದಾಗ ಶಾರಿಯೇ, ಡಾಕ್ಟರೇ, ನಿಲ್ಲಿಸಿ, ನಿಮಗೆ ಎಷ್ಟು ಹಲ್ಲು ಕೀಳಬೇಕೋ ಅಷ್ಟು ಕಿತ್ತುಕೊಳ್ಳಿ ಎಂದು ಹೇಳಿ ತನ್ನ ಸುಂದರ ದಂತಪಂಕ್ತಿಯನ್ನು ಬಾಯಿನಿಂದ ಹೊರತೆಗೆದು ಮೇಜಿನ ಮೇಲಿಟ್ಟಳು.

ಶಾರಿಯ ತಲೆನೋವಿಗೆ ನಿಮ್ಮ ಬಳಿ ಏನಾದರೂ ಪರಿಹಾರ ಇದ್ದರೆ. ದಯಮಾಡಿ ತಿಳಿಸಿ.

●

---

## ಶೋಧನೆ

ತುಂಬಾ ಚುರುಕಾಗಿದ್ದ ಪಟ್ಟಣದ ಹುಡುಗನೊಬ್ಬ ಹಳ್ಳಿಗೆ ಹೋಗಿ ಕೆರೆ ದಡದಲ್ಲಿ ಕೂತಿದ್ದ. ವಯಸ್ಸಾದವರೊಬ್ಬರೊಂದಿಗೆ ಮಾತಾಡುತ್ತಾ  ನಿಮ್ಮಂಥ ಮುದುಕರು ಈಗಿನ ಕಾಲದ ಹುಡುಗರನ್ನು ಅರ್ಥ ಮಾಡ್ಕೊಬೇಕು. ಯಾಕೆ ಗೊತ್ತಾ, ನೀವೆಲ್ಲ ಚಿಕ್ಕವರಿದ್ದಾಗ ಹೇಗೆ ಹೇಗೋ ಬೆಳೆದಿರಿ, ಆದರೆ ನಾವು, ನಮ್ಮದೇ ಪ್ರಪಂಚದಲ್ಲಿ ಬೆಳೆದೆವು, ನಮಗೆ ಟೆಲಿವಿಷನ್ ಇದೆ, ಜೆಟ್ ಪ್ಲೇನ್‌ಗಳಿವೆ, ಸ್ಪೇಸ್ ಟ್ರಾವಲ್ ಇದೆ, ಮನುಷ್ಯ ಚಂದಿರನಲ್ಲಿ ಓಡಾಡಿದ್ದು, ನ್ಯೂಕ್ಲಿಯರ್ ಎನರ್ಜಿ, ಹಡಗುಗಳು, ವೇಗದ ರೈಲುಗಳು, ಕಂಪ್ಯೂಟರ್‌ಗಳು, ಸೆಲ್ ಫೋನುಗಳು ಇತ್ಯಾದಿಗಳೊಂದಿಗೆ ಬೆಳೆದಿದ್ದೀವಿ ಗೊತ್ತಾ ಅಂತ ಜಂಬ ಪ್ರದರ್ಶಿಸಿದ. ಅದಕ್ಕೆ ಆ ಹಿರಿಯ ನಾಗರೀಕರು, ಅವನ ಬೆನ್ನು ತಟ್ಟಿ, ನೀನು ಸರಿಯಾಗೇ ಹೇಳಿದೆ ಮಗು, ನಾವು ಚಿಕ್ಕವರಿದ್ದಾಗ ನಮಗೆ ಈ ಸೌಕರ್ಯಗಳೆಲ್ಲ ಇರಲಿಲ್ಲ, ಅದಕ್ಕೆಂದೇ ಎಲ್ಲವನ್ನೂ ನಾವು ಶೋಧಿಸಿ ಮುಂದಿನ ಜನಾಂಗಕ್ಕಾಗಿ ಬಿಟ್ಟಿದ್ದೇವೆ. ಆದರೆ ಮುಂದಿನ ಜನಾಂಗಕ್ಕಾಗಿ ನೀನೇನು ಮಾಡುತ್ತಿದ್ದೀಯ ಅಂತ ಸ್ವಲ್ಪ ನಿನ್ನನ್ನು ನೀನೇ ಪ್ರಶ್ನಿಸಿಕೋ ಅಂದರು. ಯುವಕ ತಲೆ ತಗ್ಗಿಸಿ ಅಲ್ಲಿಂದ ಕಾಲ್ತೆಗೆದ.

# ಗಂಡ ಹೆಂಡತಿ ಜಗಳ

- ಗಾಯತ್ರಿ ಮೂರ್ತಿ

**ಗಂ**ಡ-ಹೆಂಡತಿ ಮಧ್ಯೆ ಜಗಳವೇಕಾಗತ್ತೆ? ಜಗಳವೇ ಆಡದ ಗಂಡ ಹೆಂಡಿರು ಈ ಪ್ರಪಂಚದಲ್ಲಿ ಇದ್ದಾರಾ? ಖಂಡಿತಾ ಇಲ್ಲ. ಆ ಭಗವಾನ್ ಬುದ್ಧ ಕಿಸ ಗೌತಮಿಯೊಂದಿಗೆ, 'ಸಾವಿಲ್ಲದ ಮನೆಯ ಸಾಸಿವೆ ತಾ, ನಿನ್ನ ಮಗುವನ್ನು ಬದುಕಿಸುತ್ತೀನಿ' ಎಂದು ಹೇಳುವ ಬದಲು, 'ಜೀವಮಾನದಲ್ಲಿ ಒಮ್ಮೆಯೂ ಜಗಳವಾಡದೆ ಇರುವ ಗಂಡ-ಹೆಂಡಿರ ಮನೆಯಿಂದ ಸಾಸಿವೆ ತಾ' ಎಂದೇನಾದರೂ ಹೇಳಿದ್ದರೆ ಸಾವಿಲ್ಲದ ಮನೆಯ ಸಾಸಿವೆಯಂತೇ ನಿರಾಶೆ ಕಾಯ್ದಿರುತ್ತಿತ್ತು ಅಥವಾ 'ಸ್ವಾಮಿ, ನೀವು ಅಸಾಧ್ಯವಾದುದನ್ನು ಹೇಳುತ್ತಿದ್ದೀರಾ. ದಯಮಾಡಿ ಬೇರೇನಾದರೂ ಉಪಾಯ ಹೇಳಿ' ಎಂದು ಅವಳೇ ಅಂಗಲಾಚುತ್ತಿದ್ದಳೇನೋ?

ಅದಿರಲಿ, ಗಂಡ-ಹೆಂಡತಿ ನಡುವೆ ಜಗಳ ಆಗಕ್ಕೆ ಕಾರಣ ಬೇಕೇ? ಅವರಿಬ್ಬರೂ ಗಂಡ-ಹೆಂಡತಿ ಎನ್ನುವ ಕಾರಣವೇ ಸಾಲದೇ, ಎನ್ನುತ್ತೀರೇನೋ? ಇರಲಿ, ಕೆಳಗೆ ಕೆಲವು ಸಣ್ಣ ಪುಟ್ಟ ಕಾರಣಗಳು ಹೇಗೆ ಜಗಳಕ್ಕೆಡೆ ಮಾಡುತ್ತವೆ ಎಂಬ ಉದಾಹರಣೆಗಳಿವೆ. ಗಂಡ ಹೆಂಡಿರ ಜಗಳ ಹೇಗೆ? ಏಕೆ? ಎಲ್ಲಿ? ಯಾವಾಗ ಆರಂಭವಾಗುತ್ತದೋ ಆ ಜಗನ್ನಾಟಕ ಸೂತ್ರಧಾರಿಗೂ ತಿಳಿಯುವುದಿಲ್ಲಾಂತೀನಿ!

ಆದರೂ, ಮೊನ್ನೆ ವಾಟ್ಸ್‌ಆಪ್‌ನಲ್ಲಿ ಹರಿದು ಬಂದ ಈ ಕಾರಣಗಳು ಹಂಚಿಕೊಳ್ಳಲು ಯೋಗ್ಯವೆನಿಸಿತು.

ಗಂಡ-ಹೆಂಡತಿ ಇಬ್ಬರೂ ರಾತ್ರಿ ಊಟ ಮುಗಿಸಿದರು. ಗಂಡ ಟಿವಿ ಯಾವುದೋ ಸಿನಿಮಾ ನೋಡುತ್ತ ಕುಳಿತ. ಹೆಂಡತಿ ಅಡುಗೆಮನೆ ಕೆಲಸ ಮುಗಿಸಿ ಬಂದು ಅವನ ಪಕ್ಕ ಕುಳಿತಳು. ರಿಮೋಟನ್ನು ಗಂಡನಿಂದ ಕಿತ್ತುಕೊಂಡು, ಚಾನಲ್ ಬದಲಿಸುವ ಮುನ್ನ ಕೇಳಿದಳು, 'ಏನು ನೋಡ್ತಿದೀರಾ?' ಅವಳ ಉದ್ದೇಶ ಸಿನಿಮಾ ಯಾವುದು ಎಂದು ತಿಳಿಯುವುದು.

ಗಂಡ ಹೇಳಿದ 'ಕಚಡಾ' ಅವನು ಉದ್ದೇಶ ಸಿನಿಮಾ ಕಚಡಾ ಆಗಿದೆ, ನೀನು ಬೇಕಾದ್ರೆ ಚಾನಲ್ ಬದಲಾಯಿಸು ಎಂದು. ಅವನು ಪೂರ್ತಿ ಮಾತು ಮುಗಿಸುವ ಮುನ್ನ ಶುರು ಜಗಳ, ಅದೂ ನಾಲ್ಕು ಮನೆಗಳಿಗೆ ಕೇಳುವಂತೆ! ಇಬ್ಬರಿಗೂ ಟಿವಿ ಕಾರ್ಯಕ್ರಮ ಮರೆತು ಹೋಯಿತು. ಜಗಳದ ಕಾರ್ಯಕ್ರಮ ಓತಪ್ರೋತವಾಗಿ ಹರಿಯತೊಡಗಿತು. ಪಕ್ಕದ ಮನೆಯವರಿಗೋ ಪುಕ್ಕಟೆ ಮನರಂಜನೆ. ಅವರು, ಟಿವಿ ಬಂದ್ ಮಾಡಿ ಇವರ ಜಗಳದ ಸವಿ ಅನುಭವಿಸುತ್ತಾ ವಿದ್ಯುತ್ ಉಳಿತಾಯ ಮಾಡಿ ಧನ್ಯರಾದರು.

★★★

ಅವರ ವಿವಾಹ ವಾರ್ಷಿಕೋತ್ಸವ ಇನ್ನೇನು ಹತ್ತಿರ ಬಂತು. ಗಂಡ ಅಂದು ಬೆಳಿಗ್ಗೆ ನಿನಗೇನು ಉಡುಗೊರೆ ತಂದು ಕೊಡಲಿ?' ಎಂದು ಪ್ರೀತಿಯಿಂದ (ಅಥವಾ ಪ್ರೀತಿಯ ನಟನೆ ಮಾಡುತ್ತ?) ಕೇಳಿದ.

‘ಏನು ಕೇಳಿದ್ರೂ ತಂದು ಕೊಡ್ತೀರಾ? ಆಮೇಲೆ ಮಾತಿಗೆ ತಪ್ಪಬಾರದು’ ಅವಳು ಎಚ್ಚರಿಸಿದಳು.

‘ಖಂಡಿತಾ ನೀನು ಕೇಳಿದ್ದು ತಂದು ಕೊಡ್ತೀನಿ, ಅದೇನು ಬೇಕು ಹೇಳು’ ಎಂದ ಗಂಡ ಮಹಾಶಯ.

ಹೆಂಡತಿ ಹೇಳಿದಳು, ತನಗೆ ಮೂರು ಸೆಕೆಂಡುಗಳಲ್ಲಿ 0–100ಗೆ ಏರುವಂತಹ ಉಡುಗೊರೆ ಬೇಕೆಂದು ಬೇಡಿಕೆ ಇಟ್ಟಳು.

‘ಅಷ್ಟೇ ತಾನೇ? ನಾನು ಏನೋಂತಿದ್ದೆ’ ಎಂದು ಗಂಡ ನಿಟ್ಟುಸಿರು ಬಿಟ್ಟ.

ಅವನು ಅತ್ಯಂತ ಪ್ರೀತಿಯಿಂದ ಅವಳ ಬೇಡಿಕೆಯನ್ನು ನೆರವೇರಿಸಿದ. ಅವಳಿಗೊಂದು ತೂಕದ ಯಂತ್ರ ತಂದು ಉಡುಗೊರೆ ನೀಡಿದ!!! ಅದನ್ನು ಕಂಡೊಡನೆ ಅವಳ ಪಿತ್ತ ನೆತ್ತಿಗೇರಿತು. ಇಬ್ಬರ ನಡುವೆ ಘನಘೋರ ಜಗಳ!!!

★★★

ರಾತ್ರಿ ಮನೆಗೆ ಗಂಡ ಬಂದಾಗ, ‘ಯಾಕೋ ಬೆಳಗಿಂದ ಮನೇಲಿದ್ದು ಬೇಜಾರಾಗ್ತಿದೆ. ಎಲ್ಲಿಗಾದರೂ ತುಂಬಾ ದುಬಾರಿ ಎನ್ನಿಸುವಂತಹ ಜಾಗಕ್ಕೆ ಕರ್ಕೊಂಡು ಹೋಗ್ತೀರಾ?’ ಎಂದು ಲಲ್ಲೆಗರೆದಳು ಹೆಂಡತಿ. ಅವಳ ಮನಸ್ಸಿನಲ್ಲಿ ತಾನು ಹಾಗೆ ವೈಯ್ಯಾರದಿಂದ ಕೇಳಿದರೆ ಗಂಡ ತನ್ನನ್ನು ವಜ್ರದ ಆಭರಣದಂಗಡಿಗೆ ಕರೆದೊಯ್ಯುತ್ತಾನೆ ಇಲ್ಲವೆ ಯಾವುದಾದರೂ ಫೈವ್ ಸ್ಟಾರ್ ಹೋಟೆಲ್ಲಿಗಾದರೂ ಕರೆದೊಯ್ಯುತ್ತಾನೆ ಎಂದಿತ್ತು. ಅವಳ ಉದ್ದೇಶವೂ ಅದೇ ಆಗಿತ್ತು. ಅದನ್ನೇ ಸುತ್ತು ಬಳಸಿ ಹೀಗೆ ಕೇಳಿದ್ದಳು.

‘ಅದಕ್ಕೇನು? ಈಗಲೇ ಹೋಗೋಣ’ ಎಂದು ಅವನು ಅವಳನ್ನು ಪೆಟ್ರೋಲ್ ಬಂಕ್‌ಗೆ ಕರೆದೊಯ್ದು, ‘ನೋಡು, ನೀನು ಕೇಳಿದಂತೆ ದುಬಾರಿ ಜಾಗಕ್ಕೆ ಕರೆದುಕೊಂಡು ಬಂದಿದೀನಿ. ಇದಕ್ಕಿಂತ ದುಬಾರಿ ಜಾಗ ಇನ್ನಿಲ್ಲ’ ಎಂದದ್ದೇ ತಡ, ಅಲ್ಲೇ ಇಬ್ಬರ ನಡುವೆ ಜಗಳ ಆರಂಭವಾಯಿತು!!! ಜಗಳದ ಕಾವಿಗೆ ಪೆಟ್ರೋಲ್ ಬಂಕ್ ಹೊತ್ತಿ ಉರಿಯಬಹುದೆಂದು ಬಂಕ್‌ನ ಮಾಲಿಕನಿಗೆ ಹೆದರಿಕೆಯಾಗಿ ಅವರನ್ನು ಬಲವಂತವಾಗಿ ಆಚೆಗಟ್ಟಿದ, ಮತ್ತೆಂದೂ ತಮ್ಮ ಬಂಕ್‌ನತ್ತ ಸುಳಿಯಕೂಡದು ಎಂಬ ಕಟ್ಟುನಿಟ್ಟಾದ ಎಚ್ಚರಿಕೆಯೊಂದಿಗೆ!

★★★

ಅಂದು ಹೆಂಡತಿ ಹೊಸ ಸೀರೆ ಉಟ್ಟು ಕನ್ನಡಿಯ ಮುಂದೆ ನಿಂತು ನಾನಾ ಭಂಗಿಯಲ್ಲಿ ತನ್ನ ರೂಪ ನೋಡಿಕೊಳ್ಳುತ್ತಿದ್ದಳು. ಹೇಳಿ ಕೇಳಿ ಅದು ಕಾಟನ್ ಸೀರೆ, ಸಣ್ಣಗಿರುವವರು ಉಟ್ಟರೂ ದಪ್ಪಗೆ ಕಾಣುತ್ತಾರೆ. ಅಂತಹುದರಲ್ಲಿ ಅವಳು ಧಡೂತಿ ಹೆಂಗಸು. ಇನ್ನು ಹೇಗೆ ಚೆಂದ ಕಾಣಲು ಸಾಧ್ಯ? ಯಾವುದಾದರೂ ಭಂಗಿಯಲ್ಲಿ ತಾನು ಸಣ್ಣಗೆ, ಚೆನ್ನಾಗಿ ಕಾಣಬಹುದೇನೋ ಎಂದು ಎಷ್ಟು ಪ್ರಯತ್ನಿಸಿದರೂ ಫಲಿತಾಂಶ ಮಾತ್ರ ನಿರಾಶಾದಾಯಕವಾಗಿತ್ತು. ಅಷ್ಟರಲ್ಲಿ ಎಂಟರ್ ಗಂಡ!

ಅವನು, 'ನಾನೂ ಆಗ್ಲಿಂದ ದೂರ ನಿಂತು ಗಮನಿಸ್ತಿದೀನಿ. ಅದೇನು ಅಷ್ಟೊಂದು ಕನ್ನಡಿ ಮುಂದೆ ನಿಂತು ಪೋಸ್ ಮೇಲೆ ಪೋಸ್ ಕೊಡ್ತಿದೀಯಾ? ಏನಾದ್ರೂ ಬ್ಯೂಟಿ ಕಂಟೆಸ್ಟ್ ಇದ್ಯಾ ನಿಮ್ಮ ಲೇಡೀಸ್ ಕ್ಲಬ್‌ನಲ್ಲಿ' ಎಂದ ನಗುತ್ತ.

'ಅದೆಲ್ಲಾ ಏನೂ ಇಲ್ಲ. ಯಾಕೋ ಈ ನಡುವೆ ವಿಪರೀತ ದಪ್ಪ ಆಗಿ, ವಿಕಾರಕ್ಕೆ ಕಾಣೀಸ್ತಿದೀನಿ ಅನ್ನಿಸ್ತು, ಅದಕ್ಕೆ ಕನ್ನಡೀಲಿ ಚೆಕ್ ಮಾಡ್ತಿದ್ದೆ. ನೀವೇನು ಹೇಳ್ತೀರಾ?' ಎಂದಳು ವೈಯ್ಯಾರದಿಂದ.

ಗಂಡನ ಉವಾಚ, 'ಅಟ್ ಲಾಸ್ಟ್, ಒಮ್ಮೆಯಾದರೂ ನೀನು ಹೇಳಿದ್ದು ಸರಿಯಾಗಿದೆ. ನಿನ್ನ ಅಭಿಪ್ರಾಯವೇ ನಂದೂ ಕೂಡ' ಆರಂಭವಾದ ಜಗಳ ಸಂಜೆಯವರೆಗೆ ಮುಂದುವರೆದಿತ್ತು. ಅಂದು ಅವಳು ಅಡುಗೆ ಕೂಡ ಮಾಡಲಿಲ್ಲ. ತಾನು ಹೋಟೆಲ್‌ನಲ್ಲಿ ತಿಂದು, ಹೆಂಡತಿಗೂ ತಂದುಕೊಟ್ಟು, ಅವಳಿಗಿಷ್ಟವಾದ ಸಿನಿಮಾಗೆ ಕರೆದೊಯ್ದು, ನಂತರ ಸೀರೆ ಅಂಗಡಿಯಲ್ಲಿ ಒಂದೆರಡು ದುಬಾರಿ ಸೀರೆ ಕೊಡಿಸಿದ ನಂತರವೇ ಅವಳ ಕೋಪ ಸ್ವಲ್ಪ ಇಳಿಯಿತು. ಸುಳ್ಳು ಹೇಳಿದ ಪಾಪ ಬಂದರೂ ಚಿಂತೆ ಇಲ್ಲ, ಇನ್ನು ಮೇಲೆ ಹೀಗೆ ಸತ್ಯ ಹೇಳಿ ಸಿಕ್ಕಿ ಹಾಕ್ಕೋ ಬಾರದು ಎಂದು ಖಾಲಿಯಾದ ಜೇಬಿನ ಬಗ್ಗೆ ದುಃಖ ಪಡುತ್ತ ಗಂಡ ತೀರ್ಮಾನ ಮಾಡಿದ.

★★★

ಅವತ್ತು ಗಂಡನಿಗೆ ಇಷ್ಟ ಎಂದು ಹಿತಗವರೆ ಹುಳಿ ಮಾಡಿದ್ದಳು.

'ಅಡುಗೆ ಹೇಗಿದೆ?' ಗಂಡನೊಂದಿಗೆ ಊಟ ಮಾಡುತ್ತ ಹೆಂಡತಿ ವೈಯ್ಯಾರದಿಂದಲೇ ಕೇಳಿದಳು.

ಗಂಡ ಜಾಣನಾಗಿದ್ದರೆ, 'ತುಂಬಾ ಚೆನ್ನಾಗಿದೆ' ಎಂದು ಎರಡು ಪದಗಳ ಉತ್ತರ ಹೇಳಿ ತಪ್ಪಿಸಿಕೊಳ್ಳಬಹುದಿತ್ತು. ಆದರೆ ಗಂಡಸಿಗೆ ಅಂತಹ ಜಾಣತನ? ಸ್ವಲ್ಪ ಅಪರೂಪವೇ.

'ಸ್ವಲ್ಪ ಮಸಾಲೆ ಜಾಸ್ತಿ ಹಾಕೀದೀಯ ಕಣೆ. ಹಿತಗವರೆ ಅಂದರೆ ಅಮ್ಮ ಮಾಡ್ತಿದ್ರು, ಆಹಾ, ಆ ರುಚಿ ಎಲ್ಲೂ ಸಿಗಲ್ಲ' ಎಂದು ಸತ್ಯ ಹರಿಶ್ಚಂದ್ರನ ಅಪರಾವತಾರದಂತೆ ಸತ್ಯ ನುಡಿದು, ಇನ್ನಿಲ್ಲವಾದ ಅಮ್ಮನ ಕೈರುಚಿಯ ನೆನಪಿನಿಂದ ಕಣ್ಣು ಒದ್ದೆಯಾಗಿ, ಅದನ್ನು ಒರೆಸಿಕೊಂಡ.

ಹೆಂಡತಿಗೆ ಅಷ್ಟು ಸಾಕಾಯಿತು. ನಿಮಗೆ ನಾನಂದ್ರೆ ಲೆಕ್ಕ ಇಲ್ಲ. ಬೆಳಗಿಂದ ಸಂಸಾರಕ್ಕೋಸ್ಕರ ದುಡಿದು ಸಾಯ್ತೀನಿ. ಈಗ್ಲೂ ಅಮ್ಮನ ಕೈರುಚೀನೆ ನಿಮಗೆ ಚೆಂದ. ಒಮ್ಮೆ, ಒಮ್ಮೆ, ನೀ ಮಾಡಿದ್ದು ಚೆನ್ನಾಗಿದೇಂತ ಹೇಳಿದೀರಾ? ನನ್ನನ್ನು ಕಂಡ್ರೆ ನಿಮಗಾಗಲ್ಲ. ಈ ಚೆಂದಕ್ಕೆ ಮದ್ವೆ ಯಾಕೆ ಮಾಡ್ಕೊಂಡ್ರಿ? ನನ್ನ ಗ್ರಹಚಾರ ಚೆನ್ನಾಗಿಲ್ಲ' ಹೀಗೆ ಓತಪ್ರೋತವಾಗಿ ಹರಿದ ಅವಳ ಗೋಣಗಾಟ, ಕೊನೆಗೆ ಕಣ್ಣೀರಲ್ಲಿ ಕೊನೆಮುಟ್ಟಿತು.

ತನ್ನ ತಪ್ಪಿಗೆ ಪ್ರಾಯಶ್ಚಿತ್ತವಾಗಿ ಗಂಡ ಸಾಕಷ್ಟು ದಂಡ (ಉಡುಗೊರೆಗಳ ರೂಪದಲ್ಲಿ) ತೆತ್ತು ಅವಳನ್ನು ಸಮಾಧಾನಿಸ ಬೇಕಾಯಿತೂನ್ನಿ.

★★★

ಈ ಜಗಳದ ಮಾದರಿ ನೋಡಿ ಹೇಗಿದೆ?

‘ಇದೇನು ಈವತ್ತು ರಾಯರು ಈ ಪಾಟಿ ಖುಷಿಯಾಗಿದೀರಾ? ಪ್ರೊಮೋಶನ್ ಏನಾದ್ರೂ ಸಿಗ್ತಾ?’

‘ಅದೆಲ್ಲಾ ಏನೂ ಇಲ್ಲ. ಅಮ್ಮ ಫೋನ್ ಮಾಡಿದ್ರು?’

ಹೆಂಡತಿಯ ಧ್ವನಿ ಪ್ರೀತಿಯ ಧಾಟಿಯಿಂದ ಥಟ್ಟನೆ ಅಸಮಾಧಾನದತ್ತ ಹೊರಳಿತು.

‘ಏನಂತೆ ಫೋನ್ ಮಾಡಿದ್ದು? ಅವರಿಗಿನ್ನೇನು ಕೆಲಸ, ದಿನಕ್ಕೆ ನಾಲ್ಕು ಸಾರಿ ಮಗನಿಗೆ ಫೋನ್ ಮಾಡೋದು ಬಿಟ್ರೆ?’

‘ಅಲ್ವೇ? ದಿನಕ್ಕೆ ನಾಲ್ಕು ಸಾರಿ ಫೋನ್ ಮಾಡಿ ಗಂಟೆಗಟ್ಟಲೆ ನಿನ್ಹತ್ರ ಮಾತಾಡೊದು ನಿನ್ನಮ್ಮ? ನನ್ನಮ್ಮ ಮಾತ್ರ ನನ್ಹತ್ರ ಎಂಟು ದಿನಕ್ಕೆ ಒಂದು ಸಾರಿ ಮಾತಾಡಿದ್ರೆ ಹೀಗಾಡ್ತೀಯಲ್ಲ?’

‘ನನ್ನಮ್ಮ ಮಗಳ ಮೇಲಿನ ಪ್ರೀತಿಯಿಂದ ಮಾತಾಡ್ತಾರೆ. ಆದರೆ ನಿಮ್ಮಮ್ಮ ನಿಮ್ಮ ಮೇಲೆ ಅಧಿಕಾರ ಚಲಾಯ್ಸೋಕೇ ಫೋನ್ ಮಾಡೋದು?’

‘ಆ… ಪಾಪ, ನಮ್ಮಮ್ಮ ಅಲ್ಲೆಲ್ಲೋ ಕೂತ್ಕೊಂಡು ನನ್ನ ಮೇಲೆ ಹೇಗೆ ಅಧಿಕಾರ ಚಲಾಯಿಸ್ತಾರೆ? ಸುಮ್ಮನೆ ನಾಲಿಗೆ ಹರೀ ಬಿಡ್ಬೇಡ. ಇನ್ನೂ ನಿಮ್ಮಮ್ಮನೇ ನಮ್ಮನೆ ಎಲ್ಲಾ ವಿಷಯಕ್ಕೆ ಮೂಗು ತೂರಿಸ್ಕೊಂಡು ಬರೋದು. ಅವರು ಫೋನ್ ಮಾಡ್ದಾಗೆಲ್ಲಾ ನಿಂದು ಏನೋ ಕಿತಾಪತಿ ಇದ್ದೆ ಇರತ್ತೇಂತ ನಂಗೊತ್ತಿಲ್ವಾ?’

‘ಸರಿ, ಈ ಜಗಳ ಮುಂದುವರೆದು, ಅವಳ ಕಣ್ಣಲ್ಲಿ ಕಣ್ಣೀರ ಕೋಡಿ ಹರಿದು’ ಅದಕ್ಕೆ ಕಟ್ಟೆ ಕಟ್ಟಿ ನಿಲ್ಲಿಸುವ ವೇಳೆಗೆ ಅವರಿಗೆ ತಾವೇಕೆ ಜಗಳವಾಡಿದೆವೆಂಬ ವಿಷಯ ಮರೆತು ಹೋಗಿತ್ತು.

★★★

‘ಲೇ ಅಮ್ಮ ಬರ್ತಾರಂತೆ, ಎಂಟು ದಿನ ಇರಕ್ಕೆ. ಅವರನ್ನ ಪ್ರೀತಿಯಿಂದ ನೋಡ್ಕೊಳೆ.’

‘ಏನ್ರೀ, ಹೀಗೆ ಮಾತಾಡ್ತೀರಾ? ನಾನೇನು ನಿಮ್ಮಮ್ಮನ್ನ ಉಳ್ಳುಳ್ಳಾಯಿ ಅಂತ ಎತ್ಕೊಂಡು ಮುದ್ದು ಮಾಡ್ಬೇಕಾ? ಬರ್ತಾರೆ. ಇರ್ತಾರೆ, ಹೋಗ್ತಾರೆ. ಹಾಗಂತ ನನ್ನ ಕೆಲಸ ಎಲ್ಲಾ ಬಿಟ್ಟು ಅವರ ಸೇವೆ ಮಾಡ್ಕೊಂಡು ಕೂತಿರ್ಲಾ?’

‘ನಾನು ಹಾಗೆಲ್ಲಿ ಹೇಳಿದೆ? ಅವರ ಜೊತೆ ನಯ, ವಿನಯದಿಂದ ನಡ್ಕೊ ಅಂತ ಹೇಳ್ದೆ ಅಷ್ಟೇ. ಅಷ್ಟೂ ನಿನ್ನಿಂದಾಗಲ್ವಾ?’

ನೀವು ಹೇಳ್ದಾಗೆಲ್ಲಾ ಮಾಡಕ್ಕೆ ಆಗಲ್ಲ. ನಿಮ್ಮಮ್ಮ ಬಂದಾಗ ನೀವು ರಜಾ ಹಾಕಿ ನಿಮ್ಮಮ್ಮನ್ನ ಪ್ರೀತಿಯಿಂದ ನೋಡ್ಕೊಳಿ. ನಾನು ನನ್ನಮ್ಮನ ಮನೆಗೆ ಹೋಗ್ತೀನಿ.’

‘ಹಾಗಾ? ಸರಿ, ನಿಮ್ಮಮ್ಮ ಬರ್ಲಿ, ನಾನೂ ನೋಡ್ಕೊತೀನಿ.’

‘ಏನ್ರೀ? ಏನು ಮಾಡ್ತೀರಾ? ಏನ್ರೀ ಹಾಗಂತೀರಾ?’

‘ಅಲ್ವೆ, ನಮ್ಮಮ್ಮ ಬಂದಾಗ ನಾನು ಊರಿಗೆ ಹೋಗ್ತೀನಿ ಅಂದ್ಯಲ್ಲಾ, ನಾನು ನನಗೆ ಬೇಕಾದ್ದು ಮಾಡ್ತೀನಿ,’

‘ಫೋನ್ ರಿಂಗ್ ಆಗ್ತಿದೆ. ನಿಮ್ಮ ಮುದ್ದಿನ ಅಮ್ಮಂದೇ ಇರ್ಬೇಕು. ಹೋಗಿ ನೋಡಿ.’

‘ಅಮ್ಮ ಬರಲ್ವಂತೆ. ಪಾಪ, ಅಪ್ಪಂಗೆ ಹುಷಾರು ತಪ್ಪಿಹೋಯ್ತಂತೆ, ಅಮ್ಮ ಅವರ ಪ್ರೋಗ್ರಾಮ್ ಕ್ಯಾನ್ಸಲ್ ಮಾಡಿದಾರೆ.’

‘ಹೋಗಲಿ ಬಿಡಿ. ನಿಮ್ಮಮ್ಮ ಬರಲ್ಲಾಂದ್ರು. ನೋಡ್ರೀ, ನಮ್ಮಮ್ಮ ಬರ್ತೀನಿ ಅಂತ ಮೆಸೇಜ್ ಮಾಡಿದಾರೆ. ನಾಳೇನೇ ಬರ್ತಾರಂತೆ. ಮಾಲ್ ಹೋಗಿ, ಅವರಿಗೆ ಏನೇನು ತರಕಾರಿ ಇಷ್ಟಾನೋ ಅದೆಲ್ಲಾ ತರೋಣ, ಬರ್ತೀರಾ?’

ನಿಮ್ಮಮ್ಮಂಗೆ ರಾಜೋಪಚಾರ. ನನ್ನಮ್ಮಂಗೆ ಅವರು ಬರೋದೇ ಅಪರೂಪ, ಬಂದಾಗ ಚೆನ್ನಾಗಿ ನೋಡ್ಕೊಳೇಂದ್ರೆ ಜಗಳ ಆಡ್ಕೊಂಡು ಊರಿಗೆ ಹೋಗ್ತೀನೀಂತೀಯಾ. ಇದ್ಯಾವ ನ್ಯಾಯ? ನೋಡು, ಬೇಕಿದ್ರೆ, ನೀನು ಮಾಲ್‌ಗೆ ಹೋಗಿ ಏನು ಬೇಕೋ ತೊಗೊಂಬಾ. ನನ್ನನ್ನು ಕರೀಬೇಡ. ನಾನು ಕ್ರಿಕೆಟ್ ಮ್ಯಾಚ್ ನೋಡ್ಬೇಕು.’

ಅವರ ಜಗಳಕ್ಕೆ ಅಂತ್ಯವೇ ಇಲ್ಲ. ಏಕೆಂದರೆ, ಅವನ ಅಮ್ಮ ಬರುವುದು ಅವಳಿಗೆ ಬೇಡ, ಅವಳ ಅಮ್ಮ ಬರುವುದು ಅವನಿಗೆ ಬೇಡ.

★★★

ಇವು ಕೆಲವು ಮಾದರಿಗಳಷ್ಟೆ. ನಿಮ್ಮ ಅನುಭವದಂತೆ ಇನ್ನೂ ಹಲವಾರು ಪ್ರಸಂಗಗಳನ್ನು ಸೇರಿಸಿಕೊಳ್ಳಬಹುದು.

●

## ವೈಎನ್ಕೆ ಅವರ ಕೊನೆ ಸಿಡಿ

ಇಂಥ ಮನುಷ್ಯರು ಹುಡುಕಿದರೂ ಸಿಗುವುದು ಕಷ್ಟ. ಉದಾಹರಣೆಗೆ ಇಂದು ಅವರನ್ನು ಪತ್ತೆ ಹಚ್ಚಲು ನಾವು ಮೂರು ಬಾರ್‌ಗಳು, ಒಂದು ವೈನ್ ಷಾಪಿಗೆ ಹೋಗಬೇಕಾಯಿತು.

***

ಈ ರಾತ್ರಿ ನಾನು ದೀರ್ಘ ಭಾಷಣ ಮಾಡಿ ಕೊರೆಯುವುದಿಲ್ಲ. ಹಾಗೆ ಮಾಡುವವರನ್ನು ನಾನು ಈಗ ನಿಮಗೆ ಪರಿಚಯ ಮಾಡಿಕೊಡುತ್ತೇನೆ.

***

ಈಗ ಈ ತಲೆಮಾರಿನಲ್ಲೇ ಅತ್ಯಂತ ಬುದ್ಧಿವಂತ, ಆಕರ್ಷಕ, ಸ್ಫುರದ್ರೂಪಿ ಮತ್ತು ಪ್ರಖರಮತಿ ವ್ಯಕ್ತಿಯನ್ನು ಪರಿಚಯ ಮಾಡಿಕೊಡುತ್ತೇನೆ. ಇದು ನನ್ನ ಅಭಿಪ್ರಾಯ ಮಾತ್ರವಲ್ಲ. ಅವರದೂ ಕೂಡ.

ಆತನ ಜನಪ್ರಿಯತೆ ಎಷ್ಟು ಕೆಳಗೆ ಇಳಿದಿದೆ ಎಂದರೆ ಅವನು ಒಬ್ಬನೇ ಚುನಾವಣೆಗೆ ನಿಂತರೂ ಠೇವಣಿ ಕಳೆದುಕೊಳ್ಳುತ್ತಾನೆ.

# ಸೊಳ್ಳೆ ಸ್ವಗತ

**- ನಂನಾಗ್ರಾಜ್**

**ನ**ಮ್ಮ ಆಕ್ರಮಣಕ್ಕೆ ಹೆದರಿ ಸಂಜೆ 5 ಗಂಟೆ ಆಗುತ್ತಿದ್ದ ಹಾಗೆ ಪ್ರತಿ ದಿನ ಚಾಚೂ ತಪ್ಪದೆ ಕಿಟಕಿ, ಬಾಗಿಲುಗಳನ್ನು ಮುಚ್ಚುತ್ತೀರ. ತಮಾಷೆ ಎಂದರೆ ನಮ್ಮಲ್ಲಿ ಕೆಲವರು ನಿಮ್ಮ ಮನೆಯಲ್ಲಿ ಖಾಯಂ ಆಗಿ ನೆಲಸಿದ್ದರೆ, ಮತ್ತು ಕೆಲವರು 5 ಗಂಟೆಗೆ ಮುಂಚಿತವಾಗಿಯೇ ನಿಮ್ಮ ಮನೆ ಸೇರಿಕೊಂಡಿರುತ್ತಾರೆ. ಹಾಗಿಲ್ಲದಿದ್ದರೂ ಕಿಂಡಿಗಳಿಗೇನು ಕೊರತೆಯೇ? ಹೇಗೋ ನುಸುಳಿ ನುಗ್ಗಿ ಬಿಡುತ್ತೇವೆ. ಕಿಂಡಿಯ ಆಚೆ ಯಾವ ವೀರವನಿತೆಯರೂ ಇರೋಲ್ಲ ಅದು ಆ ಕಾಲಕ್ಕೇ ಹೋಯ್ತು.

**ಸೊಳ್ಳೆಗಳು ತಮ್ಮ ವಾದವನ್ನು ತೋಡಿಕೊಂಡರೆ ಹೇಗಿರಬಹುದು?**

ಯಕಶ್ಚಿತ್ ನಮ್ಮ ಸೊಳ್ಳೆ ಪರಿವಾರವನ್ನು ಎದುರಿಸಲು ವಿವಿಧ ಯೋಜನೆಗಳನ್ನು ರಚಿಸುತ್ತೀರ, ಹಾಗೂ ಉತ್ಪನ್ನಗಳನ್ನು ತಯಾರಿಸುತ್ತೀರಿ. ವಾಹ್! ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ.

**ಸೊಳ್ಳೆಪರದೆ:** ಸುಸ್ತಾಗಿದ್ದು ಹಾಗೂ ನಿದ್ದೆಗಣ್ಣಿನಲ್ಲಿ ಈ ಪರದೆಯನ್ನು ಗೊಣಗುತ್ತಾ ಕಟ್ಟುತ್ತೀರ. ಆದರೆ ನಮ್ಮಲ್ಲಿ ಒಬ್ಬರೋ ಇಬ್ಬರೋ ಹೇಗೋ ಒಳಗೆ ನುಸುಳಿ 'ಪರದೇ ಮೇ ರಹೆನೇ ದೋ......' ಅಂತ ಪ್ರಾರ್ಥಿಸಿಕೊಂಡು ಆಯಕಟ್ಟಿನ ಜಾಗ ಸೇರ್ಕೋತೀವಿ. ನಮ್ಮಲ್ಲಿ ಒಬ್ಬರು ಸಾಕು ರೀ ನಿಮ್ಮ ನಿದ್ದೆ ಹಾಗೂ ನೆಮ್ಮದಿಯನ್ನು ಹಾಳು ಮಾಡಲು!

**ಓಡೊಮೋಸ್:** ಇದು ನಿಮ್ಮ ಇನ್ನೊಂದು ಅಸ್ತ್ರ. ಇಷ್ಟವಿಲ್ಲದಿದ್ದರೂ ಇದನ್ನು ಮೈ, ಕೈಗೆ ಬಳಿದುಕೊಂಡು ಯುದ್ಧಕ್ಕೆ ಹೊರಟ ರೆಡ್ ಇಂಡಿಯನ್ ತರಹ ಪೋಸ್ ಕೊಟ್ಕೊಂಡು ಕುಳಿತ್ಕೊತೀರ. ಸದ್ಯ ಅವರ ಹಾಗೆ ರೆಕ್ಕೆ ಪುಕ್ಕ ತಲೆಗೆ ಸಿಕ್ಕಿಸಿಕೊಳ್ಳದೆ ಹಾಗೂ ಕವಡೆ, ಹುಲಿ ಉಗುರು ಕತ್ತಿಗೆ ನೇತ್ಹಾಕ್ಕೋಳ್ದೆ! ಪಾಪ! ಫೇಸ್ ಕ್ರೀಂ ಗಿಂತ ಈ ಕ್ರೀಮ್‌ಗೆ ಜಾಸ್ತಿ ಖರ್ಚು ಮಾಡ್ತೀರಾ ಅಂತ ನಮಗೆ ಗೊತ್ತು.

**ಮಸ್ಕಿಟೊ ಕಾಯಿಲ್:** ಇದನ್ನು ಬಿಟ್ಹಾಕಿ, ನಡೆಯೋದಿಲ್ಲ. ಈ ಕಾಯಿಲ್‌ಗಳಿಗೆಲ್ಲ ರಿಕಾಯಿಲ್ ಆಗೋ ಅಷ್ಟು ಬಲಹೀನರಲ್ಲ ನಾವು. ಉರಿಯೋ ಕಾಯಿಲ್ ಉರೀತಿರಲಿ ಹೀರೋ ರಕ್ತ ಹೀರ್ಬಿಡ್ತೀವಿ. ಇದರದೆ ಒಂದು ಮುಂದುವರೆದ ಅವತಾರ ತಂದಿದ್ದೀರ. ಅದೇ ಬ್ಲಾಟಿಂಗ್ ಪೇಪರ್ ತರಹದ್ದು. ಮರಗಳನ್ನು ಉಳಿಸಲು ಪೇಪರ್‌ಲೆಸ್ ಸಮಾಜದ ಗುರಿ ಇಟ್ಕೊಂಡ ನೀವು ನಮ್ಮನ್ನು ಓಡಿಸಲು/ ಸಾಯಿಸಲು ಈ ಪೇಪರ್ ತಯಾರಿಸ್ತೀರಲ್ರೀ! ಎಂತಹ ವಿಪರ್ಯಾಸ!

**ಇಲೆಕ್ಟ್ರಾನಿಕ್ ರಿಪೆಲಂಟ್:** ನಮ್ಮನ್ನು ಎದುರಿಸಲು ಅದೆಷ್ಟು ಸಂಶೋಧನೆಗಳಾಗಿವೆ ಅಲ್ಲವೇ? ಒಳ್ಳೆಯದು. ನಿಮ್ಮ ಮೆದುಳಿಗೆ ಕಸರತ್ತು ನೀಡಿ ನಿಮ್ಮಲ್ಲಿ ಕ್ರಿಯಾಶೀಲತೆ ಹುಟ್ಟಿಸುತ್ತೆ! ಕೆಂಡಕ್ಕೆ ಹೆದರದೇ ಇರುವ ನಾವು ಈ ಪುಟಕೋಸಿ ಲೈಟ್‌ಗೆ ಹೆದರುತ್ತೀವಾ?

ಇವೆಲ್ಲ ನಮ್ಮನ್ನು ಅಲುಗಾಡಿಸುವುದೂ ಇಲ್ಲ. ಪ್ರಾರಂಭದಲ್ಲಿ ಸ್ವಲ್ಪ ಕಷ್ಟ ಅನುಭವಿಸಿ ಈಗ ಇಮ್ಯುನಿಟಿ ಬೆಳೆಸಿಕೊಂಡಿದ್ದೇವೆ. ಜಾಹಿರಾತುಗಳ ಬಲೆಗೆ ಬಿದ್ದು, ವೃಥಾ ಹಣ ಪೋಲು ಮಾಡುತ್ತಿದ್ದೀರ.

**ಹಿಟ್ ಸ್ಪ್ರೇ:** ಪ್ರಾರಂಭದಲ್ಲಿ ಸ್ವಲ್ಪ ಉಸಿರು ಸಿಕ್ಕಿ ಹಾಕ್ಕೊಂಡ ಹಾಗಾಯ್ತು, ಸೆಂಟೆಡ್ ಸ್ಪ್ರೇ ಅಲ್ವೇ ಈಗೆಲ್ಲ ಅದು ಷವರ್ ಎಚ್ ಆಯ್ತು ಫರ್ಫ್ಯೂಮ್ ಎಚ್ ಆಯ್ತು. ಹಿಟ್‌ನ ಒಂದೆರಡು ಕಣ ಬಾಯೊಳಗೆ ಹೋಗುವುದರಿಂದ ಗಟ್ಟಿಯಾಗ್ತಿದೀವಿ. ಹಿಟ್ಟಂ ತಿಂದಂ ಬೆಟ್ಟಂ ಕಿತ್ತಂ!.

ನಮ್ಮನ್ನು ದೂರವಿಡಲು ಹಾಗೂ ಸಂಹರಿಸಲು ಇಷ್ಟೊಂದೆಲ್ಲ ಉತ್ಪನ್ನಗಳು ತಯಾರಾಗುತ್ತಿವೆ. ಅಂದರೆ ನಿಮ್ಮ ವಾಣಿಜ್ಯ ಕ್ಷೇತ್ರಕ್ಕೆ ನಮ್ಮ ಕೊಡುಗೆ ಕಮ್ಮಿ ಏನೂ ಇಲ್ಲ ಅಲ್ವಾ? ಇದಲ್ಲದೆ ಸಹಸ್ರಾರು ಮಂದಿಗೆ ಉದ್ಯೋಗ ಪ್ರಾಪ್ತಿ ಕೂಡ. ನಮ್ಮಿಂದ ಲೋಕ ಕಲ್ಯಾಣವಾಗ್ತಿದೆ ಅಂತ ನಮ್ಮ ಬಗ್ಗೆ ನಮಗೆ ಹೆಮ್ಮೆ ಆಗ್ತಿದೆ. ನಿಮಗೆ?!

ರಕ್ತದಾನ ಮಹಾದಾನ ಅಂತೆ ತಮಟೆ ಹೊಡೆಯುತ್ತೀರ ಹಾಗೂ ಅದನ್ನು ಪ್ರೋತ್ಸಾಹಿಸುತ್ತೀರ. ಅದು ನಮ್ಮ ಆಹಾರವೂ ಆಗಿರೋಣ. ಅನ್ನದಾನವೂ ಆಯ್ತು ರಕ್ತದಾನವೂ ಆಯ್ತು. ಡಬಲ್ ಧಮಾಕ! ಏನಂತೀರಿ?

ಅಂದ ಹಾಗೆ ನಿಮ್ಮ ರಕ್ತ ನಮಗೆ ಆಹಾರ ಮಾತ್ರ ಅಲ್ಲ ರೀ ಕಾಕ್‌ಟೇಲ್ ಹಾಗೂ ಡೆಸರ್ಟ್ ಕೂಡ! ಯಾರ ರಕ್ತದಲ್ಲಿ ಆಲ್ಕೋಹಾಲ್ ಇದೆ ಮತ್ಯಾರಲ್ಲಿ ಶುಗರ್ ಇದೆ ಎಂಬುದನ್ನು ವಾಸನೆಯಿಂದಲೇ ಕಂಡು ಹಿಡಿದುಬಿಡುತ್ತೇವೆ. ಬೇಕು ಎನಿಸಿದಾಗ ಆಯಾ ಪಂಗಡದವರ ರಕ್ತ ಹೀರುತ್ತೇವೆ. ಆಲ್ಕೋಹಾಲ್‌ಗೆ ಟೊಮ್ಯಾಟೋ ಕೆಚಪ್ಪೋ ಎಂತದೋ ಬೆರೆಸಿ ಬ್ಲಡಿ ಮೇರಿ ಅಂತ ಹೆಸರಿಟ್ಟು ಕುಡಿಯುತ್ತೀರಿ. ನಿಮ್ಮಲ್ಲಿನ ಕುಡುಕರ ಗ್ರೂಪ್‌ನಿಂದ ನಾವು ಹೀರುವ ರಕ್ತವೇ ಅಸಲಿ ಬ್ಲಡಿ ಮೇರಿ ತಿಳೀತಾ? ನಿಮ್ಮಲ್ಲಿ ಸಕ್ಕರೆ ಖಾಯಿಲೆ ಇರುವವರು ಕಮ್ಮಿ ಇಲ್ಲ. ಡೆಸರ್ಟ್‌ಗಾಗಿ ಇವರುಗಳಿಗೆ ಲಗ್ಗೆ ಇಡುತ್ತೇವೆ. ಈ ಮಧ್ಯೆ ಮಾಮೂಲಿ ರಕ್ತ ಸೇವನೆ ಇದ್ದೇ ಇರುತ್ತೆ. ಹೆಂಗೆ?

ಈ ತರಹದ ಕಲುಷಿತ ರಕ್ತಾಭ್ಯಾಸ ಮಾಡಿಸಿ ನಮ್ಮಲ್ಲಿನ ಲಕ್ಷಾಂತರ ಮಂದಿಯನ್ನು ಕೆಡಿಸಿಬಿಟ್ಟಿದ್ದೀರಿ ಕೂಡ. ಕೋತಿ ತಾನು ಕೆಡೋದಲ್ದೆ...... ಗುಂಯ್ ಅಂತ ಹಾಡ್ತಾ ಹತ್ತಿರ ಸುಳಿದರೆ ಚಪ್ಪಾಳೆ ಹೊಡೆಯುತ್ತೀರ. ಮೆಚ್ಚುಗೆಗಾಗಿ ಅಲ್ಲ, ಸಾಯಿಸಲು ಅಷ್ಟೆಲ್ಲ ಶಬ್ದ ಮಾಲಿನ್ಯದ ಮಧ್ಯೆ ನಿರಾತಂಕವಾಗಿ ಜೀವಿಸ್ತಿದ್ದೀರ. ನಮ್ಮ ಹಾಡು ಸಹಿಸೊಲ್ವಲ್ಲ. ಅಸಂಖ್ಯಾತ ಜೀವರಾಶಿಯಲ್ಲಿ ನಮ್ಮ ಪಂಗಡದವರು ಮಾತ್ರವೇ ಅಲ್ಲವೇ ಹಾಡ್ಕೊಂಡು ಕೆಲಸ ಮಾಡ್ಕೊಳ್ಳೋದು? ನೀವು ಇದ್ದೀರ ಗೊಣಗಿ, ಗೊಣಗಿ ಕೆಲಸ ಮಾಡ್ಕೊಂಡು.

ನಾವು ನಿಮ್ಮ ಮೇಲೆ ಕೂರೊಕ್ಕಿಲ್ಲ ಆಗಕ್ಕಿಲ್ಲ ಫಟ್ ಅಂತ ಹೊಡೀತೀರ. ಆದರೆ ನಾವು ನುಣಿಚಿಕೋತೀವಿ. ಶಬ್ದ ನಮಗೆ ಏಟು ನಿಮಗೆ!. ಪಾಪ ಹೀಗೆ ಮೈಕೈಯೆಲ್ಲ ಹೊಡ್ಕೋಳೋ ಹಾಗೆ ಮಾಡಿ, ಮನರಂಜನೆಯ ಮಜಾ ತೆಗೆದುಕೊಂಡು, ಹೇಗೋ ಸಂದೀಲಿ ಸಮಾರಾಧನೆ ಮುಗಿಸ್ಕೊಂಡು ನೀವು ಶಾಪ ಹಾಕ್ತಾ ಕೆರಕೊಳ್ತಿರುವಾಗ ಕಳಚಿಕೊಳ್ತೀವಿ.

ಎರಡು ಸಲ ಸೀನಿದರೆ ನರ್ಸಿಂಗ್ ಹೋಂಗೆ ಓಡಿ ಹೋಗಿ ದಬ್ಬಳದ ದಪ್ಪ ಸೂಜಿಯಲ್ಲಿ ದುಬಾರಿ ದುಡ್ಡು ತೆತ್ತು ದಬ್ಬಿಸ್ಕೊಂಡೀರ. ಇದಕ್ಕೆ ಹೋಲಿಸಿದರೆ ನಮ್ಮ ನ್ಯಾನೋ ಮುಳ್ಳು ಎಳ್ಳಷ್ಟು ಇಲ್ಲ. ಇನ್ನೂ ಮುಟ್ಟಕ್ಕಿಲ್ಲ ಮುಲಗ್ತೀರ. ಎಲ್ಲಾ ನಾಟಕ! ಯುದ್ದಗಳಿಂದ, ಆತಂಕವಾದಿ ಉಗ್ರಗಾಮಿಗಳಿಂದ, ಬೇಜವಾಬ್ದಾರಿ ಅವಘಡಗಳಿಂದ ರಕ್ತದ ಕೋಡಿ ಹರಿಸುತ್ತೀದ್ದೀರ. ಇದರ ಮುಂದೆ ನಾವು ಹೀರುವ ರಕ್ತ ಎಷ್ಟರದು?

ನಿಮ್ಮ ಸ್ಪ್ರೇ, ಕಾಯಿಲ್, ರಿಪೆಲಂಟ್‌ಗಳು ಯಾವುದೂ ಪರಿಣಾಮಕಾರಿ ಅಲ್ಲ. ನಮ್ಮ ಸಂತತಿಯ ಸೌಕರ್ಯಕ್ಕೆ, ಕಡಿವಾಣವಿಲ್ಲದ ಬೆಳವಣಿಗೆ ಹಾಗೂ ಏಳಿಗೆಗೆ ಎಲ್ಲೆಲ್ಲೂ ಕಚಡಾ ರಾಶಿಗಳು, ಕೊಚ್ಚೆ ನೀರಿನ ಗುಂಡಿಗಳು, ಹೊಂಡಗಳಿಂದ ತುಂಬಿದ ಸೂಕ್ತ ಹಾಗೂ ಸಮರ್ಪಕವಾದ ಪರಿಸರವನ್ನು ಕಲ್ಪಿಸಿದ್ದೀರಿ. ಧನ್ಯವಾದಗಳು!

ಸರ್ವೇ ಸೊಳ್ಳೇ ಸುಖಿನೋ ಭವಂತು!!

●

## ಏನನ್ಯಾಯ

ವರ್ಗವಾಗಿ ಇನ್ನೊಂದೂರಿಗೆ ಹೊರಡುವ ಅಧಿಕಾರಿಗಳು ಊರಿನವರನ್ನು ಕುರಿತು "ಚಿಂತಿಸಬೇಡಿ, ನಾನು ಹೊರಟುಹೋದರೂ ಕೂಡಾ ನನಗಿಂತ ಒಳ್ಳೆಯವರೇ ಬರುತ್ತಾರೆ" ಅಂತ ಸಮಾಧಾನ ಹೇಳುತ್ತಿದ್ದರೆ ಸಭಿಕರಲ್ಲೊಬ್ಬ "ತಾವು ಬರುವುದಕ್ಕೆ ಮೊದಲು ಇಲ್ಲಿ ಇದ್ದವರೂ ಕೂಡಾ ಇದೇ ರೀತಿ ಹೇಳಿ ಹೋದರು. ಆದ್ದರಿಂದಲೇ ನಮಗಿಷ್ಟು ಯೋಚನೆ" ಅಂತ ಮನಸ್ಸಿನಲ್ಲಿದ್ದ ಆತಂಕವನ್ನು ಬಿಚ್ಚಿ ಹೇಳಿಬಿಡೋದೇ.

***

ಆಫೀಸ್ ರೂಮಿನಲ್ಲಿ ತಮ್ಮ ಮೇಜಿನ ಕೆಳಗೆ ಬಿದ್ದಿದ್ದ ಬೀಡಿ ಚೂರನ್ನು ಕಂಡು "ನಿನ್ನದೇನೋ ಇದು" ಅಂತ ಸಾಹೇಬರು ಬೋರನನ್ನು ಬೆದರಿಸುತ್ತಿದ್ದರೆ ಅವನು "ಅಯ್ಯೋ ಅಯ್ಯೋ ಅದಕ್ಕೇನು ಧಣಿ, ನನ್ನದಾದ ಮಾತ್ರಕ್ಕೆ ತಾವು ನನ್ನ ಅಪ್ಪಣೆ ಕೇಳಬೇಕೇ" ತಗಳ್ಳಿ ತಗಳ್ಳಿ ತಕಂಡು ಸೇದಿ ಸ್ವಾಮಿ ಸೇದಿ" ಅಂತ ಹೇಳಬಹುದೇ?

– ಜಯಣ್ಣ

# ಸಾತ್ವಿಕ ಮತ್ತು ಸೇಡು

**- ಎಚ್. ಗೋಪಾಲಕೃಷ್ಣ**

**ಜಾ**ಗಟೇನೋ ಬ್ಯೂಗಲ್ಲೋ ಬೇಕು. ಅರ್ಜೆಂಟಾಗಿ ತಂದುಕೊಡ್ತೀಯಾ... ಅಂತ ಗೋಪಣ್ಣ ಬಂದು ಕೇಳಿದಾಗ ಆಶ್ಚರ್ಯ ಆಯಿತು. ಗೋಪಣ್ಣ ತುಂಬಾ ಬೇಸರದಲ್ಲಿದ್ದ ಮತ್ತು ಅವನ ಮುಖದಲ್ಲಿ ದುಃಖ ಮಡುಕಟ್ಟಿತ್ತು ಅಂತ ಹೇಳ್ತಾರಲ್ಲಾ ಹಾಗಿತ್ತು. ಅವನ ಮನೇಲಿ ದೇವರ ಪೂಜೆ ಕೈಂಕರ್ಯ ಇಲ್ಲದೆ ಇರೋದರಿಂದ ಜಾಗಟೆ ಪೂಜೇಗೆ ಅಲ್ಲ ಅಂತ ಗೊತ್ತಾದರೂ ಬ್ಯೂಗಲ್ ಯಾಕೆ? ಬ್ಯೂಗಲ್ ಅಂದರೆ ಗೊತ್ತಿದೆ ಅಲ್ಲವಾ? ಕೊಂಬು, ಕಹಳೆ, ಮುರಿ, ತುತ್ತೂರಿ ಅಂತೇನೇನೋ ಹೆಸರು ಅದಕ್ಕೆ. ಇನ್ನೂ ಸಿಂಪಲ್ ಆಗಿ ಹೇಳಬೇಕು ಅಂದರೆ ಬ್ಯಾಂಡ್ ಸೆಟ್‌ನಲ್ಲಿ ಪೋಂ ಪೋಂ ಅಂತ ಊದುತ್ತಾರಲ್ಲಾ ಅದಕ್ಕೆ ಬ್ಯೂಗಲ್ ಅಂತ ಕರೀತಾರೆ. ಬ್ಯೂಗಲ್ ರಾಕ್ ಅಂತಾರಲ್ಲಾ ಹಾಗಂದರೆ ಕಲ್ಲಿನ ಮೇಲೆ ನಿಂತು ಬ್ಯೂಗಲ್ಲು ಊದ್ತಾ ಇದ್ದರಂತೆ, ಆ ಕಾಲದಲ್ಲಿ-ಅದಕ್ಕೇ ಬ್ಯೂಗಲ್‌ರಾಕ್ ಅಂತ ಹೆಸರು.

ನಾನು ಒಂದು ಜಮಾನಾದಲ್ಲಿ ಒಂದು ಸಾಂಸ್ಕೃತಿಕ ಸಂಘದ ಅಧ್ಯಕ್ಷ ಆಗಿದ್ದೋನು, ಆಗ ಈ ಮ್ಯೂಸಿಕಲ್ ಇನ್‌ಸ್ಟ್ರುಮೆಂಟ್ಸ್‌ಗಳನ್ನ ತರೋದಿಕ್ಕೆ ಅಂತ ಹೋಗುತ್ತಿದ್ದೆ. ಹಾಗೆ ಹೋದವನು ನಮ್ಮ ನೆಂಟರಿಗೆಲ್ಲಾ ಈ ವಾದ್ಯಗಳನ್ನ ತಂದಿದ್ದನ್ನ ಸಖತ್ತಾಗಿ ಕೊಚ್ಕೋತಾ ಇದ್ದೆ. ಮುಂಡೇವು ಇವು ಯಾವಕ್ಕೂ ಕೊಳಲಿಗೂ ಶಹನಾಯಿಗೂ ಇರೋ ವ್ಯತ್ಯಾಸ ಗೊತ್ತಿಲ್ಲ. ನಾನು ಕೊಚ್ಕೋದನ್ನ ಕಣ್ಣು ಬಾಯಿ ಬಿಟ್ಕೊಂಡು ಕೇಳಿಸ್ಕೋತಿದ್ದವು. ಬಹುಶಃ ಅದೇ ಗುಂಗಿನಲ್ಲಿ ಇವನು ನನಗೆ ಜಾಗಟೆ, ಬ್ಯೂಗಲ್ಲು ಕೇಳಿದ ಅಂತ ಕಾಣುತ್ತೆ. ನಿನಗ್ಯಾತಕ್ಕೆ ಈಗ ಅದು? ಅಂದೆ.

ಗೋಪಣ್ಣ ಜಾಗಟೇನೋ ಬ್ಯೂಗಲ್ಲೋ ಯಾಕೆ ಬೇಕು ಅಂತ ವಿವರಿಸಿದ. ಇದು ಅವನ ಮಾತಿನಲ್ಲೇ....

ನಾನು ಮನೆ ಕಟ್ಟಿದ ಕತೆ ಗೊತ್ತಲ್ಲಾ ನಿನಗೆ?ಮೂವತ್ತು ವರ್ಷ ಹಿಂದೆ ಊರಾಚೆ ಒಂದು ಪುಟ್ಟ ಮನೆ ಮಾಡಿದ್ದು, ಆಗ ಸಾಲ ಕೊಡೋರು ಇಲ್ಲದೆ ಪರದಾಡಿದ್ದು, ಬಿಡಿಎ ರೂಲ್ಸಿನ ಪ್ರಕಾರ ಹಿಂದೆ ಹತ್ತಡಿ, ಮುಂದೆ ಆರಡಿ, ಪಕ್ಕದಲ್ಲಿ ಎಂಟಡಿ ಖಾಲಿ ಬಿಟ್ಟು ಮಧ್ಯೆ ಎರಡೂವರೆ ಚದರದ ಮನೆ ಕಟ್ಟಿದ್ದು.... ನಗಬೇಡ ಅಂದ.

ಸರಿ ಅಂದೆ. ಆಮೇಲೆ ಅಂತ ಕೇಳಿದೆ. ನಗು ತಡೆದುಕೊಂಡು ಕೆಮ್ಮು ಹತ್ತಿತ್ತು.

ಪಕ್ಕದ ಸೈಟು ಸುಮಾರು ವರ್ಷ ಖಾಲಿ ಬಿದ್ದಿತ್ತು. ಇಲ್ಲಿ ಯಾರೂ ಮನೆ ಕಟ್ಟದೇ ಇರಲಿ ಅಂತ ಗೊರವನಹಳ್ಳಿ ಲಕ್ಷ್ಮೀಗೂ ಹರಕೆ ಹೊತ್ತಿದ್ದೆವು. ಒಂದು ಪಕ್ಕದಲ್ಲಿ ನಮ್ಮದರ ತರಹವೇ ಪುಟ್ಟಮನೆ. ಈ ಕಡೆ ಖಾಲಿ ಸೈಟಿನ ಮೂಲಕ ಒಳ್ಳೇ ಗಾಳಿ, ಬೆಳಕು, ಕಳ್ಳರ ಕಾಟ ಇವೆಲ್ಲಾ ಇದ್ದರೂ ಲೈಫು ಅಡ್‌ಜಸ್ಟು ಆಗಿತ್ತು. ಪಕ್ಕದ ಸೈಟಿನಲ್ಲಿ ಮನೆ ಶುರು ಮಾಡಿದ್ರೋ. ನಾಲ್ಕಂತ್ಸಿನ ಮನೆ. ಕೆಳಗಡೆ ರೂಫು ಆದಕೂಡಲೇ ಐವತ್ತು ಜನ ಕೆಲಸದವರು ಬಂದು ಸೇರಿಕೊಂಡುಬಿಟ್ರು. ನಾನು ಮನೆ ಕಟ್ಟಿದಾಗ ಕೆಲಸದವರು ಬೆಳಿಗ್ಗೆ ಬಂದು ಸಂಜೆ

ಹೋಗೋರು. ಆದರೆ ಈಗ ಎಲ್ಲಾ ಉತ್ತರದ ಕಡೆಯವರಂತೆ. ಮನೆ ಮುಗಿಯೋವರೆಗೂ ಇಲ್ಲೇ ಠಿಕಾಣಿ. ಮನೆ ಮುಂದೇನೆ ಅವರ ಸ್ನಾನ, ಪಕ್ಕದ ಬಯಲಲ್ಲಿ ಅವರ ಓಪನ್ ಟಾಯ್ಲೆಟ್ಟು.. ನಮಗೆ ನರಕ ಆಗಿ ಬಿಡ್ತು

ಮತ್ತೆ ನಗಬೇಡ ಅಂದ! ಬಾಯಿ ಒರೆಸಿಕೊಂಡ ಹಾಗೆ ಮಾಡಿ ಇಲ್ಲ ಇಲ್ಲ ಅಂದೆ.

ಅದರ ಜತೇಗೆ ಕೆಲಸದ ಟೈಮು ಅಂತ ಇಲ್ಲ. ಇಡೀ ಇಪ್ಪತ್ನಾಲ್ಕು ಗಂಟೇನೂ ಕುಟಟಟ ಶಬ್ದ, ಕೊಯ್ಯೋದು, ಟಿಂಕರಿ ಮಾಡೋದೂ, ಮರ ಕತ್ತರಿಸೋದೂ, ಅಲ್ಯೂಮಿನಿಯಮ್ ಶೀಟು ಕೊಯ್ಯೋ ಗೊಂಯ್ ಅನ್ನೋ ಶಬ್ದ. ಮನೇಲಿ ಯಾರಿಗೂ ನಿದ್ರೆ ಇಲ್ಲ, ಇಡೀ ಕುಟುಂಬದ ನೆಮ್ಮದಿ ಕೆಟ್ಟು ಹೋಯ್ತು ಕಣಯ್ಯಾ.... ಹೀಗೇ ಇದ್ರೆ ಸರಿ ಹೋಗುಲ್ಲ ಅಂತ ಮುನಿಸಿಪಾಲಿಟಿ ಕಾಯ್ದೆ ಪುಸ್ತಕ ತಂದೆ. ಅದರಲ್ಲಿ ಕೆಲಸದ ಸಮಯ ಅಂತ ಏನಾದರೂ ಇರುತ್ತಾ ಅಂತ. ಅದು ಇಲ್ಲ ಅದರಲ್ಲಿ. ಸರಿ, ನಾನೇ ಕಾನೂನು ತರಹ ಮಾಡಿದೆ. ಬೆಳಿಗ್ಗೆ ಎಂಟೂವರೆಗೆ ಕೆಲಸ ಶುರು ಮಾಡಬೇಕು, ಸಂಜೆ ಆರಕ್ಕೆ ನಿಲ್ಲಿಸ ಬೇಕು ಅಂತ. ಓನರು ಕಂಟ್ರಾಕ್ಟರನ್ನ ಕೇಳಿ ಅಂತ ನುಣುಚಿಕೊಂಡರೆ ಆತ ಓನರ್ನ ಕೇಳಿ ಅಂತ ನುಣುಚಿದ. ಹಿಂಸೆ ತಡೀಲಾರದೇ ಪೋಲೀಸರ ಹತ್ತಿರ ಹೋದರೆ ಅವರೂ ಓನರೂ ಅಡ್ಜಸ್ಟ್ ಆಗಿಬಿಡೋದೇ? ನೀವು ನೆರೆಹೊರೆಯವರು ಕಾಣ್ರೀ ನೀನೀವೇ ಮಾತಾಡಿಕೊಳ್ರೀ ಅಂದುಬಿಟ್ಟು ಪಕ್ಕದವರ ಜತೆ ಹೋಟೆಲ್ಲಿನಲ್ಲಿ ಮಸಾಲೆ ತಿನ್ನುತ್ತಾ ಕಾಣಿಸಿಕೊಳ್ಳಬೇಕೇ?

ಮುಳ್ಳನ್ನ ಮುಳ್ಳಿನಿಂದ ತೆಗೀಬೇಕು ಅಂತ ಗಾದೆ ಇದೆಯಲ್ಲಾ ಅದು ನೆರವಿಗೆ ಬಂತು.

ಗಾರೆ ಅವರನ್ನ ಫ್ರೆಂಡ್ ಮಾಡಿಕೊಂಡೆ. ಅವರಿಗೆ ಅವಾಗವಾಗ ಟೀ, ಬೀಡಿ ಕೊಟ್ಟು ಸ್ನೇಹ ಸಂಪಾದಿಸಿದೆ. ದೇಖೋ, ಹಮಾರಾ ಘರ್ ಮೇ ಛೋಟಾ ಬಚ್ಚಾ ಹೈ. ವೋ ಬೀ ಸೋನಾ ಹೈನಾ ಆಪ್ ಕಾ ಕಾಂ ರಾತ್ ಮತ್ ಕರೋ ಅಂತ ಅವರ ಭಾಷೇಲೇ ಕೌನ್ಸೆಲ್ಲಿಂಗೂ ಮಾಡಿದೆ. ಇದು ಕೊಂಚ ಕೆಲಸ ಮಾಡಿತು. ರಾತ್ರಿ ಎಂಟರ ಮೇಲೆ ಕೆಲಸ ಕಮ್ಮಿ ಮಾಡಿದರು. ಕೆಳಗಡೆ ಒಂದು ಟಾಯ್ಲೆಟ್ ಮಾಡಿಸ್ಕೊಳ್ಳಿ, ಹೆಂಗಸರು ದೊಡ್ಡವರು ಮಕ್ಕಳು ಮೈದಾನದಲ್ಲೇ ಹೋಗ್ತೀರಾ ಅಸಹ್ಯ ಅಂತ ಹುರಿದುಂಬಿಸಿದೆ, ಟಾಯ್ಲೆಟ್ ಮಾಡಿಸ್ಕೊಂಡರು. ಹಾಗೇ ಒಂದು ಬಚ್ಚಲು ಕಟ್ರಯ್ಯಾ. ಬೀದೀಲಿ ನಿಂತು ಸ್ನಾನ ಮಾಡ್ತೀರೀ, ನೀವೇನೋ ಗಂಡು ಪೋಕರಿಗಳು, ಪಾಪ ಹೆಂಗಸರಿಗೆ ಯಾಕೆ ಈ ಗೋಳು ಕೊಡ್ತೀರೀ ಅಂತ ಗಂಡು ಮುಂಡೇವಕ್ಕೆ ಹೇಳಿದೆ. ಹೆಣ್ಣು ಮಕ್ಕಳಿಗೆ ಏನಮ್ಮಾ ನಿಮ್ಮ ಅವಸ್ಥೆ, ಊರಿಂದ ಊರಿಗೆ ಬಂದರೂ ಬಯಲಲ್ಲಿ ಸ್ನಾನವೇ? ಅಂತ ಛೇಡಿಸಿದೆ. ಕೊನೆಗೂ ಅವರು ಬಚ್ಚಲು ಮನೆ ಮಾಡಿಕೊಂಡರು.

ಈ ಅವ್ಯವಸ್ಥೆ ಸರಿಪಡಿಸೋ ಹೊತ್ಗೆ ಎರಡು ಫ್ಲೋರು ಮುಗಿದಿತ್ತು. ಅಷ್ಟರಲ್ಲಿ ಈ ಕಡೆ ಪಕ್ಕದವನು ಹಳೇದು ಕೆಡವಿ ಹೊಸಾ ಮನೆ ಶುರು ಮಾಡಿದನಪ್ಪಾ.

ಈ ಕಡೆಯವನದ್ದೂ ಅದೇ ಗೋಳು. ಎಲ್ಲಾರೂ ಬೋರ್ಡಿಂಗ್ ವರ್ಕರ್ರು. ಅವರನ್ನೂ ಸರಿ ಮಾಡಿಕೊಂಡೆ ಅಂದುಕೊಂಡೆ, ಆದರೆ ಆಗಿದ್ದೇ ಬೇರೆ. ಅವರಿಬ್ಬರೂ ಸೇರಿಕೊಂಡುಬಿಟ್ಟರು. ಅವನು ಕುಟ್ಟಬೇಕಾದರೆ ಇವನು ಕುಟ್ಟಲ್ಲ, ಇವನು ಕುಟ್ಟಬೇಕಾದರೆ ಅವನು ಕುಟ್ಟಲ್ಲ! ಅಂದರೆ ನಮಗೆ ಯಾವಾಗಲೂ ಶಬ್ದ, ಶಬ್ದ, ಶಬ್ದ!

ಯಾರಿಗೆ ದೂರು ಹೇಳೋದೂ? ಪೋಲೀಸೋರೂ ನಿಮಗೆ ಸೇರಿದ್ದು ಈ ಪ್ರಾಬ್ಲಮ್ಮು ನಾವು ತಲೆ ಹಾಕೋ ಹಾಗಿಲ್ಲ.... ಅಂದುಬಿಟ್ಟಿದ್ದರಲ್ಲಾ.... ನಗಬೇಡ ಪ್ಲೀಸ್ ಅಂದ.

ಎಲ್ಲೋ ನೋಡ್ತಾ ಆಗಲಿ ಅಂದೆ. ಸ್ಟೋರಿ ಮುಂದುವರೀತು.

ನನ್ನ ಕಾಲೇಜ್ ಡೇಸು ಜ್ಞಾಪಕಕ್ಕೆ ಬಂತು. ಗಲಾಟೆ ಎಬ್ಬಿಸಿಬಿಡೋದು ಆಮೇಲೆ ಏನಾಗುತ್ತೆ ನೋಡೋದು. ಸರಿ ಕೂಡಲೇ ಏನು ಮಾಡಿದೆ ಅಂದರೆ ನಮ್ಮನೆ ತಾರಸಿ ಮೇಲೆ ನಿಂತು ಬಚ್ಚಿಟ್ಟುಕೊಂಡು ಎರಡೂ ಮನೆ ಮೇಲೆ ಕಲ್ಲು ಬೀರಿದೆ. ಮುಂಡೇವು ಹೆದರಿದವು ಅಂತ ಕಾಣುತ್ತೆ–ಗಾಬರಿ ಗಾಬರಿಯಿಂದ ನಮ್ಮನೆ ಕಡೆ ನೋಡಿಕೊಂಡು ಮೂರು ದಿವಸ ಹೋದವು. ನಾಲ್ಕನೇ ದಿವಸ ಎರಡೂ ಮನೆಯವರು ಒಟ್ಟಿಗೆ ಕುಟ್ಟೋಕ್ಕೆ ಶುರುಮಾಡಿದವು. ನನ್ನನ್ನ ನೋಡಿ ಹಲ್ಲು ಕಿಸಿಯೋಕ್ಕೂ ಶುರು ಹಚ್ಚಿಕೊಂಡವು. ಪರಿಸ್ಥಿತಿ ಕೈ ಮೀರ್ತಾ ಇದೆ ಅನ್ನಿಸ್ತು.

ಇದೇ ಸಮಯದಲ್ಲಿ ಹಳ್ಳಿಯಿಂದ ನನ್ನ ಹೆಂಡತಿ ಕಡೆಯವರು ಬಂದಿದ್ದೋರು ಅವರ ತೋಟದ್ದು ಅಂತ ಎರಡು ಡಜನ್ ಲಿಂಬೆ ಹಣ್ಣು ತಂದುಕೊಟ್ಟಿದ್ದರು. ಹಳದಿ ಬಣ್ಣದ ಲಿಂಬೆ ಹಣ್ಣು, ಹಿಂಡಿದರೆ ಒಂದು ಸೌಟು ರಸ ಬರೋದು. ಅದೇನು ಹೊಳೀತೋ ನೋಡು, ಟವಿ ಪ್ರಭಾವ ಅಂತ ತೋರುತ್ತೆ. ಆರು ಲಿಂಬೆ ಹಣ್ಣು ಅರ್ಧಕ್ಕೆ ಕೊಯ್ದೆ. ಕುಂಕುಮ ತಗೊಂಡು ಅದಕ್ಕೆ ತುಂಬಿದೆ. ರಾತ್ರಿ ಹಾಗೇನೇ ಅದನ್ನ ಅಕ್ಕ ಪಕ್ಕದ ಎರಡೂ ಮನೆ ಒಳಗೆ ಎಸೆದು ಬಂದು ಮಲಗಿದೆ. ಮಾರನೇ ದಿವಸ ಬೆಳಿಗ್ಗೆ ಅದೇನು ಹೇಳ್ತೀಯಾ? ಎಲ್ಲರೂ ಗಂಟು ಮೂಟೆ ಕಟ್ಟಿಕೊಂಡು ಅವರವರ ಊರಿಗೆ ಹೊರಟುಬಿಟ್ಟಿದಾರೆ.

ಅಲ್ಲೆಲಿದ್ದರೋ ಓನರು ಓಡಿಬಂದರು. ಕ್ಯಾಹುವಾ ಕ್ಯಾಹುವಾ ಅಂತ ಅವರನ್ನ ವಿಚಾರಿಸಿದರು. ಅವರು ಹೀಗೆ ಮನೇಲಿ ಯಾರೋ ಮಾಟ ಮಾಡಿದ್ದಾರೆ ಅಂತ ಭಯದಿಂದಲೇ ನಡುಗುತ್ತಾ ಹೇಳಿದರು. ನಾವು ಊರು ಬಿಟ್ಟು ಇಲ್ಲಿ ಬಂದು ಸಾಯಾಕ್ಕೆ ತಯಾರಿಲ್ಲ.... ಅಂದುಬಿಟ್ಟರು.

ಎರಡು ಓನರುಗಳಿಗೂ ಪ್ರಾಬ್ಲಂ ಎಲ್ಲಿ ಹುಟ್ಟಿತು ಅಂತ ತಿಳೀತು ಕಾಣುತ್ತೆ.

ದೇಖೋ ಯೇ ಸಾಬ್ ಹೈನಾ ವೊ ತೀಸ್ ಯಿಯರ್ಸ್ ಸೆ ಇದರ್ ರಹ್ತಾ. ವುಸ್ ಕೋ ಕ್ಯಾಬೀ ನೈ ಹುವಾ.... ಅಂತ ನನ್ನ ಪಂಚಾಯಿತಿ ವಸ್ತು ಮಾಡಿಕೊಡೆದ್ರಿ ಅಲ್ವಾ ಈಗ ಸಾಯ್ರೀ ಅಡ್ವಾನ್ಸು ಕೊಟ್ಟಿದ್ದೀರಿ ಅದು ನಿಮಗೆ ನಾಮವೇ ಅಂತ ಅಂದುಕೊಂಡೆ. ಆದರೂ ಕೆಲಸದವರಿಗೆ ಸಮಾಧಾನ ಹೇಳಿದೆ. ಎರಡೂ ಓನರುಗಳೂ ರಾತ್ರಿ ಕುಟ್ಟಲ್ಲ, ಗರಗಸ ಕೊಯ್ಯಲ್ಲ, ಗ್ರಾನೈಟು ಬೆಳಿಗ್ಗೆ ಮಾತ್ರ ಕತ್ತರಿಸೋದು, ಅಲ್ಯೂಮಿನಿಯಮ್ಮು ಬೆಳಿಗ್ಗೆ ಮಾತ್ರಾ ಕೊಯ್ಯೋದು – ಅಂತ ಒಪ್ಪಿಕೊಂಡರು. ಆಗಲೇ ಎರಡು ಮನೇನೂ ಮುಗಿಯೋ ಸ್ಟೇಜು. ಇನ್ನ ಅವರು ಅದೇನು ಪ್ರಾಮಿಸ್ ಮಾಡಿದರೆ ಏನು ಅನಿಸಿದರೂ ಗೆದ್ದೆ ಅಂತ ಬೀಗಿದೆ.

ಕೊನೆ ಎರಡು ತಿಂಗಳು ರಾತ್ರಿ ಶಬ್ದ ಇಲ್ಲದೆ ನಿದ್ದೆ ಬರದೆ ಒದ್ದಾಡಿದೆವು–ಮೂರು ವರ್ಷ ಈ ಕಿವಿ ಕಿವುಡಾಗೋ ಶಬ್ದಕ್ಕೆ ಹೊಂದಿಕೊಂಡಿದ್ದೆವಲ್ಲಾ ಅದಕ್ಕೆ. ಮನೆ ಮುಗೀತು,

ಗೃಹಪ್ರವೇಶವೂ ಆಯಿತು. ಹೋಗಿ ಊಟ ಮುಗಿಸಿ ಇಂಥಃ ಸಾವಿರ ಮನೆ ಕಟ್ಟಿ ಅಂತ ಹರಸಿಯೂ ಬಂದೆವು.

ಎಷ್ಟು ಸಲ ಹೇಳಲಿ ನಾನು ಜೋಕು ಹೊಡೀತಿಲ್ಲಾ ಅಂತ ನಗಬೇಡ ಮಾರಾಯಾ.... ನಗೋದಿರಲಿ, ಅದು ತಡೆಯಲು ಹೋಗಿ ಆರು ಜತೆ ಪಕ್ಕೆಲುಬು ಹಿಡಕೊಂಡಿತ್ತು.

ಅಲ್ಲಾ ನೀನು ಸುಮ್ಮನೆ ಕಥೆ ಹೇಳ್ತಾ ಇದ್ದೀ. ಜಾಗಟೆ ವಿಷಯಕ್ಕೆ ಬಾ ಅಂದೆ.

ಅದೇ ಇಷ್ಟು ಹೊತ್ತೂ ಹೇಳಿದ್ದು ಅದರ ಹಿನ್ನೆಲೆ ಅಂದ.

ಅವನ ಕಣ್ಣಿನಲ್ಲಿ ಮತ್ತೆ ವೇದನೆ ಕಾಣಿಸಿಕೊಂಡಿತು.

ಮನೆ ಮುಗೀತಾ? ಜನ ಬಾಡಿಗೇಗೂ ಬಂದರಾ? ಹೊಸಾ ಸಮಸ್ಯೆ ಈಗ ಶುರುವಾಗಿದ್ದು.... ಅಂದ.

ಅದೇನು ಅಂತ ಹುಬ್ಬು ಹಾರಿಸಿದೆ.

ನಾಲ್ಕು ಅಂತಸ್ತಿನ ಮನೆ ಅಂದರೆ ನಾಕುನಾಕ್ಲಾ ಹದಿನಾರು ಮನೆ ಈ ಕಡೆ ಹದಿನಾರು ಮನೆ ಆ ಕಡೆ ಇವೆ. ಹನ್ನೆರೆಡು ಮನೆ ಈ ಕಡೆಗೆ ಹದಿಮೂರು ಮನೆ ಆ ಕಡೆಗೆ ಬಾಡಿಗೆಗೆ ಜನ ಬಂದಿದ್ದಾರೆ. ಎಲ್ಲಾರ ಮನೇಲೂ ಆರು ತಿಂಗಳಿಂದ ಮೂರುವರ್ಷದವರೆಗಿನ ಮಕ್ಕಳು. ರಾತ್ರಿ ಹಗಲು ಅವುಗಳು ಅಳೋದು, ಅಳೋದು ಅಳೋದು.... ಗಟ್ಟಿಯಾಗಿ ಆರು ನಿಮಿಷ ನಕ್ಕುಬಿಟ್ಟೆ!

ಕೆಲಸದವರಿಗಾದರೆ ಟೈಮಿನ ರಿಸ್ಟ್ರಿಕ್ಷನ್, ಮುನಿಸಿಪಾಲಿಟಿ ರೂಲು, ಪೋಲೀಸು, ರೌಡಿಗಳು ಇವನ್ನೆಲ್ಲಾ ಎಲ್ಲಾ ಹೇಳಿ ಬೆದರಿಸಬಹುದಿತ್ತು, ಇವುಕ್ಕೆ ಅದೇನಯ್ಯಾ ಮಾಡೋದೂ.... ಅಂತ ಕಣ್ಣಿನಲ್ಲಿ ಬಳಬಳ ನೀರು ಹರಿಸಿಬಿಟ್ಟ. ಪಾಪ ಅಯ್ಯೋ ಅನಿಸಿತು.

ಅದೇನೋ ಸರೀ ಆದರೆ ಜಾಗಟೆ ಯಾಕೆ ?ಅಂದೆ.

ಇಡೀ ದಿವಸ ಹಾಳಾದವರು ನಮ್ಮ ನಿದ್ದೆ ಕೆಡಿಸಿ ಸುಖ ಪಡ್ತಾರಲ್ಲಾ ಅವರ ನಿದ್ದೆ ನಾವು ಕೆಡಿಸೋದು ಬೇಡವಾ ? ಅಂದ. ಅವನ ಲಾಜಿಕ್ಕು ಸರಿ ಅನ್ನಿಸಿತು. ತಲೆ ಆಡಿಸಿದೆ.

ಅವರ ರೀತಿ ನಾನು ಮಕ್ಕಳನ್ನ ಅಳಿಸೋದು ಆಗುಲ್ಲ.... ಇದಕ್ಕೂ ತಲೆ ಆಡಿಸಿದೆ. ಇವನ ಕೊನೇ ಮಗೂಗೆ ಈಗ ಹದಿನಾರು ವರ್ಷ.

ಅದಕ್ಕೇ ಒಂದು ಪ್ಲಾನು ಮಾಡಿದೀನಿ.... ಅಂತ ಕಣ್ಣು ಫಳಫಳ ಮಾಡಿದ.

ಅದೇನಪ್ಪಾ ಪ್ಲಾನು? ಅಂದೆ. ಪಾಪ ಅದೆಷ್ಟು ಸಂಕಟ ಪಟ್ಟಿದೆಯೋ ಪ್ರಾಣಿ ಅಂತ ಅವನ ಬಗ್ಗೆ ಕನಿಕರ ಹುಟ್ಟಿತ್ತು.

ರಾತ್ರಿ ಎಲ್ಲರೂ ಮಲಗಿರಬೇಕಾದರೆ ದೇವರ ಪೂಜೆ ಮಾಡಬೇಕು.... ಅಂತ ಇದೀನಿ....!

ಅಲ್ಲವಯ್ಯಾ ನಿನಗೆ ದೇವರು ದಿಂಡರಲ್ಲಿ ನಂಬಿಕೇನೇ ಇಲ್ಲವಲ್ಲಾ?

ಈಗಲೂ ನಂಬಿಕೆ ಇಲ್ಲ, ಆದರೆ ನನ್ನ ನಿದ್ದೆ ಕೆಡಿಸಿದೋರು ಸುಖವಾಗಿ ನಿದ್ದೆ ಮಾಡಬಾರದು....

ಸರಿ ದೇವರಪೂಜೆ ಮಾಡ್ತೀಯಾ. ಅದರಿಂದ ಅವರ ನಿದ್ದೆ ಹೇಗೆ ಕೆಡುತ್ತೆ?

ದೇವರ ಪೂಜೆ ಮಾಡ್ತಾ ಮಾಡ್ತಾ ಜಾಗಟೆ ಮಂಥರಿಸ್ತೀನಿ. ದೇವರ ಪೂಜೆ ಶಬ್ದಕ್ಕೆ ಯಾರೂ ಏನೂ ತಕರಾರು ತೆಗೆಯೋ ಹಾಗಿಲ್ಲ.... ಅಂದ!

ಒಳ್ಳೇ ತಿಕ್ಕಲು ಅಸಾಮಿ ನೀನು ಅಂತ ಹೇಳಬೇಕು ಅಂತ ಹೊರಟವನು ತೆಪ್ಪಗಾದೆ. ಪಾಪ ತುಂಬಾ ಅಪರೂಪಕ್ಕೆ ತನಗೆ ತೊಂದರೆ ಕೊಟ್ಟವರಿಗೆ ಪಾಠ ಕಲಿಸುವ ಧೈರ್ಯ ಬಂದಿದೆ ಇವನಿಗೆ ಅಂತ ನನಗೆ ಖುಷಿಯಾಯಿತು.

ಗೋಪಣ್ಣ ತುಂಬಾ ಒಳ್ಳೇ ಡಿಸಿಷನ್ ತಗೊಂಡಿದ್ದೀಯಾ. ಜಾಗಟೆ, ಬ್ಯೂಗಲ್ಲು ಕಡಿಮೆ ಇದಕ್ಕೆ. ದೇವಸ್ಥಾನದಲ್ಲಿ, ಮಠಗಳಲ್ಲಿ ಮಹಾಮಂಗಳಾರತಿ ಸಮಯದಲ್ಲಿ ಶಬ್ದ ಮಾಡೋಕ್ಕೆ ಅಂತಲೇ ಒಂದು ವಿದ್ಯುತ್ ಚಾಲಿತ ಸಂಗೀತದ ಉಪಕರಣ ಇಟ್ಟಿರ್ತಾರೆ ನೋಡು ಅದರಲ್ಲಿ ನಾಗಸ್ವರ, ತಬಲ, ಮೃದಂಗ, ಕೊಳಲು, ಡ್ರಮ್ಸು, ಕಾಂಗೋ, ಹಾರ್ಮೋನಿಯಮ್ಮು ಈ ಎಲ್ಲಾದರ ಶಬ್ದ ಬರುತ್ತೆ ನೋಡು ಅದು ತರೋಣ.... ಅಂದೆ.

ಅದು ತುಂಬಾ ಕಾಸ್ಟ್ಲಿ.... ಅಂದ.

ಅದಕ್ಕೇನೂ ಯೋಚಿಸಬೇಡ. ಚಂದಾ ಎತ್ತೋಣಾ. ಭಕ್ತರು ಕೊಡ್ತಾರೆ.... ಅಂತ ಒಪ್ಪಿಸಿದ್ದೀನಿ.

ಇಷ್ಟರಲ್ಲೇ ಗೋಪಣ್ಣ ಚಂದಾ ಪುಸ್ತಕ ಹಿಡಿದು ತಮ್ಮ ಮನೇಗೆ ಬಂದಾನು....!

ಸಾತ್ವಿಕರು ಸೇಡು ಹೇಗೆ ತೀರಿಸ್ಕೋತಾರೆ ನೋಡಿ.

●

## ವೈಎನ್ಕೆ ಅವರ ಕೊನೆ ಸಿಡಿ

ಯಾವ ಪಕ್ಷವೂ ಅದರ ನಾಯಕರಷ್ಟು ಕಚಡಾ ಆಗಿರೋದಿಲ್ಲ.

***

ಅರ್ಧ ತೆರೆದ ಬಾಗಿಲು ಅರ್ಧ ಮುಚ್ಚಿರುತ್ತದೆ. ಇದನ್ನು ಡಬಲ್ ಮಾಡಿದರೆ ಅಂದರೆ ಪೂರ್ತಿ ತೆರೆದ ಬಾಗಿಲು ಪೂರ್ತಿ ಮುಚ್ಚಿರುತ್ತದೆ ಎಂಬುದು ಸತ್ಯ ದೂರ ಎಂಬುದು ಎಲ್ಲರಿಗೂ ಗೊತ್ತು.

***

ಈ ಮನೆಯಲ್ಲಿ ಬರೆಯುವವರೇ. ತಾಯಿ ಪದ್ಯ ಬರೆಯುತ್ತಾಳೆ, ಅದನ್ನು ಯಾರೂ ಓದುವುದಿಲ್ಲ. ಮಗ ಉದ್ಯೋಗ ಬೇಕೆಂಬ ಪತ್ರಗಳನ್ನು ಬರೆಯುತ್ತಿರುತ್ತಾನೆ, ಉತ್ತರ ಬರುವುದಿಲ್ಲ. ಮಗಳು ಕಾದಂಬರಿ ಬರೆಯುತ್ತಾಳೆ, ಅದನ್ನು ಯಾರೂ ಪ್ರಕಟಿಸುವುದಿಲ್ಲ. ತಂದೆ ಚೆಕ್ ಬರೆಯುತ್ತಾನೆ, ಅದು ಕ್ಯಾಷ್ ಆಗುವುದಿಲ್ಲ.

***

**ಧರ್ಮ ಪ್ರಚಾರಕ**: ಮನಿ ಈಸ್ ದಿ ರೂಟ್ ಆಫ್ ಆಲ್ ಎವಿಲ್

**ಸಭಿಕರು**: ಗಿವ್ ಮಿ ದಟ್ ರೂಟ್.

ಶುಂಠಿ ಕಷಾಯ

# ಆಸ್ತಿಯ ಲೆಕ್ಕ

**- ಬೇಲೂರು ರಾಮಮೂರ್ತಿ**

''ಯಾರಿಗೆ ಯಾರೂ ಏನೂ ಅಲ್ಲ, ಸುಮ್ಮನೇ ನಾವೇ ಸಂಬಂಧಗಳನ್ನು ಕಟ್ಟಿಕೊಂಡು, ಅವುಗಳಿಗೆ ಅಂಟಿಕೊಂಡು ಪರದಾಡುತ್ತೇವೆ. ಎಲ್ಲಾ ಬಿಟ್ಟು – ಬಂದಿದ್ದು ಒಬ್ಬನೇ, ಇರೋದು ಒಬ್ಬನೇ, ಹೋಗೋದು ಒಬ್ಬನೇ ಅಂತ ಇದ್ದುಬಿಟ್ಟವ ಮಾತ್ರ ಸುಖಿ'' ಹೀಗಂದದ್ದು ಎಪ್ಪತ್ತರ ಪ್ರಾಯದ ಶ್ರೀರಾಮ್. ಅವರ ಎದುರಿಗೆ ಕೂತಿದ್ದುದು ಹತ್ತು ವರ್ಷ ಹರೆಯದ ಹುಡುಗ, ಅವರ ಮೊಮ್ಮಗ ಗಣೇಶ. ಅವನಿಗೆ ಈ ತಾತ ಹೇಳಿದ್ದು ಏನೂ ತಿಳಿದ ಹಾಗಿರಲಿಲ್ಲ. ಅದಕ್ಕೇ ಸುಮ್ಮನೇ ಅವರ ಮುಖವನ್ನೇ ನೋಡುತ್ತಾ ಕೂತಿದ್ದ. ಸ್ವಲ್ಪ ಹೊತ್ತಾದ ಮೇಲೆ ಗಣೇಶ್ ತಾತನ ಕಡೆ ನೋಡಿ, ''ಸಿಂಗಸಂದ್ರದ ಹೊಲದ ಕಾಗದ ಪತ್ರಗಳು ಮನೇಲಿ ಕಾಣ್ತಾ ಇಲ್ವಂತೆ, ಅದಕ್ಕೇ ಅಮ್ಮ ನಿನ್ನನ್ನ ಕೇಳ್ಕೊಂಡು ಬಾ ಅಂದ್ಲು'' ಅಂದ. ಹಾಗಂದ ತಕ್ಷಣ ಶ್ರೀರಾಮ್ ನಕ್ಕರು. ''ಸಂಬಂಧ ಉಳ್ಕೊಳೋದು, ಮುಂದುವರಿಯೋದು ನೀನು ಎಷ್ಟು ಆಸ್ತಿ ಮಾಡಿದೀಯ ಅನ್ನೋದರ ಮೇಲೆ ಅವಲಂಬಿತವಾಗುತ್ತೆ. ಸಿಂಗಸಂದ್ರದ ಹೊಲ ಮಾರಿಬಿಟ್ಟೆ ಅಂತ ನಿಮ್ಮಮ್ಮನಿಗೆ ಹೇಳು'' ಅಂದರು. ಮತ್ತೆ ಗಣೇಶನಿಗೆ ಈ ವ್ಯವಹಾರದ ಮಾತುಗಳು ಅರ್ಥವೇ ಆಗಲಿಲ್ಲ. ಸ್ವಲ್ಪ ಹೊತ್ತಾದ ಮೇಲೆ ''ತಾತಾ ನೀನು ಎಷ್ಟು ಆಸ್ತಿ ಮಾಡಿದೀಯ'' ಅಂತ ಕೇಳಿದ. ಶ್ರೀರಾಮ್ ನಕ್ಕರು. ''ಆಸ್ತಿ ಮಾಡಿದ್ದೆಪ್ಪ, ನಮ್ಮವರು ಅಂದುಕೊಂಡೋರು ಒಂದೊಂದು ಆಸ್ತಿ ಹೊಡ್ಕೊಳುವಾಗಲೂ ನನ್ನನ್ನು ಅಷ್ಟಷ್ಟು ದೂರ ಮಾಡಿದರು. ಕಡೇ ಆಸ್ತಿ ಹೊಡ್ಕೊಂಡಾದ ಮೇಲೆ ತುಂಬಾ ದೂರ ಮಾಡಿಬಿಟ್ಟರು. ಅದಕ್ಕೇ ಈಗ ಇಲ್ಲಿದ್ದೀನಿ'' ಅಂದರು. ಗಣೇಶನಿಗೆ ಮತ್ತೆ ಮಾತು ಅರ್ಥ ಆಗಲಿಲ್ಲ. ಮತ್ತೆ ಕೆಲವು ನಿಮಿಷಗಳು ಕಳೆದವು. ಗಣೇಶ ಮತ್ತೆ ಕೇಳಿದ. ''ಹಾಗಾದರೆ ಆಸ್ತಿ ಮಾಡಬೇಕಾ ಬೇಡ್ವಾ?'' ಶ್ರೀರಾಮ್ ನಕ್ಕರು. ಮೊಮ್ಮಗನ ಬೆನ್ನು ತಟ್ಟಿದರು. ಬಾ ಅಂತ ಆಚೆ ಕರೆದುಕೊಂಡು ಬಂದರು. ಹೊರಗೆ ವಿಶಾಲವಾದ ಉದ್ಯಾನ. ಅನೇಕ ದೊಡ್ಡ ದೊಡ್ಡ ಮರಗಳು ಇದ್ದವು. ಕಾಂಪೌಂಡಿಗೆ ಹೊಂದಿಕೊಂಡ ಹಾಗೆ ಒಂದು ಬೇಕರಿ ಇತ್ತು. ಏನಾದ್ರೂ ತಗೋತೀಯ ಅಂತ ಕೇಳಿದರು. ಗಣೇಶ ಅಂಗಡಿಗೆ ಹೋಗಿ ಕೇಕ್ ತಗೊಂಡು ತಿಂದ. ಶ್ರೀರಾಮ್ ದುಡ್ಡು ಕೊಟ್ಟರು.

ಇಬ್ಬರೂ ಬಂದು ಒಂದು ಕಟ್ಟೆಯ ಮೇಲೆ ಕೂತರು. ''ನಿಂಗೆ ಅಜ್ಜಿ ನೆನಪಾಗ್ತಾ ಇರ್ತಾರಾ ತಾತಾ'' ಅಂತ ಕೇಳಿದ ಗಣೇಶ. ಅವರು ಮೊಮ್ಮಗನನ್ನೇ ನೋಡಿ ''ನೆನಪಾಗೋದಿಕ್ಕೆ ಅವಳನ್ನು ನಾನು ಮರೆತಿದೀನೇನೋ. ಅವಳು ಎದುರಿಗೆ ಇಲ್ಲ ಆದರೆ ಇಲ್ಲಿದ್ದಾಳೆ'' ಅಂದು ಹೃದಯ ತಟ್ಟಿ ತೋರಿದರು. ಯಾಕೋ ಬೇಜಾರು ಬಂದು ತಲೆ ಕೆಳಗೆ ಮಾಡಿದರು. ನಂತರ ತಲೆ ಎತ್ತಿ ಮೊಮ್ಮಗನನ್ನು ನೋಡಿ ''ನಿಮ್ಮಜ್ಜಿ ಇದ್ದಿದ್ರೆ ನನಗೆ ಈ ಗತಿ ಬರ್ತಿರಲಿಲ್ಲ. ಇಬ್ಬರೂ ಒಟ್ಟಿಗೇ ಎಲ್ಲೋ ಒಂದು ಕಡೆ ಇರ್ತಿದ್ವಿ. ಇರ್ಲಿ ಬಿಡು. ಇದೊಂಥರಾ ಜೀವನ. ಎಲ್ಲಾ ನಾವು ಬೇಕು ಅಂದ ಹಾಗೆ ಆಗುತ್ತಾ'' ಅಂದರು.

ಅಲ್ಲಿ ಓಡಾಡುವವರೆಲ್ಲಾ ನಮಸ್ಕಾರ ಶ್ರೀರಾವ್ ಅಂತ ಹೇಳಿ ಹೋಗೋರು. ಕೆಲವರಂತೂ ಹತ್ತಿರ ಬಂದು ಯಾರು ಮೊಮ್ಮಗನಾ, ನಿಮ್ಮ ಮಗ ಸೊಸೆ ಏನು ಹೇಳಿ

ಕಳಿಸಿದಾರೆ'' ಅಂತ ಕೇಳಿ ಹೋಗೋರು. ಒಂದಿಬ್ಬರು ಬಂದು ''ಇವತ್ತು ನನ್ನ ಹುಟ್ಟಿದ ಹಬ್ಬ. ಆದರೆ ಮನೆಯಿಂದ ಯಾರೂ ಬರಲಿಲ್ಲ. ನೀವೇ ನನ್ನ ಮನೆಯವರು ಅಂದು ಸಿಹಿ ಕೊಟ್ಟರು. ಶ್ರೀರಾಮ್ ಅವರ ಕಡೆ ನೋಡಿ ''ನಾನು ಅವತ್ತೇ ಹೇಳಿದೀನಿ ನೀವು ಯಾವುದಕ್ಕೂ ಬೇಜಾರು ಮಾಡ್ಕೊಬಾರದು. ಸಾಗುವ ಒಂದೊಂದು ದಿನವೂ ನಮಗೆ ವಿಶೇಷವೇ. ಯಾಕೆ ಕೆಲವರನ್ನು ಮಾತ್ರ ನಾವು ಮನೆಯವರು ಅಂದ್ಕೊಬೇಕು. ನಮ್ಮ ಮನಕ್ಕೆ ಹತ್ತಿರವಾದವರೆಲ್ಲಾ ನಮ್ಮ ಮನೆಯವರೇ ಅಲ್ವೇ. ಇವತ್ತು ಏನಿಲ್ಲ ಅಂದ್ರೂ ನಿಮಗೆ ಒಂದು ನೂರು ಜನ ಶುಭಾಷಯ ಹೇಳಿರಬೇಕು. ಸಾಕಲ್ವೆ. ನೆನ್ನೆಯ ಹಾಗೇ ಇವತ್ತು ಇರಬೇಕು, ಇವತ್ತಿನ ಹಾಗೇ ನಾಳೆಯೂ ಇರಬೇಕು, ಪ್ರತಿ ದಿನವೂ ಸುಖ ಸಂತೋಷ ಇರಬೇಕು ಅಂತ ಬಯಸೋದು ತಪ್ಪಲ್ವೇ. ಪ್ರತೀ ದಿನವೂ ಭಗವಂತ ನಮಗೆ ನೀಡಿದ ವರ ಅಂದ್ಕೊಂಡು ಬದುಕಬೇಕು. ನಾನು ನೋಡಿ ಯಾವುದಕ್ಕೂ ಕೊರಗೋದೇ ಇಲ್ಲ. ಯಾಕೇಂದ್ರೆ ನನ್ನ ಸಂಬಂಧ, ಅನುಬಂಧ ಎಲ್ಲಾ ಇರೋದು ಆ ಭಗವಂತನ ಜೊತೆಗೆ. ಅವನು ಯಾವತ್ತೂ ಯಾರನ್ನೂ ನಿರಾಸೆ ಮಾಡೋಲ್ಲ'' ಅಂದ್ರು. ಮಾತು ಸ್ವಲ್ಪ ಹೆಚ್ಚಾಯಿತೇನೋ. ಅದಕ್ಕೇ ಅವರು ಏನೂ ಮಾತಾಡದೇ ಹೊರಟುಹೋದರು.

ತಾತನ ಜೊತೆ ಸಂಜೆಯವರೆವಿಗೂ ಇದ್ದ ಗಣೇಶ ಹೊರಡೋ ಮುನ್ನ ಮತ್ತೊಂದು ಸಾರಿ ''ತಾತ ನಾನು ಕೇಳಿದ ಪ್ರಶ್ನೆಗೆ ನೀನು ಉತ್ತರ ಹೇಳಲೇ ಇಲ್ಲ ನಾವು ಆಸ್ತಿ ಮಾಡಬೇಕೋ ಬೇಡವೋ'' ಅಂತ ಕೇಳಿದ. ಶ್ರೀರಾಮ್ ನಕ್ಕರು. ''ನೀನು ಯಾವುದನ್ನು ಆಸ್ತಿ ಅಂತಾ ಇದೀಯೋ ನನಗೆ ಗೊತ್ತಾಗ್ತಿಲ್ಲ. ಇರೋದಕ್ಕೆ ಒಂದು ಮನೆ, ಸಂಪಾದನೆಗೆ ನೂರಾರು ಮನೆ, ಒಂದಿಷ್ಟು ಒಡವೆ, ಬೇಕಾಬಿಟ್ಟಿ ಹಣ ಇವು ಆಸ್ತಿಯೇ. ಒಂದು ಮಾತು ಹೇಳ್ತೀನಿ ಕೇಳು. ಹುಟ್ಟಿದ ಪ್ರತಿಯೊಬ್ಬನೂ ಸಖತ್ತಾಗಿ ಆಸ್ತಿ ಮಾಡಬೇಕು. ಆದರೆ ಆ ಆಸ್ತಿ ಖರ್ಚು ಮಾಡಿದಷ್ಟೂ ಹೆಚ್ಚಾಗ್ತಾ ಇರಬೇಕು. ಅಂಥಾ ಆಸ್ತಿ ಮಾಡಬೇಕು'' ಅಂದರು. ಗಣೇಶನಿಗೆ ಅರ್ಥವೇ ಆಗಲಿಲ್ಲ.

ಮೊಮ್ಮಗನನ್ನು ತಬ್ಬಿದ ಶ್ರೀರಾಮ್ ಹೇಳಿದರು ''ನೋಡು ಪುಟ್ಟ, ನೀನಿನ್ನೂ ಚಿಕ್ಕವನು. ನಿಮ್ಮಪ್ಪ ಅಮ್ಮನೇ ಸಾಕಷ್ಟು ಆಸ್ತಿ ಮಾಡಿದಾರೆ, ನಾನು ಬಿಟ್ಟಿದ್ದು ಒಂದಿಷ್ಟಿದೆ. ಅದನ್ನೇ ನೀನು ಆಸ್ತಿ ಅಂದುಕೊಂಡರೆ ತಪ್ಪು. ಹೌದು ನಿನ್ನ ಜೀವನಕ್ಕೆ, ಬದುಕಿಗೆ ಆಸ್ತಿ ಅನ್ನುವಂಥಾದ್ದು ಬೇಕು. ಸಂಪಾದನೆಯೂ ಬೇಕು. ಆದರೆ ಅದೇ ಎಲ್ಲಾ ಅಲ್ಲ. ನೀನು ಮಾಡಬೇಕಾದ ಆಸ್ತಿ ಯಾವುದು ಗೊತ್ತಾ. ಸ್ನೇಹ, ಪ್ರೀತಿ, ಅಕ್ಕರೆ, ವಿಶ್ವಾಸ ಇವುಗಳು. ಈ ಆಸ್ತಿಗಳನ್ನು ನೀನು ಮಾಡಿದಷ್ಟೂ ಬೆಳೆಯುತ್ತವೆ. ನೀನು ಖರ್ಚು ಮಾಡಿದಷ್ಟೂ ಹೆಚ್ಚಾಗುತ್ತವೆ. ಮತ್ತೆ ಈ ಆಸ್ತಿಗಳು ಯಾವಾಗ ನಿನ್ನ ಉಪಯೋಗಕ್ಕೆ ಬರುತ್ತೆ ಅನ್ನೋದೇ ನಿನಗೆ ಗೊತ್ತಿರೋಲ್ಲ ನೋಡು. ಮನೆ, ಬಂಗಲೆ, ದುಡ್ಡು ಇವುಗಳನ್ನು ಮಾಡಿಟ್ಟರೆ ಅವುಗಳು ಕಾಣುತ್ತವೆ. ಅಗೋ ನನ್ನ ಆಸ್ತಿ ಅಲ್ಲಿದೆ, ಇಗೋ ನನ್ನ ಹಣ ಇಲ್ಲಿದೆ ಅಂತ ಮನಸ್ಸು ಸದಾ ನಿನಗೆ ನೆನಪಿಸುತ್ತಿರುತ್ತದೆ. ಆದರೆ ನೀನು ಇನ್ನೊಬ್ಬರ ಮೇಲೆ ಇಟ್ಟಿರುವ ಸ್ನೇಹ, ಪ್ರೀತಿ, ಅಕ್ಕರೆ, ವಿಶ್ವಾಸ ಈ ಆಸ್ತಿಗಳು ಕಾಣೋದಿಲ್ಲ. ಎಷ್ಟಿದೆ ಅನ್ನೋದು ನಿನಗೆ ಗೊತ್ತಾಗೋಲ್ಲ. ಇವುಗಳನ್ನು ಬೇರೆ ಆಸ್ತಿ ತರಹ ನೀನೇ ತಗೊಂಡು ಬಳಸೋಕೆ ಆಗಲ್ಲ. ಅವೇ ನಿನ್ನ ಬಳಕೆಗೆ ಬರುತ್ತೆ, ಬಹುಶಃ ನಿನಗೆ ಗೊತ್ತಿಲ್ಲದ ಹಾಗೆಯೇ'' ಅಂದರು.

ಗಣೇಶ ತಾತನ ಮುಖವನ್ನೇ ನೋಡುತ್ತಾ ಕೂತಿದ್ದ. ಅವನಿಗೆ ಎಷ್ಟು ಅರ್ಥವಾಯಿತೋ ಗೊತ್ತಿಲ್ಲ. ಆದರೆ ಏನೋ ಅರ್ಥ ಆದ ಹಾಗೆ ಮುಖಭಾವ ಇತ್ತು. ಮೊಮ್ಮಗನ ತಲೆ ಸವರುತ್ತಾ ಶ್ರೀರಾಮ್ ಮತ್ತೆ ಹೇಳಿದರು ''ನೋಡು ಗಣೇಶ, ನನಗೆ ಕಡೇ ಪಕ್ಷ ದಿನಕ್ಕೆ ಒಂದು ನೂರು ಮೊಬೈಲ್ ಕರೆಗಳು ಬರುತ್ತವೆ. ಎಲ್ಲರೂ ನನ್ನ ಆರೋಗ್ಯ ವಿಚಾರಿಸ್ತಾರೆ, ಏನಾದರೂ ಸಹಾಯ ಬೇಕಾದರೆ ಹೇಳಿ ಅಂತಾರೆ, ಅಲ್ಯಾಕೆ ಇದೀರ ನಮ್ಮ ಮನೆಗೆ ಬನ್ನಿ ನಮ್ಮ ಔಟ್ ಹೌಸ್ ನಿಮಗೆ ಬಿಟ್ಟು ಕೊಡ್ತೀನಿ ಅಂತಾರೆ. ಆ ನೂರು ಜನರೂ ಅವರ ಮನೇಲಿ ಹಬ್ಬ, ವಿಶೇಷ ಸಮಾರಂಭ ಆದರೆ ಮಾಡಿದ ಅಡಿಗೆಯನ್ನೆಲ್ಲಾ ತಂದುಕೊಡುತ್ತಾರೆ. ಇನ್ನು ಹೊಸ ಬಟ್ಟೆಗಳಿಗೆ ಲೆಕ್ಕವೇ ಇಲ್ಲ. ಹಾಗೆ ಬಂದದ್ದನ್ನು ನಾನು ಇಲ್ಲಿನ ನನ್ನ ಸ್ನೇಹಿತರ ಜೊತೆ ಸೇರಿ ಆನಂದದಿಂದ ಅನುಭವಿಸ್ತೀನಿ. ಆ ನೂರು ಜನರನ್ನೂ ನಾನು ನೋಡಿದ್ದು ಯಾವಾಗಲೋ, ನಾನು ಅವರಿಗೆ ಏನು ಸಹಾಯ ಮಾಡಿದೀನೋ, ಏನು ಪ್ರೀತಿ, ವಿಶ್ವಾಸ, ತೋರಿದೀನೋ ನನಗೆ ಗೊತ್ತಿಲ್ಲ. ಆದರೆ ಅವರೆಲ್ಲರ ಪ್ರೀತಿ ನನಗೆ ನಿರಂತರ ಹರಿದು ಬರ್ತಾ ಇದೆ. ಅದು ನನ್ನನ್ನು ಜೀವಂತವಾಗಿ ಇಟ್ಟಿದೆ. ನೋಡು ಗಣೇಶ ನೀನು ದೊಡ್ಡೋನಾದ ಮೇಲೆ ಮಾಡಬೇಕಾದ ಆಸ್ತಿ ಇದು. ಆ ನೂರು ಜನರನ್ನೂ ನಾನು ನೂರು ಅಪಾರ್ಟ್‌ಮೆಂಟುಗಳ ಒಂದು ಸಮುಚ್ಚಯ ಅಂತೀನಿ. ನನ್ನ ವಿಚಾರದಲ್ಲಿ ಆ ನೂರು ಜನರ ಭಾವನೆಯೂ ಒಂದೇ ರೀತಿ ಇದೆ. ನನ್ನ ಬದುಕಿನ ಯಾವ ಘಟ್ಟದಲ್ಲಿ ನಾನು ಅವರಿಗೆಲ್ಲಾ ಅದೇನು ಸಹಾಯ ಮಾಡಿದೀನೋ ನಾನಂತೂ ನೆನಪು ಇಟ್ಕೊಂಡಿಲ್ಲ. ಹಣ, ಒಡವೆ, ಮನೆ, ಬಂಗಲೆ ಇಂಥಾ ಆಸ್ತಿಗಳನ್ನು ಮಾಡಿದರೆ ಯಾರಾದರೂ ಕಿತ್ಕೊಂತಾರೆ ಹಾಗೂ ಅವು ನಮಗೆ ಸ್ವಾರ್ಥ ಬುದ್ಧಿಯನ್ನು ಕಲಿಸುತ್ತೆ. ಆದರೆ ಪ್ರೀತಿ, ವಿಶ್ವಾಸ, ಅಕ್ಕರೆ ಈ ಸ್ನೇಹಗಳ ಆಸ್ತಿ ಮಾಡಿದರೆ ನಮಗೆ ನೆನಪೇ ಇರಲ್ಲ ಹಾಗೂ ಇರಬಾರದು. ಆದರೆ ನೀನು ಬೇಡ ಅಂದರೂ ಅವು ನಿನ್ನನ್ನು ಹುಡುಕಿಕೊಂಡು ಬರುತ್ತವೆ. ನಿನಗೆ ಬದುಕಿನಲ್ಲಿ ಧೈರ್ಯ ತುಂಬುತ್ತವೆ, ಬದುಕೋ ಆಸಕ್ತಿ ಕಲಿಸುತ್ತವೆ. ಬದುಕಿನ ಸಾರ್ಥಕತೆಯನ್ನು ನೆನಪಿಸುತ್ತವೆ.

ಗಣೇಶ ಹೊರಟಾಗ ತಾತನನ್ನು ತಬ್ಬಿದ. ''ತಾತಾ ನಾನೂ ನೀನೂ ಒಟ್ಟಿಗೇ ಇರಬೇಕು ಅನಿಸ್ತಿದೆ. ಅದು ಹೇಗೆ ತಾತಾ'' ಅಂತ ಕೇಳಿದ. ಶ್ರೀರಾಮ್ ನಕ್ಕರು. ಮೊಮ್ಮಗನ ಭುಜ ಸವರಿ ''ಬಹಳ ಸುಲಭ ಕಣೋ, ಈಗ ನಾನು ನಿನ್ನಜ್ಜಿ ಜೊತೆ ಇದೀನಲ್ಲ ಹಾಗೆ ನೀನೂ ನನ್ನ ಜೊತೆ ಇದ್ದುಬಿಡು. ಅಂದ್ರೆ ನನ್ನನ್ನು ನಿನ್ನ ಹೃದಯದ ಒಂದು ಭಾಗವಾಗಿ ಮಾಡ್ಕೊ. ಸದಾ ನನ್ನ ನೆನಪು ಮಾಡ್ಕೊತಾ ಇರು. ನಾನು ಎದುರಿಗೆ ಇದೀನಿ ಅಂತ ಅಂದ್ಕೊಂಡು ಮಾತಾಡು. ಆಗ ನಿನಗೆ ತಾತನ ಜೊತೆಯಲ್ಲೇ ಇರೋ ಸುಖ ಸಿಗುತ್ತೆ'' ಅಂದರು. ಗಣೇಶ ಏನೂ ಅರ್ಥವಾಗದೇ ತಲೆಯಾಡಿಸಿದ. ಹೋಗೋ ಮುನ್ನ ''ತಾತಾ ನೀನು ಹೇಳಿದ್ದು ನನಗೆ ಅರ್ಥವಾಗಬೇಕಾದರೆ ಇನ್ನೂ ಒಂದಿಷ್ಟು ವರ್ಷ ಬೇಕು ಅಂತ ಕಾಣುತ್ತೆ. ಆದರೆ ನಾನು ಪ್ರತಿ ಭಾನುವಾರ ನಿನ್ನನ್ನು ನೋಡೋಕೆ ಬರ್ತೀನಿ ಆಯ್ತಾ'' ಅಂದು ತಲೆಯಾಡಿಸಿ ಟಾ ಟಾ ಮಾಡಿ ಹೊರಟ. ಶ್ರೀರಾಮ್ ಕಣ್ಣಲ್ಲಿ ನೀರು ಬಂತು. ಅವರು ಒಳಗೆ ಹೋಗೋ ಮುನ್ನ ಅನಿಸಿದ್ದು ''ನಾನು ಇನ್ನೂ ಒಂದಿಷ್ಟು ಪ್ರೀತಿ, ವಿಶ್ವಾಸ, ಕರುಣೆ, ಮಮತೆ ಇಂಥಾ ಆಸ್ತಿಗಳನ್ನು ಮಾಡಬೇಕಿತ್ತು. ಆಗ ಬಹುಶಃ ನಾನು ಇಲ್ಲಿ ಇರ್ತಿರ್ಲಿಲ್ಲ ಅಂತ ಕಾಣುತ್ತೆ.''

●

– **ದಂಸಆ**

- ಮನುಷ್ಯ ಭೂಮಿಯನ್ನು ಸ್ವರ್ಗವಾಗಿ ಮಾಡಲು ಹೋಗಿದ್ದರಿಂದ ಅದು ನರಕವಾಗಿದೆ.
- ಡೆಂಟಿಸ್ಟ್‌ಗಳು ಆತ್ಮಚರಿತ್ರೆ ಬರೆದರೆ ಅದನ್ನು ದಂತಕತೆ ಎಂದು ಕರೆಯಬಹುದೆ?
- ಕನ್ನಡ ಪ್ರೇಕ್ಷಕ ಬಹು ಪ್ರಬುದ್ಧ. ಅವನು ಸಿನಿಮಾ ಆನಂದಿಸಲು ಬರುವುದಿಲ್ಲ. ವಿಮರ್ಶಿಸಲು ಬರುತ್ತಾನೆ. ಇತರ ಭಾಷೆಗಳವರು ತಮ್ಮನ್ನು ತಾವು ಚಿತ್ರಕ್ಕೆ ಒಪ್ಪಿಸಿಕೊಂಡು ಆನಂದಿಸಲು ಬರುತ್ತಾರೆ.
- ನೀವು ನಕ್ಕಾಗ ಜಗತ್ತು ನಿಮ್ಮೊಂದಿಗೆ ನಗುತ್ತದೆ. ಆದರೆ ನೀವು ಗೊರಕೆ ಹೊಡೆಯುತ್ತಿರುವಾಗ ನೀವೊಬ್ಬರೆ ನಿದ್ರಿಸುತ್ತಿರುತ್ತೀರಿ.
- ಮಿದುಳು ಮಂಕು ಮುಂಡೇದು. ಅದಕ್ಕೆ ನೀವು ಯಾಕೆ ನಗುತ್ತೀರಿ ಎಂಬುದು ಮುಖ್ಯವಲ್ಲ. ನೀವು ನಕ್ಕಷ್ಟೂ ಅದು ಆರೋಗ್ಯಶಾಲಿಯಾಗುತ್ತದೆ.
- ಸೈನ್ಸ್ ವಿಲ್ ನೆವರ್ ಫೈಂಡ್ ಬ್ಯೂಟಿ ಇನ್ ಫ್ಲವರ್.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಅನುಭವದಿಂದ ತಿಳಿವಳಿಕೆ ಬರುತ್ತದೆ. ಅನುಭವ ಮೂರ್ಖತನದಿಂದ ಬರುತ್ತದೆ.
- ನನಗೆ ಬೇಕಾಗಿರುವುದು ಸಿಗಲಿಲ್ಲ ಎಂದಾದರೆ ಅದು ಇಲ್ಲದೆಯೂ ಬದುಕುತ್ತೇನೆ ಎಂದುಕೊಂಡಾಗ ನಿಮ್ಮೊಳಗಿನ ರಕ್ತ ಸರಾಗವಾಗಿ ಹರಿಯುತ್ತದೆ.
- ಮುಂದೊಂದು ದಿನ ಕರ್ನಾಟಕದ ಕರುಗಳು ತಮ್ಮ ತಾಯಿ ಹಸುಗಳನ್ನು 'ಮಮ್ಮೀ' ಎಂದು ಕರೆಯಬಹುದೆ?
- ಟ್ವಿಟ್ಟರ್ ಫೇಸ್ ಬುಕ್ ಇರುವವರೆಗೂ ನಿನ್ನ ಹೆಸರು ಅಮರವಾಗಿರುತ್ತದೆ.
- ಅವಕಾಶಗಳು ಕೆಲಸದ ವೇಷದಲ್ಲಿ ಕಾಣಿಸಿಕೊಳ್ಳುತ್ತವೆಯಂತೆ. ಆದುದರಿಂದಲೇ ಅದನ್ನ ಮಿಸ್ ಮಾಡಿಕೊಳ್ಳುತ್ತೇವೆ.
- ಇಫ್ ಇಗ್ನೊರೆನ್ಸ್ ಈಸ್ ಬ್ಲಿಸ್ ದೆನ್ ಆರ್ ದೆ ಸೇಮ್?
- ಆತಂಕ ತುಂಬಿದ ಮನಸ್ಸಿದ್ದರೆ ಜನಸಂದಣಿಯಲ್ಲೂ ಒಂಟಿತನ ಕಾಡುತ್ತದೆ.
- ನೀವು ಏನು ಮಾಡಲು ಬಯಸುತ್ತಿರುವಿರಿ ಎಂದು ಜನರನ್ನು ಕೇಳಿದರೆ ಬಹುಪಾಲು ಮಂದಿ ಅದನ್ನು ಮಾಡಿಯೇ ಇರುವುದಿಲ್ಲ.
- ಐ ಮೆ ನಾಟ್ ಬಿ ಡಿಫರೆಂಟ್ ಬಟ್ ಐ ಆಮ್ ಸರ್ಟನ್ಲಿ ನಾಟ್ ದಿ ಸೇಮ್.
- ಜ್ಞಾನಿಯಾಗಲು ಅಕ್ಷರಸ್ಥನಾಗಿರಲೇ ಬೇಕಿಲ್ಲ.

●

# ಒಂದು ನೀತಿ ಕಥೆ

**– ಸಿ.ಆರ್. ಸತ್ಯ**

**ಒಂ**ದೂರು ಇತ್ತಂತೆ (ಈಗಲೂ ಇದೆ ಅಂತ ಇಟ್ಟಿಕೊಳ್ಳಿ). ಅಲ್ಲಿ ಒಬ್ಬ ಬಹಳ ಐಶ್ವರ್ಯವಂತನಾಗಿದ್ದ ಜಮೀನುದಾರನಿದ್ದನಂತೆ (ಈಗಲೂ ಇದ್ದಾನೆ – ಆದರೆ ಪಾಪರ್ ಆಗಿ ಹೋಗಿದ್ದಾನೆ ಪಾಪ). ಅವನಿಗೊಬ್ಬ ಸ್ಫುರದ್ರೂಪಿ ಮಗಳು ಇದ್ದಳಂತೆ (ಅವಳೂ ಈಗಲೂ ಇದ್ದಾಳೆ ಆದರೆ ಅವಳ ಈಗಿನ ರೂಪ ಅಷ್ಟಕಷ್ಟೇ). ಒಂದು ದಿನ ಜಮೀನುದಾರ, ''ಮಗಳೇ, ನಿನ್ನ ಮದುವೆ ವಿಷಯದ ಬಗ್ಗೆ ಏನು ಯೋಚನೆ ಮಾಡಿದ್ದೀ?'' ಅಂತ ಕೇಳಿದನಂತೆ. ಅದಕ್ಕೆ ಅವಳು ''ಡ್ಯಾಡೀ, ನಾನು ಬೇರೆ ರೀತಿಯಲ್ಲಿ ಗಂಡನ್ನ ಆರಿಸ್ಕೊಳ್ಳೋಕ್ಕೆ ತೀರ್ಮಾನ ಮಾಡಿದೀನಿ. ಅದು ಕಾಂಪಿಟಿಷನ್ ಮೂಲಕ'' ಅಂತ ಅಂದಳಂತೆ. ''ಸ್ವಲ್ಪ ವಿವರಿಸಿ ಹೇಳಮ್ಮ'' ಅಂತ ಅಂದಿದಕ್ಕೆ, ಅವಳು, ಡ್ಯಾಡಿ, ನಮ್ಮ ಮನೇ ಕಾಂಪೌಂಡಿನಲ್ಲಿ ಒಂದು ಮಾವಿನ ಮರ ಇದೇ ಅಲ್ವಾ? ಈಗ ಅದರಲ್ಲಿ ಸುಮಾರಾಗಿ ಕಾಯಿಗಳು ಬಿಟ್ಟಿವೆ. ನನ್ನನ್ನ ಮದುವೆ ಆಗೋಕ್ಕೆ ಇಷ್ಟ ಇರೋ ಹುಡುಗರೆಲ್ಲಾ ಬರಲಿ. ಯಾವ ಹುಡುಗ ಒಂದು ಕಲ್ಲನ್ನ ಒಂದೇ ಬಾರಿಗೆ ಎಸದು ಒಂದು ಮಾವಿನ ಕಾಯಿಯನ್ನ ಉದಿರಿಸ್ತಾನೋ, ಅವನೇ ನನ್ನ ಗಂಡ ಆಗ್ತಾನೆ'' ಅಂತ ಹೇಳಿದಳಂತೆ. ಮಗಳು ಬಹಳ ಮೊಂಡಿ ಅಂತ ತಿಳ್ಕೊಂಡಿದ್ದ ಜಮೀನುದಾರ, ಬೇರೆ ಮಾರ್ಗವೇ ಇಲ್ಲದೆ, ಪೇಪರ್‌ನಲ್ಲಿ ಒಂದು ಜಾಹೀರಾತು ಹಾಕಿಸಿ, ಸ್ಪರ್ಧೆನ ಒಂದು ದಿವಸ ಇಡಿಸಿದನಂತೆ. ಸರಿ, ಅವತ್ತು ಬೆಳಿಗ್ಗಿನಿಂದಲೇ ಅವನ ಮನೆ ಮುಂದೆ ನೂರಾರು ಪಡ್ಡೆ ಹುಡುಗರು ಜಮಾಯಿಸಿದರಂತೆ. ಜಮೀನುದಾರ ಒಂದು ಲೋಡ್ ಜೆಲ್ಲಿ ಕಲ್ಲನ್ನು ತರಿಸಿ, ಮಾವಿನ ಮರದಿಂದ ಸರಿಯಾಗಿ ಐವತ್ತು ಅಡಿ ದೂರದಲ್ಲಿ ಸುರಿಸಿ, ಒಬ್ಬೊಬ್ಬ ಹುಡುಗನ ಕೈಗೆ ಒಂದೊಂದು ಕಲ್ಲು ಮಾತ್ರ ಕೊಟ್ಟು ಕಾಯಿ ಕೆಡವೋಕ್ಕೆ ಹೇಳಿದನಂತೆ. ಮಗಳು ಅವಳ ಅಮ್ಮ ಪಕ್ಕದಲ್ಲೇ ಕುರ್ಚಿ ಹಾಕ್ಕೊಂಡು ನೋಡೋಕ್ಕೆ ಕೂತರಂತೆ. ಎಸೆದಿದ್ದ ಕಲ್ಲುಗ್ಗಳೆಲ್ಲ ಅವರ ಮನೆ ಕಿಟಕಿ ಗಾಜುಗಳನ್ನು ಒಡೆದವೇ ಹೊರತು, ಒಂದು ಮಾವಿನ ಕಾಯಿಯನ್ನೂ ಮೊದಲನೇ ಎಸೆತಕ್ಕೆ ಬೀಳಿಸಲೇ ಇಲ್ಲವಂತೆ. ಸಂಜೆ ಆಗೋ ಹೊತ್ತಿಗೆ ನೂರಾರು ಹುಡುಗರು ಪೆಚ್ಚು ಮುಖ ಮಾಡಿಕೊಂಡು ವಾಪಸ್ ಹೋದರಂತೆ.

ಜಮೀನುದಾರ ಮಗಳ ಹತ್ತಿರ ಬಂದು, ''ಈಗ ಏನಮ್ಮ ಮಾಡಲಿ?'' ಅಂತ ಬೇಡಿಕೊಂಡನಂತೆ. ಮಗಳು, ''ಇನ್ನೂ ಬೆಳಕು ಇದೆಯಲ್ಲಾ, ಇನ್ಯಾರಾದರೂ ಹುಡುಗರು ಬರ್ತಾರೇನೋ ನೋಡೋಣ'' ಅಂತ ಸಮಾಧಾನ ಹೇಳುತ್ತಿದ್ದಾಗಲೇ, ಅದೇ ರೋಡ್‌ನಲ್ಲಿ ವಾಸವಾಗಿದ್ದ ಹಾಗೂ ಅವಳ ಮೇಲೆ ಯಾವಾಗಲು ಕಣ್ಣಿಟ್ಟಿದ್ದ ಗೋವಿಂದು ಬಂದು, ನನಗೊಂದು ಕಲ್ಲು ಕೊಡಿ ಅಂಕಲ್ ಎಂದನಂತೆ. ಜಮೀನುದಾರ ಬೇಜಾರಿನಿಂದಲೇ ಅವನ ಕೈಗೆ ಕಲ್ಲು ಕೊಟ್ಟು, ''ಕತ್ತಲೆ ಬೇರೆ ಆಗ್ತಾ ಇದೆ. ಬೇಗ ಎಸೆದು ಅತ್ಲಾಗೆ ಹಾಳಾಗಿ ಹೋಗು. ನನಗೆ ಸಾಕಾಗಿ ಹೋಗಿದೆ ಈ ಸ್ಪರ್ಧೆ'' ಅಂತ ಮೂಲೇಲಿ ಕೂತ್ಕೊಂಡನಂತೆ. ಗೋವಿಂದು ಕಲ್ಲೆಸದನಂತೆ. ಆಶ್ಚರ್ಯ! ತಕ್ಷಣ ಒಂದು ಮಾವಿನ ಕಾಯಿ ಜಮೀನುದಾರನ ತಲೆಯ

ಮೇಲೆ ಬಿತ್ತಂತೆ. ತಕ್ಷಣ ಮಗಳು ಎದ್ದು, ಓಡಿ ಬಂದು, ಐ ಲವ್ ಯೂ ಗೋವಿಂದ್! ಅಂತ ತಬ್ಬಿಗೊಂಡು, ''ಡ್ಯಾಡಿ, ಫಿಕ್ಸ್ ಮೈಮ್ಯಾರೇಜ್ ವಿತ್ ಗೋವಿಂದ್'' ಅಂತ ತನ್ನ ನಿರ್ಧಾರ ತಿಳಿಸಿದಳಂತೆ. ಒಂದು ನಿಮಿಷ ಇರಿ, ಈ ಕಥೆಗೆ ಒಂದು ಮಾರಲ್ ಇದೆ. ಮಾವಿನಕಾಯಿ ಸೀಸನ್‌ಗಳಲ್ಲೆಲ್ಲ ಕತ್ತಲೆ ಆದ ಮೇಲೆ, ಕಲ್ಲು ಹೊಡೆದು, ಕಾಯಿ ಉದರಿಸಿ, ಕದ್ದು ಮಾವಿನಕಾಯಿ ತಿನ್ನುತ್ತಿದ್ದ ಗೋವಿಂದನ್ನ, ''ಹ್ಯಾಗೋ ನೀನು ಈ ಸ್ಪರ್ಧೇಲಿ ಗೆದ್ದೆ?'' ಅಂತ ಕೇಳಿದ್ದಕ್ಕೆ, ''ಸಿಂಪಲ್, ರೀ. ಜೀವನದಲ್ಲಿ ಎಂದೂ ನಾವು ಏನು ಸಾಧಿಸಬೇಕಾದರೂ ಒಂದು ಗುರಿ ಇಟ್ಟುಕೊಂಡಿರಬೇಕು ಅಂತ ನಮ್ಮ ಹಿರಿಯರೆಲ್ಲಾ ಹೇಳ್ತಾನೆ ಬಂದಿದ್ದಾರೆ. ಅದಕ್ಕೇನೆ ನಾನು ಕತ್ತಲೆ ಆದಮೇಲೆ ಮಾವಿನ ಕಾಯಿ ಉದರಿಸಲೇ ಬೇಕು ಅನ್ನೋ ಗುರಿ ಇಟ್ಟುಕೊಂಡು, ಸರಿಯಾಗಿ ಕಲ್ಲು ಹೊಡೆಯೋದನ್ನ ಪ್ರಾಕ್ಟಿಸ್ ಮಾಡ್ತಿದ್ದೆ. ಅದಕ್ಕೆ ಈ ಫಲ ನನಗೆ ದಕ್ಕಿದ್ದು'' ಅಂತ ಅಂದನಂತೆ. ನಮ್ಮಲ್ಲಿ ಎಷ್ಟು ಜನಕ್ಕೆ ಇಂತಹ ಗುರಿಗಳಿವೆ, ನೀವೇ ಹೇಳಿ.

●

---

**ಕೂಸಿಗೆ ಮುನ್ನ**

ಚಂದ್ರು ಬೇಗ ಬೇಗ ಬರ್ತಿರಬೇಕಾದ್ರೆ ಅವನ ಹಿಂದೆ ನಾಗ ಓಡಿಬರ್ತಾನೆ.

ನಾಗ ಸಾರ್, ಸಾರ್, ನೀವು ಪ್ರೆಸಿಡೆನ್ಸಿ ಸ್ಕೂಲ್ ಛೇರ್‌ಮನ್ ಅಲ್ವಾ.

ಚಂದ್ರು ಹೌದು ಏನಾಗಬೇಕಿತ್ತು.

ನಾಗ ಎಲ್.ಕೆ.ಜಿ. ಗೆ ಮಗೂನ ಸ್ಕೂಲಿಗೆ ಸೇರಿಸಬೇಕಾದ್ರೆ ಎಷ್ಟಾಗುತ್ತೆ ಸರ್.

ಚಂದ್ರು ಮೊದಲು ಒಂದು ಲಕ್ಷ ಡೊನೇಷನ್ ಕೊಡಬೇಕು ಆಮೇಲೆ ತಿಂಗಳಿಗೆ ಹತ್ತು ಸಾವಿರ ರೂಪಾಯಿನಂತೆ ಅಷ್ಟೂ ಹಣವನ್ನು ಒಟ್ಟಿಗೇ ಕಟ್ಟಿಬಿಡಬೇಕು.

ನಾಗ ಅಬ್ಬಾ ಅಷ್ಟೊಂದಾ, ಅಂದ್ರೆ ಎರಡು ಲಕ್ಷ ಇಪ್ಪತ್ತು ಸಾವಿರ ಆಯ್ತಲ್ಲ ಸರ್. ಸ್ವಲ್ಪ ಕಡಿಮೆ ಮಾಡ್ಕೊಳೋಕಾಗುತ್ತಾ.

ಚಂದ್ರು ಹಾಗೆಲ್ಲ ಕಡಿಮೆ ಮಾಡೋಕಾಗಲ್ಲ. ನಮ್ಮಲ್ಲಿ ಎಲ್ರಿಗೂ ಒಂದೇ ರೂಲ್ಸು. ಆದ್ರೂ ನೀವು ಮಗೂನ ಕರ್ಕೊಂಡು ಬನ್ನಿ ಆಮೇಲೆ ನೋಡೋಣ.

ನಾಗ ಅಲ್ಲ ಸಾರ್ ಎಷ್ಟು ಕಡಿಮೆ ಮಾಡ್ತೀನೀಂತ ಹೇಳಿಬಿಟ್ರೆ ನಂಗೆ ದುಡ್ಡು ಅಡ್ಜಸ್ಟ್ ಮಾಡ್ಕೊಳೋಕೆ ಸರಿಹೋಗುತ್ತೆ.

ಚಂದ್ರು ಮೊದಲು ಮಗು ಕರ್ಕೊಂಡು ಬನ್ರೀ, ಫಾರಂ ಫಿಲಪ್ ಮಾಡಿ.

ನಾಗ ಆದ್ರೂನೂ ನೀವು ಈಗಲೇ ಹೇಳಿದ್ರೆ ಚೆನ್ನಾಗಿತ್ತು.

ಚಂದ್ರು ಇದೊಳ್ಳೆ ಕಥೆ ಆಯ್ತಲ್ಲ, ಈಗ ಸೀಟ್ ಬೇಕಾಗಿರೋದು ಯಾರಿಗೆ ನಿಮ್ಮ ಮಗೂಗೆ ತಾನೇ?

ನಾಗ ಅಯ್ಯೋ ಇಲ್ಲ ಸಾರ್, ನನಗೆ ಇನ್ನೂ ಮಗು ಆಗಿಲ್ಲ.

ಚಂದ್ರು ಎಂಥದ್ರೀ ದರಿದ್ರ, ಕೂಸು ಹುಟ್ಟೋಕೆ ಮುಂಚೆ ಕುಲಾವಿ ಹೊಲಿಸಿದ್ರು ಅನ್ನೋ ಹಾಗೆ ಇನ್ನೂ ಮಗೂನೇ ಆಗಿಲ್ಲ ಆಗ್ಲೆ ನಿಮ್ಮ ಮಗೂಗೆ ಕೊಡೋ ಸೀಟಿಗೆ ನಾನು ಎಷ್ಟು ಕಡಿಮೆ ಮಾಡ್ಕೊತೀನಿ ಅಂತ ಹೇಳ್ಬೇಕಾ. ಹೋಗ್ರೀ ಹೋಗ್ರೀ.

ನಾಗ ಏನೇ ಆದ್ರೂ ಕಮಿಟ್‌ಮೆಂಟ್ ಕಮಿಟ್‌ಮೆಂಟೇ ಅಲ್ವಾ ಸಾರ್, ಎಲ್ಲಾ ಮೊದಲೇ ತಿಳ್ಕೊಂಡ್ ಬಿಡೋಣ ಅಂತ.

ಚಂದ್ರು ಬಡ್ಕೊಂಡ್ರು ನಿಮ್ಮ ಕಮಿಟ್‌ಮೆಂಟಿಗೆ ಮೊದ್ಲು ಮಗು ಕರ್ಕೊಂಡು ಬನ್ರೀ.

ನಾಗ ಬರ್ತೀನಿ ಸಾರ್ ನನ್ನ ಮಗು ಕರ್ಕೊಂಡು ನಿಮ್ಮ ಸ್ಕೂಲಿಗೇ ಬರ್ತೀನಿ ನಿಮ್ಮನ್ನೇ ಕಾಣ್ತೀನಿ ಆಗ ನೀವು ನನ್ನ ಮಗೂಗೆ ಸೀಟು ಇಲ್ಲ ಅನ್ಬಾರ್ದು.

ಚಂದ್ರು ಅದ್ಸರಿ, ಯಾಕೆ ಇನ್ನೂ ಮಗು ಆಗಿಲ್ಲ, ಮದುವೆಯಾಗಿ ಎಷ್ಟು ವರ್ಷ ಆಯ್ತು.

ನಾಗ ಮದುವೆಯಾದ ಮೇಲೆ, ಮಕ್ಕಳಾದ ಮೇಲೆ ಏನೇನು ಕಮಿಟ್‌ಮೆಂಟ್ ಇರುತ್ತೆ ಅಂತ ತಿಳ್ಕೊತಾ ಇದೀನಿ ಅದಿಕ್ಕೇ.

ಚಂದ್ರು ಅದಿಕ್ಕೆ?

ನಾಗ ನಾನಿನ್ನೂ ಮದುವೆನೇ ಮಾಡ್ಕೊಂಡಿಲ್ಲ.

# ನೇಮ್‌ಮಾಯಣ

**- ಡಾ. ವಿಜಯ್ ಕುಮಾರ್**

ಬೆಳಿಗ್ಗೆ ಹನ್ನೊಂದರ ಸಮಯ. ಕಟ್ಟೆ ಬಳಗದ ಸದಸ್ಯರುಗಳಾದ ಅನಿಲ್, ಕವಿರಾಜ್, ಸರ್ಜಾ, ಪ್ರಾಣೇಶ್, ದನಾ (ಜನಾರ್ದನನನ್ನು ಬಳಗದ ಹುಡುಗರು ಕರೆಯುತ್ತಿದ್ದುದೇ ಹಾಗೆ. ದನದಂತ ಭಾರಿ ಗಾತ್ರದ ಮೈಕಟ್ಟು ಹೊಂದಿದ್ದರೂ, ಮನುಷ್ಯನಂತೆ ಕಾಣುವುದರಿಂದ ''ಜನ, ಅರ್ಧ ದನ = ಜನಾರ್ದನ'' ಎಂದು ಅವರಪ್ಪ ಆತನಿಗೆ ಹೆಸರಿಟ್ಟಿರಬಹುದು ಎಂದು ಅರ್ಥೈಸಿದ್ದರು.) ಕಟ್ಟೆ ಬಳಗದ ಎಲ್ಲರೂ ಎಂದಿನಂತೆ ನಾಗನ ಅಂಗಡಿಯ ಮುಂದಿನ ಕಟ್ಟೆಯನ್ನು ಸೇರಿದ್ದರು. ತಂಡದ ಮತ್ತೊಬ್ಬ ಸದಸ್ಯ ಫೌಂಡರ್ ಮೆಂಬರ್ ಆದ ಆ್ಯಂಡಿಯ ಬರುವಿಕೆಗಾಗಿ ಕಾಯುತ್ತಿದ್ದರು.

ಆ್ಯಂಡಿ, ಕ್ರಿಶ್ಚಿಯನ್ ಏನೂ ಅಲ್ಲ. ''ಅರುಣ'' ಆತನ ಹೆಸರು. ಕಟ್ಟೆ ಬಳಗದಲ್ಲಿ ಸ್ವಲ್ಪ ಹೆಚ್ಚಿನ ಇಂಗ್ಲೀಷ್ ಬಲ್ಲವನಾದ್ದರಿಂದ, ಫಾರಿನ್ ವಿಚಾರಗಳನ್ನು ಹೆಚ್ಚು ತಿಳಿದವನಾದ್ದರಿಂದ ಬಳಗದ ಹುಡುಗರು ಅರುಣ ಎನ್ನುವ ಹೆಸರನ್ನು ಇಂಗ್ಲೀಷ್‌ಗೆ ಬದಲಾಯಿಸಿ 'ಆ್ಯಂಡಿ' ಎಂದು ಪುನರ್ನಾಮಕರಣ ಮಾಡಿದ್ದರು.

ಕಟ್ಟೆ ಬಳಗದ ಹುಡುಗರು ಎರಡು ವರ್ಷದ ಪಿ.ಯು.ಸಿ.ಯ ಓದನ್ನು ಮೂರನೇ ವರ್ಷಕ್ಕೆ ವಿಸ್ತರಿಸಿದಾಗ, ಕಾಲೇಜಿಗೆ ಹೋಗುವಂತಿರಲಿಲ್ಲ. ದೀರ್ಘವಾದ ಹಗಲೂ ಮತ್ತು ರಾತ್ರಿಯ ಸಮಯ ಕಾಲ ಕಳೆಯಲು, ಕಾಲೇಜು ಸಮಯಕ್ಕೆ ಸರಿಯಾಗಿ ನಾಗನ ಅಂಗಡಿಯ ಕಟ್ಟೆಯಲ್ಲಿ ಸೇರಲಾರಂಭಿಸಿದರು. ಆಗ ಹುಟ್ಟಿದ್ದೇ ''ಕಟ್ಟೆ ಬಳಗ''. ನಂತರದಲ್ಲಿ ಡಿಗ್ರಿ ಮುಗಿಸಿದರೂ ಕೆಲಸವಿಲ್ಲದ್ದರಿಂದ ಕಟ್ಟೆ ಸೇರುವುದು ಸಂಪ್ರದಾಯವಾಗಿಬಿಟ್ಟಿತ್ತು. ಹಾಗೆಂದ ಮಾತ್ರಕ್ಕೆ ಅವರು ಸೋಮಾರಿಗಳೇನೂ ಅಗಿರಲಿಲ್ಲ. ಅವರದ್ದು ಶಿಸ್ತುಬದ್ಧ ಜೀವನ. ಮನೆಯಲ್ಲಿ ಮುಂಜಾನೆ 8ಕ್ಕೇ ಎದ್ದು, ಪ್ರಾತಃಕಾಲದ ಕೆಲಸಗಳನ್ನು ಮುಗಿಸಿಕೊಂಡು ಹನ್ನೊಂದು ಗಂಟೆಯೊಳಗಾಗಿ ಕಟ್ಟೆ ಸೇರುತ್ತಿದ್ದರು. ನಂತರ ಯಾವುದಾದರೊಂದು ವಿಷಯ/ವಿಚಾರದ ಮೇಲೆ ದೀರ್ಘಕಾಲ ತೌಡುಕುಟ್ಟುತ್ತಿದ್ದರು. 12 ಗಂಟೆಗೆ ಕ್ಯಾಂಟೀನ್‌ನಲ್ಲಿ 1 ಬೊಂಡ, ಅರ್ಧ ಚಹಾ ಸೇವಿಸಿ ಇಂಡೋರ್ ಗೇಮ್ಸ್ ಆಡಲು ಕವಿರಾಜನ ಮನೆಯನ್ನು ಸೇರುತ್ತಿದ್ದರು. ಇವರಿಗೆ ಬರುತ್ತಿದ್ದ ಒಂದೇ ಒಂದು ಇಂಡೋರ್ ಗೇಮ್ ಅಂದರೆ ''ಇಸ್ಪೀಟ್ ಆಟ''. ಮಧ್ಯಾಹ್ನ 3 ಗಂಟೆಯವರೆಗೆ ಆಟ ಸಾಗುತ್ತಿತ್ತು. ಆಟದಲ್ಲಿ ದಣಿದ ನಂತರ ಮನೆಗೆ ತೆರಳಿ, ಊಟ ಮಾಡಿ, ಮಧ್ಯಾಹ್ನದ ಸಿಹಿ ನಿದ್ರೆ ಮುಗಿಸಿ ಮತ್ತೆ ಸಂಜೆ ಆರಕ್ಕೆಲ್ಲಾ ಕಟ್ಟೆಗೆ ಹಾಜರಾಗುತ್ತಿದ್ದರು. ಎಂಟು ಗಂಟೆಯ ತನಕ ಹರಟೆ ಮುಂದುವರೆಯುತ್ತಿತ್ತು. ನಂತರ ಯಾವುದಾದರೊಂದು ಬಾರ್ ಸೇರಿಕೊಳ್ಳುತ್ತಿದ್ದರು. ಕುಡಿತದಲ್ಲೂ ತುಂಬಾ ಶಿಸ್ತು ಇಟ್ಟುಕೊಂಡವರಿವರು. ''90'' ರಮ್ ಹಾಕಿದ ಮೇಲೆ ಒಂದು ತೊಟ್ಟೂ ಎಕ್ಸ್ಟ್ರಾ ಕುಡಿಯುವವರಲ್ಲ. ಕುಡಿತದ ಜೊತೆಗೆ, ಎರಡು ಸಿಗರೇಟು ಬಿಟ್ಟರೆ ಬೇರೆ ಸಮಯದಲ್ಲಿ ಸಿಗರೇಟು ಮುಟ್ಟುತ್ತಿರಲಿಲ್ಲ. ಕುಡಿತದ ಜೊತೆಗೆ ತಿನ್ನುವ ಸ್ನ್ಯಾಕ್ಸ್ ನಲ್ಲೂ ಶಿಸ್ತು ಇರುತ್ತಿತ್ತು. ಒಂದು ಸಾತ್ವಿಕ ಆಹಾರವಾದ ಕಡಲೇ ಬೀಜದ ''ರಾಜ

ಸ್ಪೆಷಲ್'' ಮತ್ತು ಒಂದು ತಾಮಸ ಸ್ನ್ಯಾಕ್, ಆದ ''ಎಗ್ ಪಕೋಡ'' ಬಿಟ್ಟರೆ ಬೇರೇನನ್ನೂ ತಿನ್ನುತ್ತಿರಲಿಲ್ಲ. 10 ಗಂಟೆಯೊಳಗಾಗಿ, ಕುಡಿತದ ಸೇಷನ್ ಮುಗಿಸಿ ಊಟಕ್ಕೆ ಮನೆ ಸೇರಿ ಬಿಡುತ್ತಿದ್ದರು. ರಾತ್ರಿ ತಡವಾಗಿ ಮನೆಗೆ ಹೋಗಿ ಬಾಗಿಲು ತೆರೆಸುವ, ಊಟಕ್ಕೆ ಬಡಿಸುವ ತೊಂದರೆ ಮನೆ ಹೆಣ್ಣು ಮಕ್ಕಳಿಗೆ ಕೊಡಬಾರದು ಎಂಬ ಉದಾತ್ತ ಮನೋಭಾವ ತಂಡದ ಎಲ್ಲಾ ಸದಸ್ಯರದ್ದು.

ಎಂದಿನಂತೆ ಅಂದು ಕೂಡ ಎಲ್ಲರೂ ಕಟ್ಟೆ ಕಾಯುತ್ತಿದ್ದರು. ''ಆ್ಯಂಡಿ ಯಾಕೋ ಇನ್ನೂ ಬರಲಿಲ್ಲ'' ಎಂದ ನಾಗ, ಅಂದಿನ ದಿನಪತ್ರಿಕೆ ಮೇಲೆ ಕಣ್ಣಾಡಿಸಲಾರಂಭಿಸಿದ. ಪತ್ರಿಕೆಯಲ್ಲಿ ಸಮಾರಂಭವೊಂದರ ಅತಿಥಿಗಳಾಗಿ ಭಾಗವಹಿಸಿದ್ದ ಇಬ್ಬರು ಮಂತ್ರಿಮಹೋದಯರ ಹೆಸರುಗಳು ನಾಗನ ದಿವ್ಯ ಗಮನ ಸೆಳೆದವು. ಮಂತ್ರಿಗಳಾದ 'ಸಂಗಣ್ಣ ಕರಡಿ' ಮತ್ತು 'ರಾಜು ಕಾಗೆ.' ಆ ವರದಿಯನ್ನ ಜೋರಾಗಿ ಓದಿದ ನಾಗ ''ಅದೇನು ಹೆಸರು ಅಂತ ಇಟ್ಕೋಳ್ಳುತ್ತಾರಪ್ಪಾ 'ಕಾಗೆ' ಅಂತೆ, 'ಕರಡಿ' ಅಂತೆ. ಮನುಷ್ಯರಾಗಿ ಹುಟ್ಟಿದ ಮೇಲೆ ಮನುಷ್ಯ ಜಾತಿಗೆ ತಕ್ಕಂತ ಹೆಸರು ಇಟ್ಕೊಳ್ಳಬೇಕಪ್ಪ'' ಎಂದ.

''ನಿನ್ನ ಹೆಸರೇನು ಮಹಾ. ನಾಗರಾಜ ಎಂದು ಇಟ್ಟುಕೊಂಡಿದ್ದಿಯಲ್ಲ, ನೀನೇನು ನಾಗಗಳ ರಾಜನೇ? ಹಾವು ಹಾಳಾಗ್ಲಿ, ಹಲ್ಲಿಕಂಡ್ರೆ ಹೌಹಾರ್ತೀಯ'' ಎಂದು ಕುಟುಕಿದ ಕವಿರಾಜ. ಕೆರಳಿದ ನಾಗ ''ಕವಿರಾಜ ಎಂದ ಮಾತ್ರಕ್ಕೆ ನೀನೇನು ಕವಿಯಾದೇನ್ಲಾ? ನಮ್ಮ ಜೂನಿಯರ್ ಕ್ಲಾಸ್ ಹುಡುಗಿ 'ಕವಿತಾ,' ಎದುರು ಮನೆ 'ಕವನ' ಬಿಟ್ರೆ ಒಂದಾದ್ರು ಕವಿತೆ, ಕವನದ ಬಗ್ಗೆ ಗೊತ್ತೇನ್ಲಾ?, ಕವಿತೆ ಬರೆಯೋದಿರ್ಲಿ ಬರೆದವರ 5 ಜನರ ಹೆಸರಾದ್ರೂ ಹೇಳು ನೋಡೋಣ''? ಎಂದು ಬುಸುಗುಟ್ಟಿದ.

''ಹಾಗೆ ಹೇಳಬೇಡ್ರೋ, ನಮ್ಮ 'ಗ್ಯಾಸ್' ಅನಿಲನನ್ನು ನೋಡ್ರಿ. ಹೆಸರಿಗೆ ತಕ್ಕಂತೆಯೇ ಇದ್ದಾನೆ. ಉಸಿರಾಟದಲ್ಲಿ ತೆಗೆದುಕೊಂಡ ಗಾಳಿಯಲ್ಲಿ 50% ಮಾತ್ರವನ್ನು ವಾಪಸ್ ಮೂಗಿನಿಂದ ಬಿಟ್ಟು ಉಳಿದರ್ಧವನ್ನು ಕೆಳಗಿನಿಂದ ಝೇಂಕರಿಸುತ್ತಾನೆ. ಆತ ಬಿಡುವ ಗ್ಯಾಸ್ ಕಲೆಕ್ಟ್ ಮಾಡಿದರೆ ಒಂದೇ ದಿನದಲ್ಲಿ ಒಂದು ಎಂಪ್ಟಿ ಗ್ಯಾಸ್ ಸಿಲಿಂಡರ್ ತುಂಬಬಹುದು. ಒಟ್ಟಿನಲ್ಲಿ ನಮ್ಮ ಅನಿಲ್ 'ದೇಶದ ಆಸ್ತಿ' ಎಂದು ಕಿಚಾಯಿಸಿದ ಸರ್ಜಾ.

''ನನಗೆ ಪ್ರಾಣೇಶ ಎಂಬ ಒಳ್ಳೆಯ ಹೆಸರಿದೆ. ಹಾಗಂತ ನನ್ನನ್ನು ಎಂದಾದ್ರೂ ''ಪ್ರಾಣೇಶ್'' ಎಂದು ಕರೆದಿದ್ದೀರಾ? ಯಾವಾಗಲೂ ಪ್ರಾಣಿ, ಪ್ರಾಣಿ ಎಂದು ಕೂಗ್ತಿರಾ'' ಎಂದ ಪ್ರಾಣೇಶ ತನ್ನ ಅಸಮಾಧಾನವನ್ನು ತೋಡಿಕೊಂಡ.

ದಿನಕ್ಕೊಂದು ವಿಷಯಾಧಾರಿತ ಚರ್ಚೆಗೆ ತೊಡಗುತ್ತಿದ್ದ ತಂಡಕ್ಕೆ ಅಂದು ನಮ್ಮಲ್ಲಿರುವ ವಿಚಿತ್ರ ಹೆಸರುಗಳು, ಅಡ್ಡ ಹೆಸರುಗಳ ಮೇಲಿನ ಚರ್ಚೆಗೆ ನಾಂದಿ ಹಾಡಿದ್ದ ನಾಗರಾಜ. ಅದೇ ಸಮಯಕ್ಕೆ ಎಲ್ಲರೂ ಎದುರು ನೋಡುತ್ತಿದ್ದ ಆ್ಯಂಡಿ ಕೂಡಾ ತಂಡವನ್ನು ಸೇರಿಕೊಂಡ. ಚರ್ಚೆಗೆ ಚಾಲನೆ ದೊರೆಯಿತು.

''ಏನೇ ಅನ್ನು, ನಮ್ಮ ದೇಶದಲ್ಲಿ ಇಡೋ ಹೆಸರುಗಳೇ ಸರಿಯಿಲ್ಲಪ್ಪ. ನಾಗ ಹೇಳೋ ಹಾಗೆ ಮನುಷ್ಯರಾಗಿ ಹುಟ್ಟಿ, ಪ್ರಾಣಿ ಹೆಸರನ್ನು ಯಾಕೆ ಇಟ್ಟುಕೊಳ್ಳುತ್ತಾರೋ? ಸಿ.ಆರ್. ಸಿಂಹ ಅಂತೆ, ಟೈಗರ್ ಪ್ರಭಾಕರ್ ಅಂತೆ, ಗರುಡಾಚಾರ್ ಅಂತೆ, ಗುಬ್ಬಿ ವೀರಣ್ಣ ಅಂತೆ,

ಗಜಪತಿಯಂತೆ ......'' ಎನ್ನುತ್ತಾ 'ಸಂಗಣ್ಣ ಕರಡಿ' ಮತ್ತು 'ರಾಜು ಕಾಗೆ' ಹೆಸರಿಗೆ ಇನ್ನಷ್ಟು ಹೆಸರುಗಳನ್ನು ಸೇರಿಸಿದ ಸರ್ಜಾ.

''ಏನೇ ಹೇಳು, ಫಾರಿನ್‌ನಲ್ಲಿ ಇಡೋ ಹೆಸರುಗಳೇ ಚಂದ. ನಮ್ಮ ಅರುಣನ ಹೆಸರನ್ನೇ ನೋಡಿ. ನಾವೇ ಆ್ಯಂಡಿ ಎಂದು ಬದಲಿಸಿದ ಮೇಲೆ ಎಷ್ಟು ಸ್ಟೈಲಿಶ್ ಅನ್ಸುತ್ತೆ.'' ಎಂದ ಪ್ರಾಣೇಶ್. ತಡವಾಗಿ ಬಂದರೂ ಅಂದಿನ ಚರ್ಚೆಯ ವಿಷಯವನ್ನು ಗ್ರಹಿಸಿದ್ದ ಆ್ಯಂಡಿ ಎಂದಿನಂತೆ ತನ್ನ ಆಲೋಚನೆಯನ್ನ ಫಾರಿನ್‌ವರೆಗೂ ವಿಸ್ತರಿಸಿದ. ಒಂದು ಕ್ಷಣ ಯೋಚಿಸಿ, ''ಹೆಸರಿಡುವ ವಿಚಾರದಲ್ಲಿ ನಮಗೂ ಫಾರಿನರ್ಸ್‌ಗೂ ಅಂಥಾ ವ್ಯತ್ಯಾಸವೇನಿಲ್ಲ'' ಎಂದ. ಎಲ್ಲರೂ ತನ್ನನ್ನು ನೋಡುತ್ತಿದ್ದಾರೆ ಎಂದು ವಿದ್ವಾಂಸರ ಗಂಭೀರತೆಯನ್ನು ಮುಖದಲ್ಲಿ ತಂದು ಕೊಂಡಿದ್ದ ಆ್ಯಂಡಿ.

''ಹಾಗಾದ್ರೆ ಅವರೂ ನಮ್ಮ ಹಾಗೆ ನಾಯಿ, ನರಿ ಅಂತ ಪ್ರಾಣಿಗಳ ಹೆಸರಿಟ್ಕೋತಾರಾ?'' ವ್ಯಂಗ್ಯವಾಗಿ ಪ್ರಶ್ನಿಸಿದ ನಾಗ. ನಾಗನನ್ನು ದಡ್ಡ ಶಿಖಾಮಣಿ ಎಂದು ಒಂದೆರಡು ಬಾರಿ ಕರೆದಿದ್ದ ಆ್ಯಂಡಿಯ ಮೇಲೆ ಸ್ವಲ್ಪ ಅಸಹನೆ ಇತ್ತು ನಾಗನಿಗೆ. ''ಹೌದು ಫಾರಿನ್ ಕ್ರಿಕೆಟರ್ಸ್‌ಗಳ ಹೆಸರನ್ನು ಗಮನಿಸಿ ಮಾರ್ಟಿನ್ ಕ್ರೋ, ಪೀಟರ್ ಸ್ವಾನ್, ಡಿಕೀ ಬರ್ಡ್...... ಎಂದು ಹೆಸರಿವೆ. ಸಿನಿಮಾ ರಂಗದಲ್ಲಿ ಸಮಂತ ಫಾಕ್ಸ್, ಈಗಲ್‌ಟನ್, ಟೆನ್ನಿಸ್ ಆಟಗಾರ ಮಾರ್ಡಿ ಫಿಶ್.... ಎನ್ನುವ ಹೆಸರಿನವರಿದ್ದಾರೆ. ಇವರೆಲ್ಲಾ ನಾಯಿ, ನರಿ ಹೆಸರಿಟ್ಟುಕೊಂಡವ್ರೇ ಅಲ್ವೇ?'' ಎಂದು ಸಮಜಾಯಿಸಿದ ಆ್ಯಂಡಿ.

''ಪ್ರಾಣಿಗಳಾಯ್ತು ಬಿಡು. ನಮ್ಮಲ್ಲಿ ಗಿಡ, ಮರಗಳ ಹೆಸರನ್ನೂ ತಮ್ಮ ಹೆಸರಿನ ಜೊತೆ ಸೇರಿಸ್ಕೋತಾರೆ. ವಿರೂಪಾಕ್ಷ ಜಾಲಿಮರ, ರಾಜಶೇಖರ ಬೇವಿನಮರ, ಹುತ್ತೇಶ್ ಹುಣಸೀಮರ, ಸೋಮಣ್ಣ ತೆಂಗಿನಮರ ಅಂತ. ಅಲ್ಲಿ ಎಂಗ್ಲಾ?'' ಪ್ರಶ್ನಿಸಿದ ನಾಗ. ಆ್ಯಂಡಿಯನ್ನು ಹೇಗಾದರು ಮಾಡಿ ಅವನ ಜ್ಞಾನದ ಖೆಡ್ಡದೊಳಗೆ ಕೆಡವಬೇಕು ಎಂಬ ಉದ್ದೇಶ ಮತ್ತು ಹಟ ನಾಗನದ್ದು.

''ನಮ್ಮಲ್ಲಿಯ ಹಾಗೆ ಇಂಥವೇ ಮರ ಅಂತ ಇಟ್ಕಳ್ದಿದ್ರೂ 'ಮರ' ಅಂತ ಇಟ್ಕೋತಾರೆ. ಟೈಗರ್‌ವುಡ್ಸ್, ಕೋಲಿಂಗ್‌ವುಡ್ಸ್, ರಿಚ್‌ವುಡ್ಸ್.... ಹೆಸರಿನ ಆಟಗಾರರನ್ನ ಕೇಳಿಲ್ವಾ'' ಎಂದ ಆ್ಯಂಡಿ. ನಾಗನ ಪ್ರಶ್ನೆಯಲ್ಲಿದ್ದ ವ್ಯಂಗ್ಯತೆಯನ್ನು ಅರಿತಿದ್ದ ಆ್ಯಂಡಿ ಮುಗುಳುನಗುತ್ತಲೇ ಉತ್ತರಿಸಿದ.

''ಕಾಗೆ, ಗುಬ್ಬಿ, ಗಿಡ, ಮರ ಆಯ್ತು ಬಿಡು. ನಮ್ಮಲ್ಲಿ ಬಹಳ ಜನ ಊರೇ ನಮ್ದು ಅನ್ನೋಹಾಗೆ ಊರ ಹೆಸರನ್ನೇ ತಮ್ಮ ಹೆಸರಿನ ಜೊತೆಗೆ ಇಟ್ಕೋತಾರೆ. ಸಾಹಿತಿಗಳಾದ ಗೊರೂರು ರಾಮಸ್ವಾಮಿ ಅಯ್ಯಂಗಾರ್, ದೇವನೂರು ಮಹಾದೇವ, ರೆಹಮತ್ ತರೀಕೆರೆ, ಹಾಡುಗಾರ ಶಿವಮೊಗ್ಗ ಸುಬ್ಬಣ್ಣ, ಹಾಸ್ಯಗಾರ ಗಂಗಾವತಿ ಪ್ರಾಣೇಶ್, ರಾಜಕಾರಣಿಗಳಾದ ಕಾಗೋಡು ತಿಮ್ಮಪ್ಪ, ಶಾಮನೂರು ಶಿವಶಂಕರಪ್ಪ, ಹಾರ್ನಳ್ಳಿ ರಾಮಸ್ವಾಮಿ, ವಡ್ನಾಳ್ ರಾಜಣ್ಣ....'' ದೊಡ್ಡ ಪಟ್ಟಿಯನ್ನೇ ಬಿಟ್ಟ ಕೆರಳಿದ್ದ ನಾಗ. ''ಫಾರಿನರ್ಸ್ ಕೂಡ ಹೀಗೇ ತಮ್ಮ ಹೆಸರಿನ ಜೊತೆ ಊರ ಹೆಸರನ್ನ ಇಟ್ಕೋತಾರಾ?'' ಪ್ರಶ್ನಿಸಿದ. ''ಹೂಂ ಇಟ್ಕೋತಾರೆ, ನಮ್ಮಲ್ಲಿ ಬರೀ ಹಳ್ಳಿ ಹೆಸರುಗಳನ್ನು ಇಟ್ಕೋತಾರೆ.

ಅವರು ದೊಡ್ಡ ಜನ. ದೊಡ್ಡ ದೊಡ್ಡ ಊರುಗಳ ಹೆಸರನ್ನೇ ಇಟ್ಕೋತಾರೆ. ಹಾಲಿವುಡ್ ಸಿನಿಮಾ ನಟ ಡೆನ್ಜಿಲ್ ವಾಷಿಂಗ್‌ಟನ್, ಬರಹಗಾರ ಸಿಡ್ನಿ ಷೆಲ್‌ಡನ್, ಪಾಪ್ ಗಾಯಕಿಯಾದ ವಿಟ್ನಿ ಹೌಸ್‌ಟನ್, ವಿಶ್ವದ ಹಿಲ್‌ಟನ್ ಗ್ರೂಪ್ ಆಫ್ ಹೊಟೇಲ್‌ನ ಮಹಿಳಾ ಉದ್ಯಮಿ ಪ್ಯಾರಿಸ್ ಹಿಲ್ಟನ್, ಇವರೆಲ್ಲ ದೊಡ್ಡ ದೊಡ್ಡ ಮೆಟ್ರೋ ಪಾಲಿಟನ್ ನಗರಗಳ ಹೆಸರುಗಳನ್ನೇ ತಮ್ಮ ಹೆಸರುಗಳ ಜೊತೆಗೆ ಸೇರಿಸಿಕೊಂಡಿದ್ದಾರೆ'' ಎಂದು ತಣ್ಣಗೆ ಉತ್ತರಿಸಿದ ಆ್ಯಂಡಿ. ನಾಗ ಮುಂದುವರೆಯದಾದ. ಇನ್ನೊಮ್ಮೆ ಎಂದಾದರು ಎಲ್ಲಾದರೂ ಆ್ಯಂಡಿಯನ್ನು ಹಳ್ಳಕ್ಕೆ ಕೆಡಗುವ ಅಚಲ ನಿರ್ಧಾರವನ್ನು ಮನದಲ್ಲೇ ಮಾಡಿಕೊಂಡ.

ಹರಟೆಯ ಮುಂದಿನ ಸರದಿಯನ್ನು ಗ್ಯಾಸ್ ಅನಿಲ ಮುಂದುವರೆಸಿದ. ''ನಮ್ಮಲ್ಲಿ ಈಗಿನ ಜನರೇಷನ್‌ನ ಹೆಸರುಗಳು ಕೊಂಚ ಸುಧಾರಿಸಿವೆ. ಹಳೇ ಜನ ಏನೇ ಹೆಸರಿಟ್ಟರೂ ಕೊನೆಯಲ್ಲಿ ''ಅಪ್ಪ'' ಸೇರಿಸಿ ಬಿಡುತ್ತಿದ್ದರು. ಹುಟ್ಟಿದ ಕೂಸುಗಳು ಇನ್ನೂ ಚಿಕ್ಕ ಮಕ್ಕಳಾಗಿದ್ದರೂ ಹೆಸರಿಂದಾಗಿ ಅಪ್ಪಗಳಾಗಿ ಬಿಡುತ್ತಿದ್ದರು. ಮಾನಪ್ಪ, ಕಾಳಪ್ಪ, ಬಸಪ್ಪ, ಬನಪ್ಪ ಅಂತ'' ಎಂದ ಅನಿಲ. ''ಅವರಲ್ಲೂ ಹೀಗೆ ಅಪ್ಪ, ಬೆಪ್ಪ ಅಂತ ಇಟ್ಕೋತಾರಾ?'' ಎಂದು ಪ್ರಶ್ನಿಸಿದ. ''ನಮ್ಮಲ್ಲಿ ಅಪ್ಪಾ ಅಂತ ಕೊನೆಯಾದ್ರೆ ಅವರಲ್ಲಿ ಮಗ ಅಂತ ಕೊನೆಯಾಗ್ತದೆ. ಅಷ್ಟೇ ವ್ಯತ್ಯಾಸ'' ಎಂದ ಆ್ಯಂಡಿ. ''ಜಾಕ್ಸನ್, ರೀಚಾರ್ಡ್ಸನ್, ನಿಕಲಸನ್ ರೊಬಿನ್‌ಸನ್, ರೊಬರ್ಟ್‌ಸನ್ , ಆ್ಯಂಡರ್‌ಸನ್....'' ಹೀಗೆ 'ಸನ್'ಗಳ ಪಟ್ಟಿಯನ್ನೇ ಬಿಟ್ಟ ಆ್ಯಂಡ್.

''ನಮ್ಮಲ್ಲಿ ಹೆಸರುಗಳು ಹೇಗೆ ಅಪ್ಪಾ ಎಂದು ಕೊನೆಯಾಗ್ತವೋ ಹಾಗೇ ಯುರೋಪ್‌ನ ಬೇರೆ ಬೇರೆ ದೇಶ, ಪ್ರಾಂತ್ಯಗಳಲ್ಲಿ ಕೂಡ ಭಿನ್ನ ಭಿನ್ನ ರೀತಿಯಲ್ಲಿ ಕೊನೆಯಾಗ್ತವೆ. ರಷ್ಯದಲ್ಲಿ ಕಾರ್ಪವ್, ಕ್ಯಾಪ್ಸರಾವ್, ಪಾಲವ್, ಡಿಮಿಟ್ರಾವ್, ಸುಕೋವ್.....'' ಹೀಗೆ ''ಕೋವ್'' ನಿಂದ ಕೊನೆಯಾದರೆ, ಕೆಲವು ಪ್ರಾಂತ್ಯದಲ್ಲಿ ಹೆಸರುಗಳು ಬ್ರಿನಾವ್, ಮೆಡ್ವಡೇವ್, ಕೋಸ್‌ನವ್..... ಎಂದು ಕೊನೆಯಾಗ್ತವೆ. ಜೆಕ್ ರಾಜ್ಯದಲ್ಲಿ ಜೊಕೋವಿಕ್, ಕಾರ್ಲೊನಿಕ್, ತಿಪ್ಸರ್‌ವಿಕ್, ಎವಸೋನಿಕ್..... ಅಂತ 'ವಿಕ್' ಎಂದು ಕೊನೆಯಾಗ್ತವೆ'' ಎಂದ ಆ್ಯಂಡಿ.

'''ಅಪ್ಪಾ', ಏನೋ ಸರಿ ಅವ್ವಂದಿರು? ನಮ್ಮ ಹಳ್ಳೀಲಿ ತಾಯವ್ವ, ಪುಟ್ಟವ್ವ, ಶಾಂತವ್ವ ಅಂತ ಯಾರ ಹೆಸರು ನೋಡಿದ್ರೂ ಅವ್ವಾ ಅಂತಲೇ ಅಂತ್ಯವಾಗುತ್ತವೆ. ಅಲ್ಲಿಯ ಹೆಣ್ಣುಮಕ್ಕಳ ಹೆಸರು ಕೂಡ ಅವ್ವಾ ಅಂತಾ ಕೊನೆಯಾಗುತ್ತವಾ?'' ಎಂದು ಕುತೂಹಲದಿಂದ ಕೇಳಿದ ಜನಾರ್ಧನ. ''ಹೂಂ ಕಣ್ಲಾ, ಶರಪೋವ್ವ, ನವ್ರಾಟಿಲೋವ್ವ, ಪೆಟ್ರೋವ್ವ, ಝಕೋಪಲೋವ್ವ ವಿಟೋವ... ಈ ಹೆಸರುಗಳನ್ನೆಲ್ಲಾ ಕೇಳಿಲ್ವಾ? ಅವರ ಹೆಸರುಗಳೂ ಕೂಡ ಅವ್ವಾ ಎಂದೆ ಕೊನೆಯಾಗಿಲ್ವಾ?'' ಎಂದ ಆ್ಯಂಡಿ.

''ನಮ್ಮಲ್ಲಿ ರಾಜನಾಗದಿದ್ರೂ 'ಚಕ್ರವರ್ತಿ' ಎಂದು ಹೆಸರಿಟ್ಟುಕೊಳ್ಳುವ ಜನ ಅವ್ರೆ. ಮಿಥುನ್ ಚಕ್ರವರ್ತಿ, ಮನು ಚಕ್ರವರ್ತಿ, ಚಕ್ರವರ್ತಿ ಸೂಲಿಬೆಲೆ...'' ಅಲ್ಲಿ ಹೆಂಗ್ಲಾ? ಎಂದ ಕವಿರಾಜ.

''ಚಕ್ರವರ್ತಿ ಎಂದರೆ ''ಎಂಪರರ್.'' ಹಾಗಂತ ಹೆಸರಿಟ್ಟುಕೊಂಡ ಉದಾಹರಣೆ ನಂಗೊತ್ತಿಲ್ಲ'' ಎಂದ ಆ್ಯಂಡಿ. ''ಚಕ್ರವರ್ತಿ ಎಂದರೆ ಸುಲ್ತಾನ್, ಮುಸ್ಲಿಮ್ಸ್‌ನಲ್ಲಿ ತುಂಬಾ ಜನ ಹಾಗೆ ಇಟ್ಕೋತಾರೆ''. ತಕ್ಷಣ ಪ್ರತಿಕ್ರಿಯಸಿದ ಸರ್ಜಾ. ಲಷ್ಕರ್‌ಮೊಹಲ್ಲಾದ ಬಳಿ ಇದ್ದ ಸರ್ಜಾಗೆ ಸಾಕಷ್ಟು ಮುಸ್ಲಿಂ ಸ್ನೇಹಿತರಿದ್ದುದರಿಂದ ಟಿಪ್ಪು ಸುಲ್ತಾನ್, ರಜಿಯಾ ಸುಲ್ತಾನ್, ಬಹುಮನಿ ಸುಲ್ತಾನ್ ಮೊಹಮ್ಮದ್ ಸುಲ್ತಾನ್ ಎಂದು ಕೆಲವನ್ನು ಹೆಸರಿಸಿದ. ಮುಂದುವರೆಸಿದ ಸರ್ಜಾ ''ನಮ್ಮಲ್ಲಿ ಹೆಣ್ಣು ಮಕ್ಕಳ ಹೆಸರಿನ ಜೊತೆ 'ರಾಣಿ' ಸೇರಿಸ್ತಾರೆ. ಸುಧಾರಾಣಿ, ದೇವಿಕಾರಾಣಿ, ಶಿಲ್ಪಾರಾಣಿ... ಹಾಗೇ ಮುಸ್ಲಿಂ ಹೆಣ್ಣು ಮಕ್ಕಳ ಹೆಸರಿನ ಜೊತೆ 'ಬೇಗಂ' ಸೇರಿಸ್ತಾರೆ. ಶಂಶಾದ್ ಬೇಗಂ, ಮಮ್ತಾಜ್ ಬೇಗಂ, ಅನ್ಸಾರಿ ಬೇಗಂ, ಬೇಗಂ ಉನ್ನಿಸಾ,'' ಎಂದು ತಿಳಿಸಿದ.

ಹುಬ್ಬಳ್ಳಿ ಕಡೆ ಸಾಕಷ್ಟು ನೆಂಟಿದ್ದ ನಾಗರಾಜನಿಗೆ ಕೊನೆಯ ಅಸ್ತ್ರವಾಗಿ ಮತ್ತೊಂದು ಅಡ್ಡ ಹೆಸರು ನೆನಪಾಗಿತ್ತು, ''ಕೆಲವರು ಸಂಸಾರಿಗಳಾಗಿದ್ರೂ ತಮ್ಮ ಹೆಸರಿನ ಜೊತೆ 'ಮಠ' ಸೇರಿಸಿಕೊಂಡು ಬಿಡುತ್ತಾರೆ. ಹಿರೇಮಠ, ಮಳೀಮಠ, ಚರಂತಿಮಠ, ನಾಗಲೋಟಿಮಠ...'' ಅಂತ. ಬೇರೆಲ್ಲೂ ಈ ರೀತಿ ಇಟ್ಕೋಳೊಲ್ವೇನೋ?'' ಎಂದ ಆ್ಯಂಡಿಯನ್ನು ಸಿಕ್ಕಿಸುವ ದೃಷ್ಟಿಯಿಂದ. ''ಯಾಕಿಲ್ಲಾ, ಮುಸ್ಲಿಂಸಲ್ಲೂ ಆದರ್ಗಾ ಈದರ್ಗಾ ಅಂತಾ ಇಟ್ಕೋತಾರೆ. ರಂಜಾನ್‌ದರ್ಗಾ, ಇಸ್ಮಾಯಿಲ್‌ದರ್ಗಾ ಹೆಸರು ಕೇಳಿಲ್ವೇನೋ!'' ಎಂದ ಸರ್ಜಾ. ಸರ್ಜಾ ಉತ್ತರಿಸಿದ್ದು ನಾಗನಿಗೆ ತುಸು ನಿರಾಸೆ ಮೂಡಿಸಿತು.

''ಮತ್ತೇ, ಹುಬ್ಬಳ್ಳಿ ಕಡೆ ಮೂಲಿಮನಿ, ಹಾದಿಮನಿ, ಹೊಸಮನಿ, ಹಿತ್ಲಮನಿ, ಕಟ್ಟೀಮನಿ, ಅಂತ ''ಮನೆ''ಯನ್ನು ಹೆಸರಿನ ಜೊತೆ ಇಟ್ಕೋತಾರಲ್ಲ?'' ಎಂದು ಮತ್ತೊಂದು ಅಡ್ಡ ಹೆಸರನ್ನು ಪ್ರಸ್ತಾಪಿಸಿದ ನಾಗರಾಜ. ''ಇಂಗ್ಲೀಷ್‌ನವರೂ 'ಮನಿ' ಅನ್ನೋ ಸುವರ್‌ನೇಮ್ ಇಟ್ಕೋತಾರೆ ಕಣೋ. ಶೆರ್ಲೊಕ್ ಹೋಮ್ಸ್ ರಿಚರ್ಡ್ ಹೋಮ್ಸ್, ರೊಬಿನ್ ಹೋಮ್ಸ್....'' ಎಂದ ಆ್ಯಂಡಿ.

ಒಟ್ಟಿನಲ್ಲಿ ಹೆಸರುಗಳ ವಿಚಾರದಲ್ಲಿ ಪ್ರಪಂಚದ ಎಲ್ಲಾ ಜನರೂ ಒಂದೇ ಅನ್ನು. ನಮ್ಮಲ್ಲಿಡೋ ಶಣ್ಮುಖಪ್ಪ 'ಅಕ್ಕಿ' ಹೆಸರು ಅವರಲ್ಲಿ ಕ್ಲೈವ್ 'ರೈಸ್' ಆಗ್ತದೆ. ಇವನು ಅಕ್ಕಿನೂ ಅಲ್ಲ, ಅವನು ಅನ್ನನೂ ಅಲ್ಲ. ಅಡಿಗೆಯ ಆರ್ಟ್‌ನ ಗಂಧವೇ ಅರಿಯದ ನಮ್ಮಲ್ಲಿಯ ರಾಮ'ಭಟ್ಟ' ಅವರಲ್ಲಿ ಆ್ಯಂಡಿ 'ಕುಕ್' ಆಗಿರ್ತಾನೆ. ಹೂಗಳನ್ನು ಗುರ್ತಿಸೋಕೂ ಆಗದ ನಮ್ಮ ''ದೈತೋಟ'' ಹೆಸರು ಅವರಲ್ಲಿ ಆ್ಯಂಡಿ 'ಫ್ಲವರ್' ಆಗಿರ್ತಾನೆ. ನಮ್ಮೂರ ಅಮರಪ್ಪ 'ಬೇಲಿ,' ಶಂಕರಪ್ಪ 'ಘಂಟಿ', ಅವರಲ್ಲಿ ಅಲನ್ 'ಬಾರ್ಡರ್,' ಇವನ್ 'ಬೆಲ್' ಆಗಿರ್ತಾರೆ''. ಎಂದ ಕವಿ ತನ್ನ ಕ್ರಿಕೆಟ್ ಜ್ಞಾನ ಭಂಡಾರದಿಂದ ಸಾಕಷ್ಟು ಕ್ರಿಕೆಟರ್‌ಗಳ ಹೆಸರುಗಳ ಜೊತೆಯಲ್ಲಿ ಸ್ಥಳೀಯ ಹೆಸರುಗಳಲ್ಲಿರುವ ಸಾಮ್ಯತೆಯನ್ನು ಗುರುತಿಸಿದ್ದ. ಅದು ಸರಿ ಎಂದು ಕವಿಯ ಜ್ಞಾನವನ್ನು ನಾಗ ಮೆಚ್ಚಿಕೊಂಡ.

ಅಷ್ಟರಲ್ಲಿ ನಾಗನ ಅಂಗಡಿಯಲ್ಲಿದ್ದ ಗಡಿಯಾರ 12 ಗಂಟೆ ಭಾರಿಸಿತು. ಕಟ್ಟೆ ಬಳಗದ ಹುಡುಗರಿಗೆ ಅರ್ಧ ಚಹಾ ಸೇವಿಸಿ ಇಂಡೋರ್ ಗೇಮ್ಸ್‌ಗೆ ತೆರಳುವ ಸಮಯವಾಗಿತ್ತು.

ಗಂಟೆ ಸದ್ದು ಕೇಳಿದ ಆ್ಯಂಡಿ ''ಏನಾರ ಅನ್ನು, ಇಡೋ ಹೆಸರಿನ ಅರ್ಥಕ್ಕೂ, ವ್ಯಕ್ತಿಗೂ ಏನೇನೂ ಸಂಬಂಧ ಇರಲ್ಲ ಕಣ್ರೋ. ಕ್ರಾ ್ಯಗ್ ವೈಟ್ ಅಂತ ಹೆಸರು ಇಟ್ಕೋಂಡಿರ್ತಾನೆ, ನೋಡಿದ್ರೆ ಆತ ಕರಿಯ ಆಗಿರ್ತಾನೆ. ಜೋಹನ್ ಬ್ಲಾಕ್ ಹೆಸರು ಕೇಳಿ ಕರ್‍ರಗಿರ್ಬೇಕು ಅಂದ್ಕೋತೀವಿ, ಆದ್ರೆ ಬಿಳಿಯ ಆಗಿರ್ತಾನೆ. ನಮ್ಮಲ್ಲಿ ಕರಿಯಣ್ಣ ಅನ್ನೋ ಹೆಸರಿನ ವ್ಯಕ್ತಿ ಬೆಳ್ಳಗೆ, ಶ್ವೇತ ಅನ್ನೋ ಹೆಸರಿನ ಹುಡುಗಿ ಕಪ್ಪಗೆ ಇರೋ ಹಾಗೆ. ಕೈಯಲ್ಲಿ ಕಾಸಿರೋಲ್ಲ ಅಮೀರ್ ಖಾನ್, ಐಶ್ವರ್ಯ ಹೆಸರಿರುತ್ತೆ. ನೋಡೋಕಾಗೋಲ್ಲ ಸೌಂದರ್ಯ ಅನ್ನೊ ಹೆಸರಿರುತ್ತೆ, ಆ ಹೆಸರಿನವರು ಯಾರಿರಬಹುದು? ಅಂತ ಸುತ್ತಮುತ್ತ ಹುಡುಕಬೇಕಾಗುತ್ತೆ. ವಿಚಿತ್ರ ಜನಗಳು, ವಿಚಿತ್ರ ಹೆಸರುಗಳು ಎಂದು ಚರ್ಚೆಗೆ ಒಂದು ಅಂತ್ಯ ಕೊಟ್ಟ ಆ್ಯಂಡಿ. ಎಲ್ಲರೂ ಎದ್ದು ಎಂದಿನಂತೆ ಮೈಮುರಿದು ಇಂಡೋರ್ ಗೇಮ್ಸ್‌ಗೆ ಲೇಟಾಯಿತೆಂದು ಚಹಾದಂಗಡಿಯ ಕಡೆಗೆ ಹೆಜ್ಜೆ ಹಾಕಿದರು.

●

---

## ಟೈಂ ಪಾಸ್

ಶ್ರೀಪತಿ ರಸ್ತೇಲಿ ನಿಂತ್ಕೊಂಡು ಪೇಪರ್ ತಿರುವಿ ಹಾಕ್ತಾ ಇರ್ತಾನೆ. ಅಲ್ಲಿಗೆ ಭೂಪತಿ ಬರ್ತಾನೆ

ಭೂಪತಿ ಕ್ಷಮಿಸಿ, ಇಲ್ಲಿ ನರಸಿಂಹ ರಾವ್ ಅನ್ನೋರ ಮನೆ ಎಲ್ಲಿದೆ?

ಶ್ರೀಪತಿ ಯಾವ ನರಸಿಂಹರಾವ್, ಪ್ರಧಾನಿ ಆಗಿದ್ರಲ್ಲ ಅವರಾ, ಅವರು ಸತ್ತುಹೋದ್ರಲ್ಲ.

ಭೂಪತಿ ಅವರಲ್ರೀ, ಟಿವಿ ಕಲಾವಿದರಿಗೆ ಮೇಕಪ್ ಮಾಡ್ತಾರಲ್ಲ ಅವರು.

ಶ್ರೀಪತಿ ಓ ಅವರಾ, ಟಿವಿ ನಟಿಯೊಬ್ಬಳಿಗೆ ಮೇಕಪ್ ಮಾಡುವಾಗ ಎಲ್ಲೆಲ್ಲೋ ಮುಟ್ಟಿ ಒದೆ ತಿಂದಿದ್ರಲ್ಲ ಅವರಾ.

ಭೂಪತಿ ಅದೇನೋ ನನಗೆ ಗೊತ್ತಿಲ್ಲ, ಅವರ ಮನೆ ಎಲ್ಲಿದೆ ಅಂತ ಹೇಳಿದ್ರೆ.

ಶ್ರೀಪತಿ ಯಾಕೆ, ನೀವು ಟಿವಿ ಸೀರಿಯಲ್ ತೆಗಿತಾ ಇದೀರಾ?

ಭೂಪತಿ ಅದೆಲ್ಲ ನಿಮಗ್ಯಾಕ್ರೀ, ಅಡ್ರೆಸ್ ಗೊತ್ತಿದ್ರೆ ಗೊತ್ತಿದೆ ಅನ್ನಿ ಇಲ್ದಿದ್ರೆ ಇಲ್ಲಾ ಅನ್ನಿ.

ಶ್ರೀಪತಿ ಈತರ ಎಲ್ಲ ಮಾತಾಡಿದ್ರೆ ಗೊತ್ತಿದ್ರೂ ಗೊತ್ತಿಲ್ಲ ಅಂತೀನಿ. ನಾ ಕೇಳೀದ್ರಲ್ಲಿ ಏನ್ರೀ ತಪ್ಪು, ಟಿವಿ ಸೀರಿಯಲ್ ತೆಗೀತಾ ಇದ್ರೆ ತೆಗಿತಾ ಇದೀನಿ ಅನ್ನಿ ಇಲ್ದಿದ್ರೆ ಇಲ್ಲ ಅನ್ನಿ, ತೆಗಿತಾ ಇದೀನಿ ಅಂದ್ರೆ ನಿಮ್ಮನ್ನ ಬಂದು ಪಾರ್ಟ್ ಕೇಳಿಬಿಡ್ತೀನಾ.

ಭೂಪತಿ ನಿಮ್ಮ ಮುಖಕ್ಕೆ ಟಿವಿ ಸೀರಿಯಲ್ಲಲ್ಲಿ ಪಾರ್ಟ್ ಕೊಟ್ಟ ಹಾಗೇ ಈಗೇನು ಅಡ್ರೆಸ್ ಹೇಳ್ತೀರೋ ಇಲ್ವೋ?

ಶ್ರೀಪತಿ ಹೇಳ್ತೀನಿ ಇರಿ, ಅವರು ಮೊದ್ಲು ಇಲ್ಲೇ ಇದ್ರು, ಆದ್ರೆ ಮನೆ ಬಾಡಿಗೆ ಕಟ್ಟದೆ ಓನರ್ರು ಅವರನ್ನ ಒದ್ದು ಓಡಿಸಿದ್ರು ಅಂತ ಜನ ಮಾತಾಡ್ಕೋತಾ ಇದ್ರು, ನಿಮಗೂ ಅವರು ಸಾಲ ಗೀಲ ಏನಾದ್ರೂ ಕೊಡಬೇಕಾ?

ಭೂಪತಿ ರೀ ಅದೆಲ್ಲ ನಿಮಗ್ಯಾಕ್ರೀ, ಹೆಚ್ಗೆ ಮಾತು ಬೇಡ, ಅಡ್ರೆಸ್ ಗೊತ್ತಿದ್ಯಾ?

ಶ್ರೀಪತಿ ಏನ್ರೀ ಆ ತರ ರೋಫ್ ಹೊಡೀತೀರ, ಅಡ್ರೆಸ್ ಗೊತ್ತಿದೆ ಆದ್ರೆ ಹೇಳಲ್ಲ ಹೋಗ್ರೀ ಏನ್ರೀ ಮಾಡ್ಕೊತೀರ?

ಭೂಪತಿ ನಾನೇನು ಮಾಡ್ಕೊತೀನಾ ಇನ್ಯಾರನ್ನಾದ್ರೂ ಕೇಳ್ಕೋತೀನಿ, ನಿಮ್ಮ ಸಹವಾಸವೇ ಬೇಡ (ನಾಲ್ಕು ಹೆಜ್ಜೆ ಇಡ್ತಾನೆ)

ಶ್ರೀಪತಿ ರೀ ಬನ್ರೀ ಇಲ್ಲೀ, ಅಲ್ನೋಡಿ ಮೇಕಪ್ ಮಾಡೋ ನರಸಿಂಹರಾವ್ ಮನೆ ಎದುರಿಗೇ ಇದೆ, ನಂಗೆ ಸ್ವಲ್ಪ ಟೈಂ ಪಾಸ್ ಆಗಬೇಕಿತ್ತು, ಅದಕ್ಕೆ ನಿಮ್ಮನ್ನ ಕೆಣಕಿದೆ. ಚೆನ್ನಾಗಿ ಟೈಂ ಪಾಸ್ ಆಯ್ತು ಬಿಡಿ. ಇನ್ನು ನೀವು ಅವರ ಮನೆಗೆ ಹೋಗಬಹುದು.

ಭೂಪತಿ (ಹಿಂದಕ್ಕೆ ಬಂದು) ನನಗೂ ಗೊತ್ತು ಅವರ ಮನೆ ಎದುರಿಗೇ ಇದೆ ಅಂತ. ನನಗೂ ಸ್ವಲ್ಪ ಟೈಂ ಪಾಸ್ ಆಗಬೇಕಿತ್ತು ಅದಕ್ಕೇ ನಿಮ್ಮನ್ನು ಮಾತಾಡಿಸ್ತಾ ನಿಂತ್ಕೊಂಡೆ. ನನಗೇನು ಅವರತ್ರ ಕೆಲಸ ಇಲ್ಲ ಇನ್ನು ನಾನೇಕೆ ಅವರ ಮನೆಗೆ ಹೋಗ್ಲಿ ನನಗೆ ಬೇರೆ ಕೆಲಸ ಇದೆ ಬರ್ತೀನಿ.

ಕ್ಯಾಮೆರಾ...ಆಕ್ಷನ್...ಕಟ್

# ಕಟೌಟ್‌ಗೆ ಕಂಬಳಿ

**- ಎಂ.ಕೆ. ಭಾಸ್ಕರ ರಾವ್**

**ಬೆ**ಸ್ತರ ಬದುಕು ಬವಣೆಯ ಕಥಾವಸ್ತುವೊಂದನ್ನು ಇಟ್ಟುಕೊಂಡು ಚಲನ ಚಿತ್ರ ನಿರ್ಮಿಸುವ ಆಶಯದೊಂದಿಗೆ ಆ ಕಾಲದ ಬಹುಜನಪ್ರಿಯ ನಟನನ್ನು ನಮ್ಮ ಕಥಾ ನಾಯಕ ಭೇಟಿಯಾದರು. ಆ ಹೀರೋ ಆ ವೇಳೆಗೆಲ್ಲ ವಾಣಿಜ್ಯಕ ಸಿನಿಮಾ ಕ್ಷೇತ್ರದಲ್ಲಿ ಬಹಳ ದೊಡ್ಡ ಹೆಸರಾಗಿದ್ದರು. ಅವರನ್ನೇ ನಾಯಕ ಪಾತ್ರಕ್ಕೆ ಒಲಿಸುವ ಉಮೇದು ಉತ್ಸಾಹೀ ಕನಾ ಅವರದು. ನಿರ್ಮಾಪಕರಿಗೆ ಮಾತ್ರ ಹೀರೋ ಕಾಲ್‌ಶೀಟ್ ಸಿಗುವ ವಿಚಾರದಲ್ಲಿ ಅನುಮಾನ. ವಯಸ್ಸಿನಲ್ಲಿ ಕಿರಿಯನಾದರೂ ಹೀರೋ ಮನ ಒಲಿಸುವ ಧೈರ್ಯದಲ್ಲಿ ಭೇಟಿ ನಡದೇ ಹೋಯಿತು. ಉದ್ಯಮ ದಿಗಿಲು ಬೀಳುವ ರೀತಿಯಲ್ಲಿ ಹೀರೋ ಕಾಲ್‌ಶೀಟ್ ಕೊಟ್ಟಿದ್ದೂ ಆಯಿತು.

ದಿಗಿಲು ಬೀಳಲು ಕಾರಣ, ಕಥಾವಸ್ತು. ಅದರಲ್ಲಿ ಮೂರು ನಾಲ್ಕು ಬಿಡಿ, ಒಂದೇ ಒಂದು ಫೈಟಿಂಗ್ ಸೀನೂ ಇರಲಿಲ್ಲ. ಕಥಾ ನಾಯಕಿ ಬೆಡುಗಿಯೊಂದಿಗೆ ಮಳೆಯಲ್ಲಿ ತೋಯುತ್ತ ಕುಣಿಯುವ ದೃಶ್ಯವೂ ಇರಲಿಲ್ಲ. ಇದಕ್ಕಿಂತ ಮಿಗಿಲಾಗಿ ಚಿತ್ರದ ಆರಂಭದಿಂದ ಕೊನೆಯವರೆಗೂ ಹೀರೋನ ಉಡುಪು ಎಂದರೆ ಬೆಸ್ತರ ಉಡುಗೆತೊಡುಗೆ ಮಾತ್ರ. ಏನದು ಬೆಸ್ತರ ಉಡುಪು...?

ಮೀನುಗಾರರು ಸಾಮಾನ್ಯವಾಗಿ ಸಮುದ್ರ ದಂಡೆ ವಾಸಿಗಳು. ಅಲ್ಲೇ ಗುಡಿಸಲು ಜೋಪಡಿಯಲ್ಲಿ ಅವರ ವಾಸ್ತವ್ಯ. ದೋಣಿಯಲ್ಲಿ ಸಮುದ್ರದಲ್ಲಿ ಸಾಗುತ್ತ ಬಲೆ ಹಾಕಿ ಮೀನು ಹಿಡಿದು ತಂದು ಮಾರಿ ಬದುಕು ಸವೆಸುವವರು. ಅವರ ಉಡುಪು ಎಂದರೆ ಸೊಂಟದ ಕೆಳಗೆ ಒಂದು ತುಂಡು ಬಟ್ಟೆ, ಅದರ ಮೇಲೆ ಬನಿಯನ್ ಮಾದರಿಯ ಒಂದು ವಸ್ತ್ರ. ತಲೆಗೆ ಸುತ್ತಿಕೊಳ್ಳಲು ಹಾಗೂ ಬೆವರು ಒರೆಸಿಕೊಳ್ಳಲು ಅನುಕೂಲವಾಗುವ ತುಂಡು ವಸ್ತ್ರ.

ಆ ಹೀರೋ ತಮ್ಮ ಚಿತ್ರ ಜೀವನದಲ್ಲಿ ಎಂದೂ ಈ ಬಗೆಯ ವಸ್ತ್ರ ಧರಿಸಿ ಕ್ಯಾಮೆರಾ ಎದುರಿಸಿದ ದಾಖಲೆಯೇ ಇರಲಿಲ್ಲ. ಅವರು ಒಪ್ಪಿದರೂ ಅವರ ಸಲಹೆಗಾರರು ಒಪ್ಪೋಲ್ಲ ಎಂಬ ಭಾವನೆ ಜೋರಾಗಿತ್ತು. ಹಾಗೆಂದೇ ಅವರ ಒಪ್ಪಿಗೆ ಸುದ್ದಿ ಬಂದಾಕ್ಷಣವೇ ಉದ್ಯಮ ದಿಗಿಲುಬಿದ್ದಿತ್ತು. ಹೀಗೂ ಉಂಟೆ ಎಂದು ಹುಬ್ಬೇರಿಸಿತ್ತು. ಆದರೆ ಆ ಹೀರೋ ಎಲ್ಲರ ನಿರೀಕ್ಷೆಗಳನ್ನು ಮೀರಿ ಕಾಲ್‌ಶೀಟ್ ಕೊಟ್ಟರು. ಚಿತ್ರೀಕರಣ ಸಾಂಗವಾಯಿತು. ರಾಜ್ಯದ ಉದ್ದಗಲಕ್ಕೆ ಬಿಡುಗಡೆಯೂ ಆಯಿತು.

ಚಿತ್ರ ಬಿಡುಗಡೆಯಾದಾಗ ಛಳಿಗಾಲದ ಸೀಸನ್ನು. ಮೈ ಥರಗುಟ್ಟಿಸುವ ಛಳಿ. ಛಳೀ ಛಳಿ ತಾಳೆನು ಈ ಛಳಿಯಾ ಎಂದು ಯಾರೂ ಹಾಡಬೇಕಾದಂಥ ವಾತಾವರಣ. ರಾತ್ರಿ ಹಾಗಿರಲಿ ಮ್ಯಾಟಿನಿ ಶೋಗೂ ಪ್ರೇಕ್ಷಕರು ಸ್ವೆಟರ್ ಧರಿಸಿಯೋ ಶಾಲು ಸುತ್ತಿಕೊಂಡೋ ಹೋಗಬೇಕಾದ ನೈಜ ಛಳಿಗಾಲ. ದೊಡ್ಡ ಹೀರೋನ ಸಿನಿಮಾ ಎಂದಮೇಲೆ ಕಟೌಟ್

ಇಲ್ಲದಿರುತ್ತದೆಯೇ? ಬೆಂಗಳೂರೂ ಸೇರಿದಂತೆ ಎಲ್ಲೆಲ್ಲಿ ಚಿತ್ರ ತೆರೆಗೆ ಬಂದಿತ್ತೋ ಆ ಕೇಂದ್ರಗಳಲ್ಲೆಲ್ಲ ಚಿತ್ರ ಮಂದಿರಗಳ ಮುಂದೆ ಭಾರೀ ಎತ್ತರದ ಕಟೌಟ್‌ಗಳನ್ನು ಇಟ್ಟು ಅದಕ್ಕೆ ಹಾರ ತುರಾಯಿ ಅಲಂಕಾರ ಮಾಡಲಾಗಿತ್ತು.

ಚಿತ್ರ ಬಿಡುಗಡೆಯಾದ ಎರಡನೇ ದಿವಸವಿರಬೇಕು. ಯಾವುದೋ ಕೆಲಸದ ಮೇಲೆ ಶಿವಮೊಗ್ಗದಲ್ಲಿದ್ದ ನಾನು ಸಿನಿಮಾ ನೋಡಲು ನೈಟ್‌ಶೋಗೆ ಚಿತ್ರಮಂದಿರಕ್ಕೆ ಹೋದೆ. ಜನ ಜಂಗುಳಿ ಇತ್ತು. ಎಲ್ಲರೂ ಕುತೂಹಲದಿಂದ ನೋಡುತ್ತಿದ್ದ ಕಡೆಗೆ ನನ್ನ ಕಣ್ಣೂ ಕತ್ತೂ ಹೊರಳಿತು. ನೋಡಿದರೆ, ಅರೆ ಬಪ್ಪರೇ ಎನಿಸಿತು. ಸುಮಾರು 20 ಅಡಿ ಎತ್ತರ ಕಟೌಟ್‌ನಲ್ಲಿ ನಮ್ಮ ನಾಯಕ ಕಂಗೊಳಿಸುತ್ತಿದ್ದಾರೆ. ಅವರ ದೇಹವನ್ನು ಕಂಬಳಿ ಮುಚ್ಚಿತ್ತು. ಅಷ್ಟು ಎತ್ತರದ ಕಟೌಟ್ ಮುಚ್ಚುವ ಅಗಲ ಉದ್ದದ ಕಂಬಳಿ ಎಲ್ಲಿ ಸಿಗುತ್ತದೆ. ಈ ಅನುಮಾನ ನಿಮ್ಮಂತೆ ನನ್ನನ್ನೂ ಕಾಡಿತು. ಅದಕ್ಕೆ ಅಭಿಮಾನಿಗಳಲ್ಲಿ ಉತ್ತರವಿತ್ತು.

ಐದಾರು ಕಂಬಳಿಗಳನ್ನು ಒಂದರ ಪಕ್ಕ ಒಂದರಂತೆ ಇಟ್ಟು ಜೋಡಿಸಿ ಹೊಲಿದು ಈ ಕಟೌಟ್‌ಗೆ ಹೊದಿಸಿದ್ದರು. ಛಳಿಯಲ್ಲಿ ಸ್ವತಃ ಸಣ್ಣಗೆ ನಡುಗುತ್ತಿದ್ದರೂ ಕಟೌಟ್‌ಗೆ ಕಂಬಳಿ ಹೊದಿಸಿ ಅಲಂಕಾರ ಮಾಡಿದ್ದರ ಹಿಂದಿನ ಲಾಜಿಕ್ ಆಗಲೀ ರಹಸ್ಯವಾಗಲೀ ನನಗಂತೂ ಅರ್ಥವಾಗಲಿಲ್ಲ. ಚಿತ್ರ ಮಂದಿರದ ಬಾಗಿಲು ತೆರೆಯುವುದನ್ನು ನನ್ನಂತೆಯೇ ಕಾಯುತ್ತಿದ್ದ ಒಂದಿಬ್ಬರನ್ನು ಏನು ಯಾಕೆ ಹೀಗೆ ಎಂದು ಕೇಳಿದೆ. ಅವರಿಗೂ ಅರ್ಥವಾಗಿರಲಿಲ್ಲ. ಗೋಣು ಅಲ್ಲಾಡಿಸಿ ಕೈಚೆಲ್ಲಿದರು.

ಅದೇ ಕಾಂಪೌಂಡಿನಲ್ಲಿ ಸಂಭ್ರಮಿಸುತ್ತಿದ್ದ ಕೆಲವರನ್ನು ಕಂಡಾಗ ಇವರಲ್ಲಿ ಉತ್ತರ ಸಿಗಬಹುದೆಂದುಕೊಂಡು ''ಏನಣ್ಣಾ ಯಾಕೆ ಇದು'' ಎಂದು ಕೇಳಿದೆ. ಆ ಮಹರಾಯ ಮೇಲಿನಿಂದ ಕೆಳಗಿನವರೆಗೆ ನನ್ನನ್ನು ನೋಡಿದ. ''ಪೆದ್ದು ಮುಂಡೇದೆ, ಅಷ್ಟೂ ಗೊತ್ತಾಗೋಲ್ವೇ'' ಎಂಬ ನೋಟ ಬೀರಿದ. ಆದರೆ ನಿರಾಶೆ ಮಾಡಲಿಲ್ಲ. ''ಇಲ್ಲಾ ಸಾರ್, ಛಳಿ ಅಲ್ವಾ, ನೀವೂ ನಡುಗ್ತಾ ಇದ್ದೀರಲ್ವಾ ಸಾರ್, ನಮ್ಮ ಹೀರೋ ಬರಿ ಮೈಲಿ ಛಳಿಗಾಳಿಗೆ ಎಷ್ಟು ದಿನಾಂತಾ ನಿಲ್ಲಬೇಕು ಹೇಳಿ, ಅದಕ್ಕೆ ನಾವೆಲ್ಲ ಸೇರಿ ಈ ಹೊದಿಕೆ ಏರ್ಪಾಟು ಮಾಡಿದ್ದೇವೆ...''

ಅಲ್ಲಪ್ಪಾ ಕಟೌಟ್‌ಗೆ ಕಂಬಳಿ ಹೊದೆಸಿದರೆ ಏನು ಪ್ರಯೋಜನ ಎಂದು ಕೇಳುವ ಮನಸ್ಸಾಯಿತು. ಹಾಗೆ ಕೇಳಿದ್ದೇ ಹೌದಾಗಿದ್ದರೆ ನನ್ನ ಮೈಕೈ ಬಿಸಿಯಾಗುವ, ಮೆತ್ತಗಾಗುವ ಸಾಧ್ಯತೆ ಇದ್ದೇ ಇತ್ತು. ಒಳ್ಳೆ ಕೆಲಸ ಮಾಡಿದಿರಿ ಎಂಬಂತೆ ಅವರಿಗೆ ಒಂದು ಲುಕ್ ಕೊಟ್ಟು ಚಿತ್ರಮಂದಿರದ ಒಳಗೆ ತೂರಿಕೊಂಡೆ.

●

---

ಉಳಿದವರೆಲ್ಲರೂ ಹಸೀ ಸುಳ್ಳುಗಾರರಾಗಿದ್ದರಿಂದಲೇ ಹರಿಶ್ಚಂದ್ರ ಸತ್ಯಕ್ಕೆ ಹೆಸರಾದ. ಎಲ್ಲರೂ ಸತ್ಯವಂತರೇ ಆಗಿದ್ದಿದ್ದರೆ ಹರಿಶ್ಚಂದ್ರನ ಹೆಸರನ್ನು ನಾವೂ ಕೇಳುತ್ತಿರಲಿಲ್ಲ. ಅವನೂ ಹತ್ತರೊಡನೆ ಹನ್ನೊಂದು ಆಗಿಬಿಡುತ್ತಿದ್ದ

– ಬೀChi